MR. DEPUTY SPEAKER.—If the hon. Member wa not vigilants enough to raise it at the proper time, I cannot help him now.

ಶ್ರೀ ಎಚ್. ಡಿ. ದೇವೇಗೌಡ.—ಪ್ರಜಾಪ್ರಭುತ್ವದ ಬಗ್ಗೆ ಯಾವ ಒಂದು ಸೂಚನೆಯನ್ನು ರಾಜ್ಯಪಾಲರು ಅವರ ಭಾಷಣದಲ್ಲಿ ನಮೂದಿಸಿಲ್ಲ. ಇದರ ಬಗ್ಗೆ ನಾನು ವ್ಯಾಖ್ಯಾನ ಮಾಡುತ್ತಿದ್ದೇನೆ. ಸ್ಥಳೀಯ ಸಂಸ್ಥೆಗಳ ಮಾನ್ಯ ಸದಸ್ಯರು ಈಗ ಏನು ಪೌರಸಭೆಗಳಿಗೆ ಚುನಾವಣೆಗಳನ್ನು ನಡೆಸುವುದನ್ನು ಬಿಟ್ಟು ಅಡಳಿತ ಅಧಿಕಾರಿಯನ್ನು ನೇಮಕಮಾಡಿದ್ದಾರೋ ಅದರ ಒಂದು ಹಿನ್ನೆಲೆಯನ್ನು ನಾವು ಅರ್ಥಮಾಡಿದರೆ ಬಹುಶಃ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇವರಿಗೆ ಇಲ್ಲವೇನೋ ಎನ್ನುವ ಒಂದು ಅನುಮಾನ ಬರುತ್ತದೆ. ಏಕೆಂದರೆ ಅವರು ಈ ಆಡಳಿತದ ಅಧಿಕಾರಿಯನ್ನು ನೇಮಕ ಮಾಡುವ ಕಾಲದಲ್ಲಿ ಒಂದು ಕಾರಣವನ್ನು ಕೊಟ್ಟಿದ್ದಾರೆ. ಅದೇನೆಂದರೆ, 1971ನೇ ಜನಗಣತಿಯ ಆಧಾರದ ಮೇಲೆ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡುವ ದೃಷ್ಟಿಕೋಣದಿಂದ ಈ ಚುನಾವಣೆಗಳನ್ನು ಮುಂದೂಡಿದ್ದೇವೆ ಎಂಬುದಾಗಿ ಹೇಳಿದ್ದಾರೆ. ನಾನು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಅಕ್ಷನ್ನು ನೋಡಿದಾಗ ಅದರಲ್ಲಿ ಸೆಕ್ಷನ್ 14ರಲ್ಲಿ ಬಹಳ ಚೆನ್ನಾಗಿ ವಿವರಣೆಯನ್ನು ಕೊಟ್ಟಿದ್ದಾರೆ. ಇವತ್ತು ಶಾಸನ ಸಭೆಗಳಿಗೆ ಚುನಾವಣೆ ನಡೆಯಿತಕ್ಕ ಸಂದರ್ಭದಲ್ಲಿ ಮತದಾರರ ಪಟ್ಟಿ ಏನಿದೆಯೋ ಅದರ ಅನ್ವಯದ ಮೇಲೆ ಪೌರಸಭೆಗಳಿಗೆ ಚುನಾವಣೆ ನಡೆಯಬೇಕೆಂಬುದು ಅದರಲ್ಲಿ ಕ್ಲಿಯರ್ ಆಗಿದೆ. ಆದರೂ ಇವರು ಪೌರಸಭೆಗಳ ಚುನಾವಣೆಗಳನ್ನು ನಡೆಸುವುದನ್ನು ಬಿಟ್ಟು ಅಲ್ಲಿಗೆ ಆಡಳಿತ ಅಧಿಕಾರಿಗಳನ್ನು ನೇಮಕಮಾಡಿ ಪ್ರಜಾಪ್ರಭುತ್ವಕ್ಕೆ ಒಂದು ತಿಲಾಂಜಲಿಯನ್ನೇ ಅರ್ಪಿಸಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಅದನ್ನೇ ರಾಜ್ಯಪಾಲರು ಹೇಳಿದ್ದಾರೆ. ಆಡಳಿತ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಇವರನ್ನು ಬಿಟ್ಟರೆ ಈ ದೇಶದಲ್ಲಿ ಎಲ್ಲರೂ ಭ್ರಷ್ಟಾಚಾರರು ಎಂಬ ಅಭಿಪ್ರಾಯವನ್ನು ಇವರು ಹೊಂದಿರುವುದು ಖಂಡಿತವಾಗಿ ಸರಿಯಲ್ಲ. ಆದ್ದರಿಂದಲೇ ಆಡಳಿತ ಕಾಂಗ್ರೆಸ್ಸಿಗೆ ವಿರೋಧವಾಗಿರತಕ್ಕ ಯಾವ ಸಂಘ ಸಂಸ್ಥೆಗಳಿರಲಿ, ಅವನ್ನು ರದ್ದುಮಾಡಿ ಅವರೇ ಸರ್ವಾಧಿಕಾರದಿಂದ ರ್ಯಾಜಾಡಳಿತವನ್ನು ಸರ್ವಹಿಸಿಕೊಂಡು ಹೋಗಬೇಕೆಂಬ ಉದ್ಧಟತನದಲ್ಲಿ ಕೈಹಾಕಿದ್ದಾರೆ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷಗಳ ಹೆಸರು ಇರಬಾರದೆಂಬ

ಕೆಲಸಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದು ಒಂದು ಅವರಿಗೆ ವಿಪತ್ಕಾರಿಯು ಹಾಗೂ ಗಂಡಾಂತರದ ಬೆಳವಣಿಗೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರ ಬಗ್ಗೆ ನನಗೆ ವೈಯಕ್ತಿಕವಾಗಿ ಯಾವ ಒಂದು ಅಗೌರವ ಸೂಚಿಸಬೇಕೆಂಬ ಮನಸ್ಸು ಇಲ್ಲವೇ ಇಲ್ಲ. ನಿನ್ನೆ ನಾವು ಈ ಸಭೆಯಿಂದ ಈ ಸರ್ಕಾರದ ಆಡಳಿತದ ವೈಫಲ್ಯತೆಯನ್ನು ಧಿಕ್ಕರಿಸಿ ಹೊರಗೆ ಹೋಗಿದ್ದೇವೆಯೇ ಹೊರತು ಮತ್ತೇನೂ ಬೇರೆ ಕಾರಣವಿಲ್ಲ. ಮಾನ್ಯ ಸ್ನೇಹಿತರೊಬ್ಬರು ಭಾಷಣ ಮಾಡುತ್ತಾ, ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷವಿಲ್ಲರ್ತಕ್ಕ ಶಾಸಕರ ವರ್ತನೆ 'ಹುಡುಗಾಟಿಕೆ' ಎಂಬುದಾಗಿಯೂ 'ಚ್ಯೆಲ್ಡಿಷ್' ಎಂಬುದಾಗಿಯೂ ಹೇಳಿದರು. ಬಹಳ ಒಳ್ಳೆಯದು. ಏಕೆಂದರೆ, ನಾನು ಅದನ್ನು ಸ್ವೀಕಾರಮಾಡುತ್ತೇನೆ. ಅವರು ನಾವು ಈ ಸಭೆಯಿಂದ ನಿನ್ನೆ ಹೊರಗೆ ಹೋದಮೇಲೆ ಈ ವಾಕ್ಯಗಳನ್ನು ಹೇಳಿದ್ದಾರೆ. ಅವರು ಈಗ ಈ ಸಭೆಯಲ್ಲಿಲ್ಲವೆಂದು ಕಾಣುತ್ತದೆ. ಆದರೂ ಅವರಿಗೆ ನಾನು ಒಂದು ಸೂಚನೆಯನ್ನು ಕೊಡುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಪ್ರಥಮದಲ್ಲಿಯೇ ಈ ದೇಶದಲ್ಲಿ ಇನ್ನು ಮುಂದೆ ಮಂತ್ರಿಗಳ ವರ್ತನೆ ಹೇಗಿರಬೇಕು, ಶಾಸಕರ ವರ್ತನೆ ಹೇಗಿರಬೇಕು ಎನ್ನುವುದಕ್ಕೆ ಒಂದು ಕೋಡ್ ಆಫ್ ಕಾಂಡಕ್ಟ್ ರಚಿಸುತ್ತೇವೆಂದು ಮಾನ್ಯ ಶ್ರೀ ದೇವರಾಜ್ ಅರಸ್. ಅವರು ಹೇಳಿದ್ದರು. ಮಾನ್ಯ ಶ್ರೀ ಚನ್ನಬಸಪ್ಪನವರೇ ಅದನ್ನು ಉಲ್ಲೇಖ ಮಾಡಿದರು. ಇವತ್ತು ನಾವು ಮಾನ್ಯ ಶ್ರೀ ಚನ್ನಬಸಪ್ಪನವರ ಕೋಡ್ ಆಫ್ ಕಾಂಡಕ್ಟ್ ವಿಚಾರ ಮಾಡಬೇಕಾಗುತ್ತದೆ. ಚಿಕ್ಕಮಗಳೂರು ಟಿ. ಬಿ. ಯಲ್ಲಿ ಮಂತ್ರಿಯಾಗಿರುವವರು ತಮ್ಮ ಬಟ್ಟೆಗಳನ್ನೆಲ್ಲಾ ಕಳಚಿಬಿಟ್ಟು ಲಂಗೋಟಿ ಹಾಕಿಕೊಂಡು ಓಡಾಡತಕ್ಕ ದೃಶ್ಯ ನರಿಯೇ ? ಅಂದಮೇಲೆ ನಿನ್ನೆ ನಡೆದಂಥ ಘಟನೆ ಹಾಗೂ ವಿರೋಧಪಕ್ಷಗಳ ವರ್ತನೆ ಆ ರೀತಿ ಆಗಬಾರದು ಎಂಬುದಾಗಿ ಅವರು ಹೇಳತಕ್ಕ ಜಾಯಿತ್ಯವಾದರೂ ಏನೆಂದು ನಾನು ಪ್ರಶ್ನೆಮಾಡುತ್ತೇನೆ. ಈ ದೇಶದಲ್ಲಿ ನಿಜವಾಗಿಯೂ ಮಂತ್ರಿಗಳಾಗಿರುವವರು ಪ್ರಜಾಪ್ರಭುತ್ವದ ತತ್ವಗಳಿಗನುಸಾರವಾಗಿ ನಡೆಯುತಕ್ಕ ಅವು ಪಡೆದಿದ್ದಾರೆಯೋ ಇಲ್ಲವೋ ಎಂದು ನಾನು ಪ್ರಶ್ನೆಮಾಡಬೇಕಾಗುತ್ತದೆ. ಇವತ್ತು ಹೆಚ್ಚಿಗೆ ಈ ವಿಚಾರವನ್ನು ಬೆಳೆಸುವುದಕ್ಕೆ ಹೋಗುವುದಿಲ್ಲ. ನನ್ನ ಮಿತ್ರರೊಬ್ಬರು ವಿರೋಧಪಕ್ಷದ ನದನ್ಯರು ಯಾವ ರೀತಿ ನಡೆಯಬೇಕೆಂಬ ಬಗ್ಗೆ ಕೆಲವು ಮಾತುಗಳನ್ನು ಹೇಳಿದರು. ಆದರೆ ನಾವು ಯಾರೇ ಆಗಲೀ ಅವರಿಂದ ಉಪದೇಶ ತೆಗೆದುಕೊಂಡು ನಡೆಯಬೇಕಾದ ಅವಶ್ಯಕತೆ ಏನೂ ಇಲ್ಲವೆಂದು ನಾನು ಅವರಿಗೆ ತಮ್ಮ ಮೂಲಕ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ನಮಾಜವಾದ ಸರ್ಕಾರ ಕೇವಲ 11 ತಿಂಗಳಲ್ಲಿ ಸಾಧಿಸಿರತಕ್ಕ ಮಹಾ ಕಾರ್ಯಗಳ ಬಗ್ಗೆ ನಾವು ಈಗ ವಿಚಾರಮಾಡಬೇಕಾಗುತ್ತದೆ. ಅವು ಬಹಳ ಸೊಗಸಾಗಿವೆ. ಪ್ರಚಾರಕ್ಕೆ ನಮಾಜವಾದ, ಆಚಾರದಲ್ಲಿ ಅನೀತಿವಾದ, ಜಾರಿಗೆ ತರತಕ್ಕದ್ದು ವಿಧ್ಯಾವಾದ, ಅಂದರೆ ಸುಳ್ಳುವಾದ ಎಂಬುದಾಗಿ ಹೇಳಬಹುದು.

ಇವರ ಕಾರ್ಯಕ್ರಮಗಳೆಲ್ಲಾ ನಮಾಜವಾದದ ಕಾರ್ಯಕ್ರಮಗಳು. ಆದರೆ ಅವುಗಳಲ್ಲಿ ಒಂದರಲ್ಲೂ ದೂರಾಲೋಚನೆ ಇಲ್ಲ. ಹಾಗಿದ್ದರೂ ಜನರಿಗೆ ಆಕರ್ಷಣೀಯವಾದ ನಿರ್ಧಾರ ಇಲ್ಲವೇ ನಿರ್ಣಯಗಳನ್ನು ತೆಗೆದುಕೊಳ್ಳುವುದು ಇಂದಿನ ಸರ್ಕಾರದ ವೈಖರಿ. ಇದರ ಮೂಲ ಉದ್ದೇಶ ನೂರಕ್ಕೆ ನೂರು ಪತ್ರಿಕೆಗಳಲ್ಲಿ ಅದರಲ್ಲೂ ಮುಖಪುಟದಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಪ್ರಚಾರಕ್ಕೆ ಬಂದರೆ ಸಾಕು ಎನ್ನುವುದು. ಅದನ್ನು ಇತ್ತಲಾಗಿ ಜನರು ಓದಿದ ಕೂಡಲೆ ಸರ್ಕಾರ ಇನ್ನೇನು ನಮ್ಮನ್ನೆಲ್ಲಾ ಸ್ವರ್ಗ ಲೋಕಕ್ಕೆ ಕರೆದುಕೊಂಡು ಹೋಗುತ್ತಾರೆಂಬ ಭಾವನೆ ಅವರ ತಲೆಯಲ್ಲಿ ಮೈದೋರಬೇಕು. ಆದರೆ ಮೊದಲು ಮೊದಲು ಪತ್ರಿಕೆಗಳವರೂ ಕೂಡ ಸರ್ಕಾರದತ್ತ ವಾಲಿದ್ದವರು ಇತ್ತೀಚೆಗೆ ಹೊಗಳುವುದನ್ನು ಸ್ವಲ್ಪ ಸ್ವಲ್ಪವಾಗಿ ಕೈಬಿಡುತ್ತಾ ಬಂದಿದ್ದಾರೆ. ಈ ದಿವಸ ಆಡಳಿತ ನಡೆಸುತ್ತಿರುವ ಸರ್ಕಾರದ ಆಡಳಿತ ವೈಖರಿ ಹೇಗಿದೆ ಎಂದರೆ ಮೊದಲು ನಿರ್ಣಯವನ್ನು ತೆಗೆದುಕೊಂಡಾಗ ಜನರಿಗೆಲ್ಲಾ ಸುಖಡಿಯನ್ನು ಮಾರಾಟ ಮಾಡುತ್ತೇವೆ ಎಂದು ಹೇಳಿ ನಿರ್ಣಯಮಾಡಿ ಆನಂತರ ಕೆಲವು ದಿನಗಳ ಮೇಲೆ ಸುಖಡೀ ಮಾರಾಟವನ್ನು ಸರ್ಕಾರದವರು ಕೈಬಿಟ್ಟಿದ್ದಾರೆ ಎಂದು ಮತ್ತೆ ಪ್ರಕಟಣೆ ಹೊರಡಿಸುವುದು ಇದು ಇಂದಿನ ಸರ್ಕಾರದ ಆಡಳಿತ ವೈಖರಿ. ಆದರೆ ಹನ್ನೊಂದು ತಿಂಗಳಲ್ಲಿ ಏನು ಆಡಳಿತ ನಡೆಸುವುದಕ್ಕೆ ಸಾಧ್ಯ ? ಯಾವುದನ್ನು ಉತ್ಪಾದಮಾಡಿಸುವುದಕ್ಕೆ ಸಾಧ್ಯ ! ಆದರೆ ಈಗ ಸಭೆಯಲ್ಲಿ ಆ ಶ್ರೀಮಾನ್ ಸುಬ್ಬಯ್ಯನೆಟ್ಟರು ಮತ್ತು ಆ ಇನ್ನೊಬ್ಬ ಸ್ನೇಹಿತರು ಸಭೆಯಲ್ಲಿಲ್ಲ, ಹೊರಗೆ ಹೋಗಿದ್ದಾರೆ ; ಅವರೂ ಇದ್ದಿದ್ದರೆ ಚೆನ್ನಾಗಿತ್ತು. ಆದರೆ ನಾನು ಇಲ್ಲ ಸರ್ಕಾರವನ್ನು ಟೀಕೆ ಮಾಡಬೇಕೆಂಬ ಉದ್ದೇಶದಿಂದ ಮಾತನಾಡುತ್ತಿಲ್ಲ. ಆದರೆ ನಾನು ಇದನ್ನು ಏಕೆ ಇಟ್ಟು ಒತ್ತಿ ಒತ್ತಿ ಹೇಳುತ್ತಿದ್ದೇನೆಂದರೆ ನಮ್ಮ ಮುಖ್ಯ ಮಂತ್ರಿಗಳು ಒಂದು ಕಡೆಯಲ್ಲ ಮಾತನಾಡುತ್ತಾ ದೇಶದಲ್ಲಿ ಕೆಲವು ಭಾಗದಲ್ಲಿ ಜನರು ಈ ದಿವಸ ಕ್ಷಾಮಕ್ಕೆ ತುತ್ತಾಗಿ ನರಳುತ್ತಿರುವುದು ಹಿಂದೆ ಸಂಸ್ಥಾ ಕಾಂಗ್ರೆಸ್ ಇಲ್ಲಿ ಆಡಳಿತ ನಡೆಸಿದ 25

(ಶ್ರೀ ಎಚ್. ಡಿ. ದೇವೇಗೌಡ)

ವರ್ಷಗಳ ಒಂದು ಪಾಪದ ಫಲ್ಲ ಎಂದು ಹೇಳಿದ್ದಾರೆ. ಹಾಗೆ ಒಂದು ಸರ್ಕಾರವನ್ನು ಜರಿಯತಕ್ಕ ಈ ಸಮಾಜವಾದಿ ಸರ್ಕಾರದ ಆಡಳಿತ ನಡೆಸತಕ್ಕ ಈ ನದರ್ಾರರು ಕಳೆದ ಹನ್ನೊಂದು ತಿಂಗಳಲ್ಲಿ ರಾಜ್ಯದಲ್ಲಿ ಏನು ಸುಧಾರಣೆ ನಡೆಸಿದ್ದಾರೆಂಬುದನ್ನು ತಿಳಿಸುತ್ತಿದ್ದೇನೆ. ಆದರೆ ಈಗ ಸಭೆಯಲ್ಲಿ ಮುಖ್ಯ ಮಂತ್ರಿಗಳೂ ಇಲ್ಲ. ಈ ದಿವಸ ಈ ರಾಜ್ಯದಲ್ಲಿ ಯಾವುದೊಂದಕ್ಕೂ ಅಭಾವ. ಅನ್ನಕ್ಕೆ ಅಭಾವ, ಕುಡಿಯತಕ್ಕ ನೀರಿಗೆ ಅಭಾವ ಮನೆಗಳಲ್ಲಿ ಗುರಿನತಕ್ಕ ಎದ್ಯುಚ್ಚಕ್ತಿಗೂ ಅಭಾವ, ಕಬ್ಬಿಣಕ್ಕೆ ಅಭಾವ, ಉಕ್ಕಿಗೆ ಅಭಾವ, ಸಿಮೆಂಟಿಗೆ ಅಭಾವ. ಸಕ್ಕರೆಗೆ ಅಭಾವ –ಹೀಗೆ ಎಲ್ಲಾ ವಸ್ತುಗಳ ಅಭಾವದಿಂದ ಕೂಡಿದ ಇದೊಂದು ಅಭಾವ ಯುಗವಾಗಿದೆ. ಇಷ್ಟೇ ಅಲ್ಲ ಇನ್ನು ಆಡಳಿತ ನಡೆಸತಕ್ಕ ಮಂತ್ರಿ ಮಂಡಲದಲ್ಲಿ ಅಲ್ಲಿಯೂ ವಿವೇಕ ವಿಚಕ್ಷಣೆಗಳ ಅಭಾವ ಇರತಕ್ಕ ಜನರೂ ಇದ್ದಾರೆ, ನೈತಿಕ ಮಟ್ಟದ ಅಭಾವ ಇರತಕ್ಕವರೂ ಇದ್ದಾರೆ. ಈ ಎಲ್ಲಾ ಅಭಾವಗಳ ಸೃಷ್ಟಿಕರ್ತರು ಯಾರು? ಆದರೆ ದೇಶದಲ್ಲಿ ತಲೆದೋರಿರತಕ್ಕ ಕ್ಷಾಮಕ್ಕೆ ಶ್ರೀ ದೇವರಾಜ ಅರಸರು ಕಾರಣವೆಂದು ನಾನು ಹೇಳುವುದಿಲ್ಲ. ಅದು ಪ್ರಕೃತಿ ವಿಕೋಪದಿಂದ ಆದದ್ದು. ಆದರೆ ಇಂದು ಅಲ್ಲಿ ಅದು ಅಷ್ಟು ಭೀಕರ ಪರಿಣಾಮ ತಾಳುವುದರಲ್ಲಿ ಅರ್ಧ ಅದರ ಹೊಣೆಗಾರಿಕೆ ಸರ್ಕಾರದವರ ಮೇಲಿದೆ. ರಾಜ್ಯದ ಮುಖ್ಯ ಮಂತ್ರಿಗಳು ಮೊನ್ನೆ ದಾವಣಗೆರೆ ಹತ್ತಿರ ಕುಕ್ಕವಾಡದಲ್ಲಿ ಸರ್ಕಾರ ಕಾರ್ಖಾನೆಯೊಂದನ್ನು ಪ್ರಾರಂಭ ಮಾಡತಕ್ಕ ಕಾಲದಲ್ಲಿ ಹಿಂದೆ ಇದ್ದ ಸರ್ಕಾರದವರು ನಡೆಸಿದ ಆಡಳಿತವ ಪಾಪದ ಫಲ ಎಂದು ಅವರು ಹೇಳಿದ್ದಾರೆ. ಅದು ನಿಜವಾಗಿದ್ದ ಪಕ್ಷಕ್ಕೆ ಶ್ರೀಮಾನ್ ದೇವರಾಜ ಅರಸರೂ ಕೂಡ ಆ ಮಂತ್ರಿ ಮಂಡಲದಲ್ಲಿದ್ದ ಕಾರಣ ಇವರೂ ಆ ಕಂಪೆನಿಯಲ್ಲಿ ರಿಂಗ್ ಮಾಸ್ಟರ್ ಆಗಿದ್ದ ಕಾರಣ ಇವರು ಆದರಲ್ಲಿ ಶೇಕಡ 6೦ ರಷ್ಟಕ್ಕೆ ಪಾಲುದಾರರಾಗುತ್ತಾರೆ. ನಾನು ಇದನ್ನೊಂದು ರೈತ ರೋಪಾದಿಯಲ್ಲಿ ಹೇಳುತ್ತಿದೆ ನೆ. ಆದರೆ ಅವರು ಹಾಗೆ ಮಾತನಾಡಬೇಕಾಗಿದ್ದರೆ ಅವರ ದೃಷ್ಟಿ ಕೋನ ರಾಜ್ಯ ಸರ್ಕಾರದ ಮೇಲಿತ್ತೆ ಅಥವಾ ಕೇಂದ್ರ ಸರ್ಕಾರದ ಮೇಲಿತ್ತೆ ಅನ್ನುವುದು ಆ ಪತ್ರಿಕಾ ವರದಿಯಲ್ಲಿ ಸರಿಯಾಗಿ ವ್ಯಕ್ತವಾಗುತ್ತಿಲ್ಲ. ಆದರೆ ಅವರ ದೃಷ್ಟಿಕೋನ ರಾಜ್ಯ ಸರ್ಕಾರ ದತ್ತಲೇ ಇದ್ದಪಕ್ಷಕ್ಕೆ ಆ ಪಾಪಪ ಫಲದಲ್ಲಿ ಶೇ ; ೫೦ ರಷ್ಟಕ್ಕೆ ಶ್ರೀಮಾನ್ ಅರಸರೂ ಭಾಗಿಯಾಗ ಬೇಕಾಗುವುದು ಎಂಬುದನ್ನವರು ಮರೆಯಬಾರದು. ಆದರೆ ಒಂದು ಗಾಪ ಇದೆ ಪಾಪಗಳು ಪಿಫಲಗೊಂಡಾಗ ಗುದ್ದಾಟಗಳು ಪ್ರಾರಂಭವಾಗುತ್ತವೆ ಎಂದು. When arguments fail absuses begin ಎಂದು. ಈದಿವಸ ನಮ್ಮ ರಾಜ್ಯದಲ್ಲಿದಂತೆಯೇ ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಅಂದರೆ ಆಂಧ್ರ ಮಹಾರಾಷ್ಟ್ರ ವತ್ತು ಗುಜರಾತ ಗಳಲ್ಲಿ ಅಲ್ಲಿಯೂ ಭೀಕರ ಕ್ಷಾಮ ಗುಂಟಾಗಿದೆ. ಆದರೆ ಈ ದಿವಸ ಅಲ್ಲರತಕ್ಕ ಯಾವ ಮುಖ್ಯ ಮಂತ್ರಿಗಳೂ ಅಲ್ಲದ್ದ ಹಿಂದಿನ ಸರ್ಕಾರವನ್ನು ದೂಷಣೆ ಮಾಡುತ್ತಿಲ್ಲ. ಆದರೆ ಇಲ್ಲಿ ಮೈಸೂರಿನ ಒಬ್ಬ ಮುಖ್ಯ ಮಂತ್ರಿಗಳು ಮಾತ್ರ ಇದನ್ನು ಹೇಳುವುದಕ್ಕೆ ಹೊರಟ್ಟಿದ್ದಾರೆ ಏಕೆ ಇದು ? ನಾನು ಯಾವ ವ್ಯಕ್ತಿಯನ್ನೂ ಟೀಕೆ ಮಾಡುತ್ತಿಲ್ಲ. ಆದರೆ ನಾನು ನಮ್ಮ ಮುಖ್ಯ ಮಂತ್ರಿಗಳಿಗೆ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ ಅದು ಯಾರು ಮಾಡಿದ ಪಾಪವೇ ಇರಲಿ.

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು) .— ಮುಖ್ಯ ಮಂತ್ರಿಗಳು ಹೇಳಿದ್ದಕ್ಕೆ ಮಾನ್ಯ ನದಸ್ಯರು ಒಂದು ಹೆಚ್ಚಿನ ರೂಪವನ್ನು ಕೊಡುವುದಕ್ಕೆ ಹೊರಟಿದ್ದಾರೆ. ಆದರೆ ಇತ್ತೀಚೆಗೆ ಮಾನ್ಯ ವಿರೋಧ ಪಕ್ಷದ ನಾಯಕರ ಭಾಷಣದ ವೈಖರಿ ಬಹಳ ಮನರಂಜಕವಾಗುವುದಕ್ಕೆ ಪ್ರಾರಂಭ ಆಗಿದೆ. ಅವರು ಹೇಳಿದ್ದೆಲ್ಲಾ ಅಲ್ಲಿನ ಆ ಅಪ್ಪರ್‌ಕೃಷ್ಣಾ ಇತ್ಯಾದಿ ನದಿಗಳ ನೀರಾವರಿ ಕಾಮಗಾರಿಗಳನ್ನು ಕೈಗೊಂಡಿದ್ದರೆ ಇಂದು ಅಲ್ಲಿ ಪರಿಸ್ಥಿತಿ ಇಷ್ಟು ಬಿಗಡಾಯಿಸುವುದಕ್ಕೆ ಅವಕಾಶ ಪಾಗುತ್ತಿರಲಿಲ್ಲ ಎಂದು ಅಷ್ಟನ್ನು ಹೇಳಿದರು. ಇಷ್ಟೇ ಅವರ ಭಾವನೆ.

ಶ್ರೀ ಎಚ್. ಡಿ. ದೇವೇಗೌಡ.—ಇರಬಹುದು. ಪಾಪದ ಕಾರ್ಯವನ್ನು ಯಾರು ಮಾಡಿದರೂ ಅದು ಪಾಪದ ಕಾರ್ಯವೇ. ಆದರೆ ಅದನ್ನು ನರಿಪಡಿಸತಕ್ಕದ್ದು ಇಂದಿನ ಸರ್ಕಾರದ ಕರ್ತವ್ಯ. ಆದರಲ್ಲಿ ಈ ಸರ್ಕಾರ ತನ್ನ ವೈಫಲ್ಯತೆಯನ್ನು ಜಾಹಿರಾತು ಮಾಡಿಕೊಳ್ಳುವುದಕ್ಕಾಗಿ ಅವರು ಹೀಗೆರ್ಲಾ ಭಾಷಣ ಮಾಡುತ್ತಿದ್ದಾರೆಂದು ನನಗನಿಸುತ್ತಿದೆ. ಆದರೆ ಆವರು ಇದೇ ಟೀಕೆಯನ್ನು ಕೇಂದ್ರದ ಮೇಲೆ ಮಾಡದ್ದರೆ ಒಪ್ಪುತ್ತಿದೆ. ಹಿಂದೆ ಇದೇ ಸಭೆಯಲ್ಲಿ ಆ ಮಾನ್ಯ ಸಚವರು ಈಗತಾನೆ ತಿಳಿಸಿದ ನೀರಾವರಿ ಪ್ರಾಜೆಕ್ಟನ್ನು ಒಂದು ನ್ಯಾಷನಲ್ ಪ್ರಾಜೆಕ್ಟೆಂದು ಭಾವಿಸಿ ಅದಕ್ಕೆ ಕೇಂದ್ರದವರಿಂದ ಹಣ ಸಹಾಯ ಒದಗಿಸಬೇಕೆಂದು ಇದೇ ಸಭೆಯಲ್ಲಿ ಎಲ್ಲಾ ನದಸ್ಯರಿಂದಲೂ ಸರ್ಕಾರನುಮತ ದಿಂದ ಅಂಗೀಕೃತವಾದ ನಿರ್ಣಯವನ್ನು ಕಳಾಹಿದ್ದಾಗ್ಗೂ ಕೇಂದ್ರದವರಿಂದ ಸಹಾಯ ದೊರೆಯುಲಲ್ಲ, ಅಷ್ಟೇ ಅಲ್ಲ ಮೈಸೂರು ರಾಜ್ಯಕ್ಕೆ ಒಂದು ಕೈಗಾರಿಕೆಯು ವಿಚಾರದಲ್ಲಾಗಲೀ ಅಥವಾ ಒಂದು

ನೀರಾವರಿ ಇಲ್ಲವೇ ರೈಲ್ವೆ ಬಡಾವಣೆಗಳ ವಿಚಾರದಲ್ಲಾಗಲೀ ಅಥವಾ ದೇಶ ಒಂದು ಸರ್ವತೋಮುಖವಾದ ಅಭಿವೃದ್ಧಿಗೆ ಸಂಬಂಧಪಟ್ಟ ಯಾವುದೇ ಒಂದು ವಿಷಯವಾಗಲಿ ಕೇಂದ್ರದವರು ನಮ್ಮ ರಾಜ್ಯಕ್ಕೆ ಅನುಕೂಲ ಮಾಡಲಿಲ್ಲ. ಆದುದರಿಂದ ಈ ಪಾಪದ ಫಲವನ್ನು ಕೇಂದ್ರ ಸರ್ಕಾರದವರು ಹೊರಲೇಬೇಕು.

ಈ ದಿವಸ ನಮ್ಮ ರಾಜ್ಯದಲ್ಲಿ ಈ ಅಭಾವ ಅನ್ನುವುದು ಎಲ್ಲಿಯವರೆಗೂ ಹೋಗಿದೆ, ಎಂದರೆ ಅಧಿಕಾರಿಗಳಿಗೂ ಅಭಾವ ಉಂಟಾಗಿದೆ. ಒಬ್ಬೊಬ್ಬ ಅಧಿಕಾರಿಗಳಿಗೆ ನಾಲ್ಕು ನಾಲ್ಕು ಹುದ್ದೆಗಳನ್ನು ಗಂಟುಹಾಕಿದ್ದಾರೆ ಏಕೆಂದರೆ ಒಳ್ಳೆ ದಕ್ಷ ಅಧಿಕಾರಿಗಳ ಅಭಾವ ಉಂಟಾಗಿದೆ. ಒಬ್ಬ ಅಧಿಕಾರಿಯೇ ಜಲಮಂಡಲಿಯ ಅಧ್ಯಕ್ಷರು: ಆದಾದನಂತರ ಅವರು ಅಡಿಷನರ್ ಚೀಫ್ ಸೆಕ್ರೆಟರಿ ಜೊತೆಗೆ ಸೂಪರಿಂಟೆಂಡಿಂಗ್ ಇಂಜಿನಿಯರೂ ಹೌದು. ಸಾಲದ್ದಕ್ಕೆ ಅವರು ಸಮನ್ಯಯ ಅಧಿಕಾರಿಗಳೂ ಹೌದು. ಆದರೆ ಹುದ್ದೆಗಳು ನಿಲ್ಲಾದರೂ ಕೆಲಸ ನಡೆಸತಕ್ಕವರು ಒಬ್ಬರೆ. ಸರ್ಕಾರದವರ ದೃಷ್ಟಿಯಲ್ಲಿ ಇವರನ್ನು ಬಿಟ್ಟರೆ ಇವರಷ್ಟು ಬೇರೆ ಪ್ರಮಾಣೀಕರೂ, ನೀತಿವಂತರೂ ಮತ್ತು ಯೋಗ್ಯವಂತರೂ ಯಾರೂ ಇಲ್ಲ ಸಿಕ್ಕುವುದಿಲ್ಲ ಅನ್ನುವಂತೆ ಭಾಸವಾಗುತ್ತಿದೆ. ದೊಡ್ಡದ್ದಾಗಿ ಯಾವ ಸಮನ್ವಯ ಅಧಿಕಾರಿಯನ್ನು ನೇಮಕ ಮಾಡಿದರು, ಆ ಅಧಿಕಾರಿಗೆ ಬರಗಾಲ ಪರಿಸ್ಥಿತಿಯನ್ನು ಸುಧಾರಿಸಲು ಯೋಗ್ಯ ಕ್ರಮ ಕೈಗೊಳ್ಳಲು ಸ್ವಳದಲ್ಲೇ ನಿರ್ಣಯ ಮಾಡುವ ಅಧಿಕಾರವನ್ನು ಕೊಟ್ಟಿದ್ದಾರೆ. ಇದಕ್ಕಿಂತ ಹಿಂದೆ ನಡೆದ ಕಾಮಗಾರಿಗಳ ರೀತಿ ನೀತಿ ಸಮರ್ಪಕವಾಗಿರಲಿಲ್ಲ ಎಂಬುದು ಇದರ ಅರ್ಥ ಎಂದರೆ ತಪ್ಪಾಗುವುದಿಲ್ಲ. ಬಹುಶಃ ಇದನ್ನು ಒಪ್ಪುತ್ತೀರಿ ಎಂದು ಕಾಣುತ್ತದೆ. ಈ ಸಭೆ ಪ್ರಾರಂಭವಾಗುವುದಕ್ಕೆ ಕೆಲವು ದಿವಸಗಳ ಹಿಂದೆ ಅರ್ಥ ಸಚಿವರು ಮತ್ತು ಕಂದಾಯ ಸಚಿವರು ಬಹಳ ಅವಸರದ ಪ್ರವಾಸ ಮಾಡಿದರು. ಆಗ ಕೆಲವು ಒಳ್ಳೆಯ ನಿರ್ಣಯ ಕೈಕೊಂಡರು ಎಂದು ಕೇಳಿದೆ. ಸಂತೋಷ. ಆದರೆ ಕಳೆದ ಆರು ತಿಂಗಳ ಹಿಂದೆ ಈ ಸಭೆಯಲ್ಲಿ ಬರಗಾಲದ ವಿಷಯವನ್ನು ಚರ್ಚೆಮಾಡಿ ಸಭೆಯನ್ನು ಮುಂದೂಡಿದಾಗ ಸರಕಾರ ಒಂದು ವಿಷಯವನ್ನು ಪ್ರಕಟಿಸಿತು. 23 ಜನ ಮಂತ್ರಿಗಳು 19 ಜಿಲ್ಲೆಗಳನ್ನು ಹಂಚಿಕೊಂಡು ಬರಗಾಲ ಪರಿಸ್ಥಿತಿ ಇರುವ ಪ್ರದೇಶದಲ್ಲಿ ಪ್ರವಾಸಮಾಡಿ ಯೋಗ್ಯ ಕ್ರಮ ಕೈಕೊಳ್ಳುವುದಾಗಿ ನಿರ್ಣಯ ಮಾಡಿತು. ಈ 6 ತಿಂಗಳಲ್ಲಿ ಮಂತ್ರಿಗಳ ಪ್ರವಾಸ ಎಷ್ಟು ಮಟ್ಟಿಗೆ ಇತ್ತು ಎಂಬುದನ್ನು ಪರಿಶೀಲಿಸೋಣ. ಇಂದು ಅದಕ್ಕೆ ಹೆಚ್ಚು ಕಾಲ ತೆಗೆದುಕೊಳ್ಳಬೇಕಾಗಿಲ್ಲ. ವಂದನಾ ನಿರ್ಣಯವನ್ನು ಸಭೆಯ ಮುಂದಿಟ್ಟ ಮಿತ್ರರು ಮುಖ್ಯ ಮಂತ್ರಿಗಳು ಮೊನ್ನೆ ಪ್ರವಾಸ ಮಾಡಿದರೆಂದು ಹೇಳಿದರು. ಬಹಳ ಒಳ್ಳೆಯದು. ಮುಖ್ಯ ಮಂತ್ರಿಗಳು ಬಹುಶಃ ಒಂದು ಸಾರಿ ಸೆಪ್ಟಂಬರಿನಲ್ಲಿ ಪ್ರವಾಸಮಾಡಿದ್ದರು. ತಮ್ಮ ಪಕ್ಷದ ಅಂತರ್ಯುದ್ಧ ಪ್ರಾರಂಭವಾದಾಗ ಕೇಂದ್ರದ ಮಾಜಿ ಸಚಿವರು ಯುದ್ಧ ಹೂಡುವುದಾಗಿ ತಿಳಿಸಿದಾಗ ಶಾಸನ ಸಭೆಯ ಸದಸ್ಯರನ್ನೊಲಿಸಿಕೊಳ್ಳಲು ಪ್ರವಾಸ ಮಾಡಿದರು. ಆದಾದ ಮೇಲೆ ಅವರು ಮೊನ್ನೆ ಶ್ರೀ ಡಿ. ಪಿ. ಧರ್ ಮತ್ತು ಶ್ರೀ ಟಿ. ಎ. ಪೈ ಬಂದಾಗ ಹೋಗಿದ್ದರು. ಆಗ ಏರಾನಷಾಹಿ ಗೆಸ್ಟ್ ಹೌಸಿನಲ್ಲಿ ಇದ್ದಾಗ 500 ಜನ ಪೋಲೀಸರಿದ್ದರು. ಏಕೆ ? ತಮ್ಮ ರಕ್ಷಣೆಗೆ ಅಷ್ಟು ಜನ ಪೋಲೀಸ್ ಅಧಿಕಾರಿಗಳನ್ನಿಟ್ಟುಕೊಂಡು ಪ್ರವಾಸಮಾಡಿದರು. ಅವರ ಟೂರು ಪ್ರೋಗ್ರಾಮ್‌ನಲ್ಲಿ ಈ ರೀತಿ ಇತ್ತು. Visit to Model House, Upper Krishna; Inspection of designs. Visit to Ghataprabha–Inspection of designs. Visit to Aivan Shahi Guest House–Discussion with legislators. Enroute to Delhi *via* Hyderabad. ಹಿಂದಿನ ಶ್ರೀಮಂತರ ಸರಕಾರ ಮನೆಗೆ ಹೋಯ್ತು. ಬಡವರ ಹೆಸರಿನಲ್ಲಿ ಬಂದಿರುವ ಇಂದಿನ ಸರಕಾರ ಇಂದು ಸಾಧನೆ ಮಾಡಿರುವುದೇನು ?

Sri R. GUNDU RAO (Somwarpet).—You must also be prepared to face the facts.

Sri H. D. DEVE GOWDA.—If the previous Government's failures are going to be exposed I welcome it. I am not a coward. ನಮ್ಮ ಮಂತ್ರಿಗಳು ಪ್ರವಾಸಮಾಡಿಕೊಂಡು ಬಂದ ಮೇಲೆ ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ ಫಲತಾಂಶ ಕಾದು ನೋಡಬೇಕು. ಇಂದು ಬರಗಾಲ ಪರಿಸ್ಥಿತಿಯನ್ನು ಸುಧಾರಿಸಲು ಸ್ವಳದಲ್ಲೇ ಕೆಲಸ ಕೊಡುತ್ತೇವೆ. 10 ಲಕ್ಷ ಜನರಿಗೆ ಕೆಲಸ ಒದಗಿಸಿದ್ದೇವೆ, ದಳ್ಳಾಳಿಗಳನ್ನು ನಿರ್ಮೂಲಮಾಡುತ್ತೇವೆ ಎಂದು ಮುಂತಾಗಿ ಅನೇಕ ಹೇಳಿಕೆ ಕೊಟ್ಟಿರುವುದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ, ಅದನ್ನೆಲ್ಲಾ ಜೋಡಿಸುವುದಕ್ಕೆ ಬೇಜಾರಾಗುತ್ತದೆ. ಪುಟ್ಟಸ್ವಾಮಿ ಸರಕಾರದಲ್ಲಿ ತ್ರೀ ಟೈರ್ ಸಿಸ್ಟಂ ಇತ್ತು, ಈಗ ಟು ಟೈರ್ ಸಿಸ್ಟಂ ಇದೆ. ಉತ್ತರ ಕನ್ನಡ ಜಿಲ್ಲೆಯಿಂದ 10 ದನ ರವಾನಿಸುವುದು, 3 ಲಕ್ಷ ಜನರನ್ನು ಸ್ಥಳಾಂತರಿಸುವುದು, ಪ್ರತಿ ಗ್ರಾಮದಲ್ಲೂ ಹತ್ತು ನೀರಾವರಿ ಬಾವಿ ತೋಡಿಸು

(SRI H. D. DEVE GOWDA)

ವುದು ಮುಂತಾದ ಯೋಜನೆಗಳನ್ನು ಕೈಕೊಳ್ಳುವುದಾಗಿ ತಿಳಿಸಿದ್ದಾರೆ. ಅಲ್ಲದೆ ಗಂಜಿ ಕೇಂದ್ರಗಳನ್ನು ತೆರೆಯುವುದು, ಉಚಿತ ಆಹಾರ ವಿತರಣೆ, ಸುಖಡಿ ತಯಾರಿಸಿ ಹಂಚುವುದು ಮುಂತಾದ ಕಾರ್ಯಕ್ರಮಗಳನ್ನು ಕೈಕೊಳ್ಳುವ ವಿಚಾರ ಪತ್ರಿಕೆಗಳಲ್ಲಿ ದೊಡ್ಡದಾಗಿ ಪ್ರಕಟವಾಗಿವೆ. ಅದಕ್ಕೆ ಲೆಕ್ಕವೇ ಇಲ್ಲ. ಸ್ಥಳದಲ್ಲೇ ಕೆಲಸ ಒದಗಿಸುತ್ತೇವೆ, ಡಳ್ಳಾಳಿಗಳನ್ನು ನಿರ್ಮೂಲ ಮಾಡುತ್ತೇವೆ ಎಂದು ಸಹ ತಿಳಿಸಿದ್ದಾರೆ. ಪುಟ್ಟಸ್ವಾಮಿಯವರ ಸರಕಾರದಲ್ಲಿ ತ್ರೀ ಜ್ಯೆರ್ ಸಿಸ್ಟಂ ಇತ್ತು, ಮೂರು ಹಂತದಲ್ಲಿ ಭ್ರಷ್ಟಾಚಾರ ಹಂಚಿಕೆಯಾಗುತ್ತಿತ್ತು, ನಮ್ಮ ಸರಕಾರದಲ್ಲಿ ನೇರ ಸಂಪರ್ಕವಿದೆ, ಟು ಜ್ಯೆರ್ ಸಿಸ್ಟಂ ಇದೆ ಎಂದು ಹೇಳಬಹುದು, ಬಹಳ ಒಳ್ಳೆಯದು. ಆಮೇಲೆ ಉತ್ತರ ಕನ್ನಡ ಜಿಲ್ಲೆಗೆ 10 ಲಕ್ಷ ದನಗಳನ್ನು ರವಾನಿಸಲಾಗುವುದು, 3 ಲಕ್ಷ ಜನರ ಸ್ಥಳಾಂತರ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಪ್ರತಿ ಗ್ರಾಮದಲ್ಲೂ 10 ನೀರಾವರಿ ಬಾವಿ ತೋಡಿಸುವ ಪುಕ್ಕಟ್ಟೆ ಯೋಜನೆ ಇದೆ, ಗಂಜಿ ಕೇಂದ್ರಗಳನ್ನು ತೆರೆಯುವುದು, ಉಚಿತ ಆಹಾರ ವಿತರಣೆ, ಸುಕಡಿ ತಯಾರಿಸಿ ಹಂಚುವುದು ಮುಂತಾದ ಕಾರ್ಯಕ್ರಮ ಹಾಕಿಕೊಂಡಿರುವುದಾಗಿ ಪತ್ರಿಕೆಗಳಲ್ಲಿ ದೊಡ್ಡದಾಗಿ ಪ್ರಕಟವಾಗಿದೆ. ಸುಖಡಿ ವಿಚಾರ ಮುಖ ಪುಟದಲ್ಲಿದೆ. ಆದರೆ ಜನರು ಹೊಟ್ಟೆಗಿಲ್ಲದೆ ಒದ್ದಾಡುವ ಪರಿಸ್ಥಿತಿ ಬಂದಿದೆ. 1.2 ಕೋಟಿ ರೂಪಾಯಿಗಳ ಸುಖಡಿ ತಯಾರಿಸಿ ಬಡವರಿಗೆ ಹಂಚಲಾಗುವುದು ಎಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆದರೆ ಇಂದು ಅದು ಜನತೆಗೆ ದೊರೆಯಲಿಲ್ಲ. ಆಮೇಲೆ ನೀರು ನರಬರಾಯು ಮಾಡಲು ಇನ್ನೂರು ಟ್ಯಾಂಕರುಗಳನ್ನೊದಗಿಸುವುದಾಗಿ ಪ್ರಕಟವಾಗಿದೆ. ಸರಕಾರದ್ದು ವಿವೇಕರಹಿತ ನಿರ್ಣಯವೆಂದು ನಾನು ಮೊದಲೇ ಹೇಳಿದೆ. ಈಗಿನ ಪರಿಸ್ಥಿತಿಗೆ ಸರಕಾರವೇ ಕಾರಣ. ಪ್ರಕೃತಿ ವಿಕೋಪದಿಂದ ಬರಗಾಲ ಬಂದಿರಬಹುದು. ಆದರೆ ಅದನ್ನು ಬಿಡಿಸಲು ಸರಕಾರ ತೋರಿಸಿದ ನಿರ್ಲಕ್ಷ ಮನೋಭಾವನೆ ಏನಿದೆ ಅದೇ ಪರಿಸ್ಥಿತಿ ವಿಕೋಪಕ್ಕೆ ಹೋಗಲು ಮೂಲ ಕಾರಣ ಎಂದು ಹೇಳಿದರೆ ತಪ್ಪಾಗಲಾರದು.

4-00 P.M.

ಡಿಸೆಂಬರ್ 22ನೇ ತಾರೀಖು ಈ ಸಭೆಯಲ್ಲಿ ನಾವು ಚರ್ಚೆ ಮಾಡಿದಾಗ ನಿಮ್ಮ ಸರ್ಕಾರದವರು ಉತ್ತರ ಕೊಡುತ್ತಾ 28 ಕೋಟಿ ರೂಪಾಯಿಗಳಾದರೆ ಮುಂದಿನ ಎಂಟು ತಿಂಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿದರು. ಆದರೆ ಜನವರಿ 5 ನೇ ತಾರೀಖು ಕ್ಯಾಬಿನೆಟ್‌ನಲ್ಲಿ ನಿರ್ಣಯ ತೆಗೆದುಕೊಳ್ಳುತ್ತಾರೆ, 151 ಕೋಟಿ ರೂಪಾಯಿಗಳ ಬೃಹತ್ ಯೋಜನೆ ಬರಗಾಲ ಪೀಡಿತ ಪ್ರದೇಶದ ಸಮಸ್ಯೆಯನ್ನು ಬಗೆಹರಿಸಲಕ್ಕೆ ಎಂದು. ಹತ್ತು ದಿವಸಗಳಲ್ಲಿ ಎಂತಹ ಮಹತ್ತರ ಬಾದ ಬದರಾಣಿ ? ಬದನೆಯ ತಾರೀಖು ವೈದ್ಯರ ಯುನಾನಿ ಕಾನ್‌ಫರೆನ್ಸ್ ಮಾಡಿದರು, ಅಲ್ಲಿಗೆ ಪ್ರಧಾನ ಮಂತ್ರಿಗಳು ಬಂದಾಗ ಪರೋಕ್ಷವಾಗಿ ತಮ್ಮ ಕಷ್ಟವನ್ನು ತೋಡಿಕೊಂಡಿದ್ದಾರೆ. ಅದಕ್ಕೆ ಅವರು ಹೇಳಿದ್ದಾರೆ, ಎರಡನೆ ತಂಡದ ಸ್ಟಡಿ ಟೀಮು ಬಂದಮೇಲೆ, ಆ ಪ್ರದೇಶದಲ್ಲಿ ಟೀಮು ನವರು ಪ್ರವಾಸ ಮಾಡಿ, ಅಧ್ಯಯನ ಮಾಡಿ ಶಿಫಾರಸು ಮಾಡುತ್ತಾರೆ, ಅವರ ಮೇಲೆ ಅರ್ಥ ಶಾಖೆಯವರು ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು. ಎರಡನೆ ತಂಡದವರು ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಹೋದರೆ ಅಲ್ಲಿ ಜನ ಏನು ಹೇಳುತ್ತಾರೆ ಎಂದರೆ, ಇದು ಎಂತಹ ಹೊಸ ನಿರ್ಣಯ ಸರ್ಕಾರದವರು ಒಂದು ಸಾರಿ 16 ಕೋಟಿ ರೂಪಾಯಿ, ಇನ್ನೊಂದು ಸಾರಿ 35 ಕೋಟಿ ರೂಪಾಯಿ ಮತ್ತೊಂದು ಸಾರಿ 151 ಕೋಟಿ ರೂಪಾಯಿಗಳು ಬೇಕು ಎಂದು ಹೇಳುತ್ತಾರೆ, ಸರಕಾರಕ್ಕೆ ಏನಾದರು ಸ್ವಲ್ಪ, ಸುಬ್ಬಯ್ಯ ಶೆಟ್ಟರ ಭಾಷೆಯಲ್ಲಿ ಹೇಳುವುದಾದರೆ, ಮಂಡೆ ಇದೆಯೇ ? ಇಪ್ಪತ್ತು ದಿವಸಗಳಲ್ಲಿ ಈ ರೀತಿಯ ಒಂದು ಬೇಡಿಕೆಯನ್ನು ಇಡತಕ್ಕದ್ದು ನಮಗೆ ಅರ್ಥವಾಗುವುದಿಲ್ಲ ಎಂದು ಹೇಳಿದ್ದಾರೆ. ಆ ಪ್ರದೇಶದಿಂದ ಬಂದಿರತಕ್ಕ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಹಾಗೆ ಮಾಡಿದರು, ಹೀಗೆ ಮಾಡಿದರು ಎಂದರೆ ಅವರಿಗೆ ಜನ ಬುದ್ಧಿ ಕಲಿಸಲು ನಾನು ಬೇಡ ಎಂದು ಹೇಳುವುದಿಲ್ಲ. ತಮ್ಮ ವರದಿಯಲ್ಲಿ 1460 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು ಎಂದು ಕೊಟ್ಟಿದ್ದೀರಿ. ಇದರ ಬಗ್ಗೆ ಮಾನ್ಯ ಪಿ. ಸಿ. ಶೆಟ್ಟರ್ ಅವರನ್ನು ಕೇಳುತ್ತೇನೆ 24,650 ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿದ್ದಾರೆಯೇ ಎಂದು ? ಇಷ್ಟು 11 ತಿಂಗಳಲ್ಲಿ ನಿಮ್ಮ ಸಾಧನೆಯೆ ? ನಮ್ಮಜನವಾದಿ ಸರಕಾರದ 11 ತಿಂಗಳ ಸಾಧನೆಯೋ ? 24,650 ಗ್ರಾಮಗಳಿಗೆ ಬಾವಿಗಳನ್ನು ತೋಡಿಸಿದ್ದಾರೆಯೇ ? 1460 ಗ್ರಾಮಗಳಿಗೆ ಬಾವಿಗಳನ್ನು ತೆಗೆಸುವುದು ಇಪ್ಪೆ ಎಂದು ಹೇಳಿದ್ದೀರಿ, ಈ ರೀತಿ ಹೇಳುವಾಗ ನಾವು ನಿಜವಾದ ಪರಿಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದರೆ ಒಳಿತು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಕ್ಕೆ ಹೋದಾಗ ಬರಗಾಲ ಪರಿಸ್ಥಿತಿಯ ವಿಷಯದಲ್ಲಿ ಒಂದು ಹೇಳಿಕೆ ಕೊಟ್ಟಿದ್ದಾರೆ, ಏನೆಂದರೆ ಈ ಪರಿಸ್ಥಿತಿ ಹಿಂದಿನ ಸರಕಾರ ಮಾಡಿರತಕ್ಕ ಪಾಪದಫಲ ಎಂದು. ವೈಕೊರು ರಾಜ್ಯದಲ್ಲಿ ಮೂರು ಮೂಲೆವರೆ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಬಂದಿರತಕ್ಕ ವಿಷಯದ ಬಗ್ಗೆ ಪಾಪದ ಫಲ ಬಂದಿದೆ ಎಂದು ಹೇಳಿದರು. ಒಂದು ವೇಳೆ ಈಗ ಇರತಕ್ಕ 19 ಜಿಲ್ಲೆಯಲ್ಲಿಯೂ ಈ ಬರಗಾಲ ಬಂದು ಬಿಟ್ಟಿದ್ದರೆ ಆಗ ಅದಕ್ಕೆ ಇವರು ಏನು ಹೆಸರು ಇಡುತ್ತಿದ್ದರು ? ಅವರು ಯಾವ ರೀತಿ ಉಳಿದುಕೊಳ್ಳತಕ್ಕ ಹೇಳಿಕೆ ಕೊಡುತ್ತಿದ್ದರು ?

ಶ್ರೀ ಎಚ್. ಡಿ. ದೇವೇಗೌಡ —ನಾನು ಮಾನ್ಯ ಬಂಗಾರಪ್ಪನವರು ಏನು ವಿವರಣೆಯನ್ನು ಕೇಳಿದರು ಅದಕ್ಕೆ ಹೇಳಿದೆ, ಹೇಳುವ ಅವಶ್ಯಕತೆ ಇಲ್ಲ. ಈಗ ಆಹಾರ ಪರಿಸ್ಥಿತಿಯ ಬಗ್ಗೆ ನಾನು ಮೊದಲೇ ಹೇಳಿದೆ ಯಾವುದನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲವೋ ಅದರ ಬಗ್ಗೆ ಫೋಷಣೆ ಮಾಡಿ ಅವ್ಯವಸ್ಥೆಯನ್ನು ಮಾಡಲಕ್ಕೆ ಹೋಗಬೇಡಿ. ನಿಮ್ಮ ಪಕ್ಷದ ಮಹಾಧಿವೇಶನದಲ್ಲಿ ನಗಟು ವ್ಯಾಪಾರವನ್ನು ಕೈಗೆ ತಗೆದುಕೊಳ್ಳುತ್ತೇವೆಂದು ಹೇಳಿ ಕೊಂಬು, ಕಹಳೆ, ದೇಶದಲ್ಲೆಲ್ಲ ಡಂಗೂರ ಹೊಡೆದರು. ಇದರ ಪರಿಸ್ಥಿತಿ ಏನಾಗಿದೆ ಎಂದರೆ, ಖರೀಫ್ ಕ್ರಾಪ್ ಬೆಳೆಗೆ ನಗಟು ವ್ಯಾಪಾರವನ್ನು ತಗೆದುಕೊಳ್ಳುತ್ತೇವೆ, ಈಗ ಆಗುವುದಿಲ್ಲ ಎಂದು ಹೇಳಿದರು. ನಮ್ಮ ಸರಕಾರದ ಇನ್ನೂ ಸ್ವಲ್ಪ ಆಲೋಚನೆ ಮಾಡುತ್ತಿದೆ, ಪರಿಸ್ಥಿತಿ ಕಷ್ಟವಿದೆ ಎಂದು ಹೇಳಿದರು. ಮುಖ್ಯಮಂತ್ರಿಗಳ ನಡೆಯಲ್ಲಿ ಚರ್ಚೆ ನಡೆದು ಒಪ್ಪಿಗೆ ಕೊಟ್ಟು ನಗಟು ವ್ಯಾಪಾರವನ್ನು ಕೈಗೆ ತಗೆದುಕೊಳ್ಳುತ್ತೇವೆ ಎಂದು ಹೇಳಿದ್ದರೆ ಪರಿಣಾಮ ಏನು ಆಗುತ್ತಿತ್ತು ? ಇವತ್ತು ಹೇಚಿಯಲ್ಲಿ ದೊರೆಯುತ್ತಾ ಇದ್ದಂಥ ಆಹಾರ ಪದಾರ್ಥಗಳು ಮಾಯವಾಗಲಕ್ಕೆ ಸಾಧ್ಯವಾಯಿತು. ಇದರ ಪೂರ್ಣ ಹೊಣೆಗಾರಿಕೆಯನ್ನು ತಾವು ಹೊರಬೇಕಾಗುತ್ತದೆ. ಇದು ತಮ್ಮ ಆದೂರ ದೃಷ್ಟಿಯ ವಿವೇಕ ರಹಿತ ನಿರ್ಣಯ ಎಂದು ಹೇಳಬೇಕಾಗಿದೆ. ಇವತ್ತು ಪರಿಸ್ಥಿತಿ ಎಲ್ಲಿಯವರೆಗೆ ಹೋಗಿದೆ ಎಂದರೆ, ನಾನು ಯಾರ ಮನಸ್ಸನ್ನು ನೋಯಿಸಬೇಕು ಎಂದು ಹೇಳುತ್ತಾ ಇಲ್ಲ : ನಿಮ್ಮ ಕೈಯಲ್ಲಿ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕ ಕೆಲಸವನ್ನು ಜನತೆಯ ಮುಂದೆ ಇಟ್ಟು ಎಷ್ಟು ಕಾಲ ಅವರನ್ನು ಮಂಚಿಸಿಲಕ್ಕೆ ಸಾಧ್ಯ? ಪ್ರಧಾನ ಮಂತ್ರಿಗಳು ಒಂದು ಮಾತನ್ನು ಹೇಳಿದರು, ವಿರೋಧ ಪಕ್ಷದವರು ಆಹಾರದ ಕೃತಕ ಅಭಾವವನ್ನು ಉಂಟು ಮಾಡಿ ಒಂದು ಗೊಂದಲ ಕಲಸವನ್ನು ಪಾಪದ ಕೆಲಸವನು ಮಾಡುತ್ತಿದಾರೆ ಎಂದು. ಅದೇ ದಿವಸ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರುಗಳನ್ನು ಉದ್ದೇಶಿಸಿ ಮಾತನಾಡುವ ಕಾಲದಲ್ಲಿ ಚವಾಣರವರು ಹೇಳಿದರು, ದೇಶದಲ್ಲಿರತಕ್ಕ ಆಹಾರದ ಕೊರತೆ ಏನು ಇದೆ ಅದು ಬೆರೆಗಳ ಏರಿಕೆಯ ಮೂಲ ಕಾರಣ. ಎಂದು. ನಿಮ್ಮ ಈ ವೈಫಲ್ಯತೆಯನ್ನು ಮುಚ್ಚಿಕೊಳ್ಳುವುದಕ್ಕೆ ಎಷ್ಟು ಕಾಲ ಈ ಮೋಸದ ಮಾತುಗಳನ್ನು ಆಡಲಕ್ಕೆ ಸಾಧ್ಯ ಎಂದು ಕೇಳುತ್ತೇನೆ. ಇವತ್ತು ತಮ್ಮ ಕಾರ್ಯವನ್ನು ನಿರ್ವಹಣೆ ಮಾಡಲಕ್ಕೆ ಅಶಕ್ತ ಇರುವಾಗ ಬೇರೆಯವರನ್ನು ದೂಷಿಸಲಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದಲ್ಲ. ನಮ್ಮ ಆಹಾರದ ಉತ್ಪಾದನೆ ಹೇಗೆ ಆಗಿದೆ ಎನ್ನುವುದನ್ನು ಯೋಚನೆ ಮಾಡಬೇಕು. ಇವತ್ತು ಮಾರ್ಜಿನಲ್ ಡಿಫಿಷಿಯನ್ಸಿ ಇದೆ ಎಂದು ಹೇಳಿದರು ಜುಲೈ 72 ರಂದು ಕೇಂದ್ರದ ಆಹಾರ ಸಚಿವರೊಬ್ಬರು ಒಂಭತ್ತು ಮಿಲಿಯನ್ ಬಫರ್ ಸ್ಟಾಕ್ ಇದಯೆಂದು ಹೇಳಿದರು. ಡಿಸೆಂಬರ್ 1972 ರಲ್ಲಿ ಹೇಳಿದ್ದಾರೆ.....

ಶ್ರೀ ಎಚ್. ಸಿದ್ದವೀರಪ್ಪ.—ಆಹಾರದ ಪರಿಸ್ಥಿತಿಯ ಬಗ್ಗೆ ಎಫ್. ಎ. ಒ. ಆರ್ಗನೈಸೇಷನ್ ನವರು ಹೇಳಿದ್ದಾರೆ. There is famine in the whole world not only in India not only in Mysore not only in South East Asia but every where even including Australia which never saw what famine was.

ಶ್ರೀ ಎಚ್. ಡಿ. ದೇವೇಗೌಡ.—1972ರ ಜುಲೈನಲ್ಲಿ 9 ಮಿಲಿಯನ್ ಟನ್ಸ್ ಬಫರ್ ಸ್ಟಾಕ್ ಇದೆ ಎಂದು ಹೇಳಿದವರು ಡಿಸೆಂಬರ್‌ನಲ್ಲಿ 3 ಮಿಲಿಯನ್ ಟನ್ಸ್ ನಮ್ಮ ಬಫರ್ ಸ್ಟಾಕ್ ಇದೆ ಎಂದು ಹೇಳುತ್ತಾರೆ. ಎಷ್ಟು ವ್ಯತ್ಯಾಸ ಇದೆ ನೋಡಿ, ಆಹಾರ ಸಚಿವರು ಹೇಳತಕ್ಕ ಅಸತ್ಯವಾದ ವಿಷಯ.

ಶ್ರೀ ಎಚ್. ಸಿದ್ದವೀರಪ್ಪ.—ಇರುವುದು ಖರ್ಚಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಆಮೇಲೆ ಹೇಳುತ್ತಾರೆ ಮಾರ್ಜಿನಲ್ ಡಿಫಿಷಿಯೆನ್ಸಿ ನುಮಾರು 2 ಮಿಲಿಯನ್ ಟನ್ಸ್.—ಅಮೆರಿಕಾದವರು ಆಸೆನ್ ಮಾಡಿ ಹೇಳುತ್ತಾರೆ 5 ಮಿಲಿಯನ್ ಟನ್ ಇಂಡಿಯಾಕ್ಕೆ ಕೊರತೆ ಬೀಳುತ್ತದೆ ಎಂದು.

ಶ್ರೀ ಎಚ್. ಸಿದ್ದವೀರಪ್ಪ.—ಹೋಲ್ ಆಫ್ ನೌತ್ ಈಸ್ಟ್ ಏಷ್ಯಾ ಕೂಡ ಇಂಥ ಗ್ರೋವ್ ಪೆರಿಲ್‌ಗೆ ಒಳಗಾಗಿದೆ. ಇದು ಬರೀ ಸೌತ್ ಈಸ್ಟ್ ಏಷ್ಯಾದಲ್ಲಿ ಮಾತ್ರ ಅಲ್ಲ ಎಲ್ಲಾ ಭಾಗದಲ್ಲೂ ಇವೆ ಇನ್‌ಫ್ಲೂಡಿಂಗ್ ಆಸ್ಟ್ರೇಲಿಯಾ.

ಶ್ರೀ ಎಚ್. ಡಿ. ದೇವೇಗೌಡ.—ಕೈಗಾರಿಕಾ ಸಚಿವರಿಗೆ ನಾನು ಕೇಳುತ್ತೇನೆ ಕುಕ್ಕವಾಡದಲ್ಲಿ ಭಾಷಣ ಮಾಡುವಾಗ ಇದು ತಮಗೆ ಮನವರಿಕೆಯಾಯಿತೆ ?

ಶ್ರೀ ಎಸ್. ಎಂ. ಕೃಷ್ಣ.—ಅಲ್ಲಿಂದ ಬಂದಮೇಲೆ ?

ಶ್ರೀ ಎಚ್. ಡಿ. ದೇವೇಗೌಡ.—ಈ ಹಿನ್ನೆಲೆಯನ್ನು ಅರಿತು ಸರಕಾರ ನಡೆಯತಕ್ಕವರು ವಿಚಕ್ಷಣೆಯಿಂದ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಸೌತ್ ಈಸ್ಟ್ ಏಷ್ಯಾದಲ್ಲೂ ಇಂಥ ಪರಿಸ್ಥಿತಿ ಬಂದಿದೆಯೆಂದು ಹೇಳುತ್ತಾರೆ. ಅದು ಅರಿತು ವಿಚಕ್ಷಣೆಯಿಂದ ಕೂಡಿದಂತಹ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿತ್ತು. ಈ ಅದರ ದೃಷ್ಟಿ ನಿರ್ಣಯು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ಹೇಳಿದೆ

ಶ್ರೀ ಎಚ್. ಸಿದ್ದವೀರಪ್ಪ. ಅಲ್ಲಿನ ಜನಗಳು ಬಹಳ ಸಂತುಷ್ಟರಾಗಿದ್ದಾರೆ ಎಂದು ಹೇಪರಿನಲ್ಲಿ ಬಂದಿದೆ.

ಶ್ರೀ ಎಚ್. ಡಿ ದೇವೇಗೌಡ.—ಗರೀಬಿ ಹಟಾವೋ ಹೊರತು ಹೋಯಿತು Curt on Consumption is the new theory of the Congress (R) Organisation. ಉಪಯೋಗಿಸುವ ಆಹಾರಗಳನ್ನು ಸ್ವಲ್ಪ ಮಿತಿಯಾಗಿ ಉಪಯೋಗಿಸಿ.

ಶ್ರೀ ಎಂ. ಎಸ್. ಕೃಷ್ಣನ್.—ಒಬ್ಬರು ಉತ್ತರ ಪ್ರದೇಶದ ಮಂತ್ರಿಗಳು ಹೇಳಿದರಂತೆ ಇಲಿಗಳನ್ನು ಊಟಮಾಡಿದರೆ ಅಕ್ಕಯನ್ನು ಉಳಿನಬಹುದು ಎಂದು.

ಉಪಾಧ್ಯಕ್ಷರು.—ಅದರಲ್ಲಿ ಹೆಚ್ಚು ಪ್ರೊಟೀನ್ ಇರುತ್ತದೆ

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಹೇಳಿದ್ದಾರೆ ಗೋಮಾಂಸ ತಿನ್ನಿ ಎಂದು. ಸಿದ್ದವೀರಪ್ಪನವರಿಗೆ ಅನುಭವ ಇದೆಯೋ ಎನೋ ಗೊತ್ತಿಲ್ಲ. ಆಹಾರ ಪದಾರ್ಥಗಳ ಮಿತವ್ಯಯ ಮಾಡಿ ಸ್ವಲ್ಪ ನ್ಯೂಟ್ರಿಷಿಯಸ್ ಫುಡ್ ತೆಗೆದುಕೊಳ್ಳತಕ್ಕ ಮಂತ್ರಿಗಳು, ಶಾಸಕರು, ನಮ್ಮಂಥವರು ನಿಮ್ಮಂಥವರು ಸ್ವಲ್ಪ ಕಮ್ಮಿ ತಿನ್ನಬಹುದು. ಗುಡ್ಡದಲ್ಲಿ ತೆಗೆದುಕೊಂಡು ದುಡಿಯುವ ಕಾರ್ಮಿಕ ಆಥವಾ ಹಳ್ಳಿಯಲ್ಲಿ ಕೆಲಸಮಾಡುವ ರೈತರಿಗೆ ಕಡಿಮೆ ತಿನ್ನಿ ಎಂದು ಹೇಳಿದರೆ ಅಲ್ಲೂ ನಿಮ್ಮ ವಿವೇಕವನ್ನು ಪ್ರಶ್ನೆ ಮಾಡಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಅದು ಅವರಿಗೆ ಹೇಳಿದ ಮಾತಲ್ಲ. ನಿಮ್ಮಂಥವರಿಗೆ ಹೇಳಿದ ಮಾತು.

ಶ್ರೀ ಎಚ್. ಡಿ. ದೇವೇಗೌಡ.—ಈಗ ಆಹಾರದ ಕೊರತೆ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ಇವೊತ್ತು ನಮ್ಮ ರಾಜ್ಯದಲ್ಲಿ ಆಹಾರಧಾನ್ಯಗಳ ಇಂಟರ್ ಡಿಸ್ಟ್ರಿಕ್ಟ್ ಬ್ಯಾನ್ ಕೂಡ ಹಾಕಿರತಕ್ಕದ್ದು ನನ್ನ ಪ್ಲೆಯಿಕ್ಕಿಕ ಅಭಿಪ್ರಾಯದಲ್ಲಿ ಹೇಳಬೇಕಾದರೆ ಇದು ಯೋಗ್ಯವಾದ ನಿರ್ಣಯವಲ್ಲ. ಮಂಗಳೂರಿನಲ್ಲಿ ಪ್ರಸ್ತಾಪಮಾಡಿದಾಗ ಅಲ್ಲಿ ಒಂದು ರೂಪಾಯಿ 75 ಪೈಸೆಗೆ ಒಂದು ಕಿಲೊ ಅಕ್ಕಿ ಇದೆ ಎಂದು ಕೇಳಿದೆ. ಮಂತ್ರಿಗಳು ತಿನ್ನುವ ಅಕ್ಕಿ 2 ರೂಪಾಯಿ 15 ಪೈಸೆ. ಕಾರ್ಮಿಕರು, ಸಣ್ಣಪುಟ್ಟ ಜನ ತಿನ್ನುವುದು 1 ರೂಪಾಯಿ 75 ಪೈಸೆ. ಶಿವಮೊಗ್ಗಾದಿಂದ ಮಂಗಳೂರಿಗೆ ಅಕ್ಕಿ ಹೋಗಬೇಕಾದರೆ ಇವೊತ್ತು ನರ್‌ಪ್ಲಸ್ ಡಿಸ್ಟ್ರಿಕ್ಟ್‌ನಿಂದ ಎಲ್ಲಿ ಡೆಫಿಸಿಟ್ ಇವೆಯೋ ಅಲ್ಲಗೆ ಅಕ್ಕಿ ಹೋಗಬೇಕಾದರೆ ಇದನ್ನು ಕೂಡ ತಡೆ ಹಿಡಿದಿದ್ದೀರಿ. ರಾಜ್ಯದಿಂದ ಹೊರಗಡೆ ಹೋಗುವುದನ್ನು ಬಂದ್‌ಮಾಡಿ ಬೇಡವೆಂದು ಹೇಳುವುದಿಲ್ಲ. ಆದರೆ ಸ್ಟೇಟಿನಲ್ಲಿ ಫ್ರೀ ಮೂವೆಂಟ್ ಇರಬೇಕು. ಎಲ್ಲಿ ಆಹಾರದ ಕೊರತೆ ಇದೆ ಅಂತಹ ಜಿಲ್ಲೆಗಳಿಗೆ ಹೋಗತಕ್ಕದ್ದು ತಡೆ ಹಿಡಿಯುವುದು ವಿವೇಕದ ಅಭಾವವೆಂದು ಹೇಳಬೇಕಾಗುತ್ತದೆ. ಇದರ ಜೊತೆಗೆ ದಳ್ಳಾಳಿಗಳನ್ನು ನಿರ್ಮೂಲ ಮಾಡುತ್ತೇವೆ. ಎರಡು ಜೈರ್ ಸಿಪ್ಪೆವರ್ ಮಾಡುತ್ತೇವೆಂದು ಹೇಳಿದ್ದೀರಿ ಇದು ಎಷ್ಟರಮಟ್ಟಿಗೆ ಕಾರ್ಯಗತವಾಗಿದೆ ? ಅಕ್ರಮವಾಗಿ ಆಹಾರವನ್ನು ದಾಸ್ತಾನು ಮಾಡಿರತಕ್ಕವರನ್ನು ಬುಕ್ ಮಾಡಿದ್ದೀರಿ ? ನಾನು ಇದನ್ನು ಹೇಳಿದರೆ ನಿಮ್ಮ ಮನಸ್ಸಿಗೆ ನೋವು ಆಗುತ್ತದೆ. ನಾನು ನಿಮ್ಮ ಸರ್ಕಾರದ ಪಾಲಿಸಿಯನ್ನು ಕಂಡಮ್ನ್ ಮಾಡುತ್ತೇನೆ. ಇವೊತ್ತು ಕೃತಕ ಅಭಾವಕ್ಕೆ ಯಾರು ಕಾರಣರು ? ವರ್ತಕರು ತಮ್ಮಲ್ಲಿ ಇರತಕ್ಕ ದಾಸ್ತಾನು ಬಚ್ಚಿಟ್ಟು ಲಾಭಬಡುಕತನ ದಾರಿ ಹಿಡಿಯಲಿಕ್ಕೆ ತೊಂದರೆ ಇಲ್ಲ. ಆಹಾರ ಸಚಿವರು ಸೀಮೆ ಎಣ್ಣೆ ಲೈಸೆನ್ಸು ಇಲ್ಲದೆ ಮಾರಿದರು ಅದನ್ನು ಸತ್ಯ ಎಂದು ಹೇಳಿ ತಾವು ಕಷ್ಟಕ್ಕೆ ಸಿಕ್ಕಿಬಿಟ್ಟರು ಎಂದು ಕೇಳಿದೆ. ಅಕ್ಕಿ ಮೊದಲನೇ ದರ್ಜೆ ರೂ. 2–5.

6 ತಿಂಗಳ ಹಿಂದೆ ರೂ. 1-50 ಪೈಸೆ, ಹಿಂದು ವರ್ಷದ ಹಿಂದೆ ರೂ. 1-50 ಪೈಸೆ, 2 ವರ್ಷಗಳ ಹಿಂದೆ ರೂ 1-40 ಪೈಸೆ, 3 ವರ್ಷಗಳ ಹಿಂದೆ ರೂ 1-30 ಪೈಸೆ ಹೀಗೆ ಬೆಲೆಗಳ ಏರಿಕೆ ನಾಗಾ ರೋಪದಿಂದ ಓಡುತ್ತಿದೆ. ಇದು ನಿಮ್ಮ ಅದೂರದೃಷ್ಟಿ ರಾಜಕಾರಣ ಎಂದು ಹೇಳಬೇಕಾಗಿದೆ. ಇದು 11 ತಿಂಗಳ ಸಾಧನೆ. ಇವತ್ತು ಕೆಲವರಿಗೆ ಸಕ್ಕರೆ ಅಭಾವ ಆದರೆ ಮತ್ತೆ ಕೆಲವರಿಗೆ ಅಭಾವ ಹೋಯಿತು. ಹಿಂದಿನ ಸರ್ಕಾರದ ಮೇಲೆ ಆಪಾದನೆ ನೀವೇ ಮಾಡಿದ್ದೀರಿ. ಬಹಳ ದೊಡ್ಡ ಕಂಟ್ರಾಕ್ಟರ್‌ಗಳ ಕೈಹಿಡಿತಕ್ಕೆ ಹಿಂದಿನ ಸರ್ಕಾರ ಸಿಕ್ಕಿಬಿದ್ದಿದೆ ಎಂದು, ಅವರ ಹಂಗಿನಲ್ಲಿ ಸರ್ಕಾರ ನಡೆಸುತ್ತಾ ಇದ್ದಾರೆ ಇದು "ಕಂಟ್ರಾಕ್ಟರ್ಸ್ ರಾಜ್ಯ" ಎಂದು ಶ್ರೀಮಾನ್ ಚನ್ನಬಸಪ್ಪ ನವರು ಇಂದು ಬರಲಿಲ್ಲ, ಮನೆಯಲ್ಲಿ ಅವರಿಗೆ ಏನೋ ಸ್ವಲ್ಪ ತೊಂದರೆ ಆಗಿರಬಹುದು, ಬೇಕಾದರೆ ಪ್ರೊಸಿಡಿಂಗ್ಸ್ ನೋಡಿ ಅದರಲ್ಲಿದೆ. ನಾನು ಯಾವುದನ್ನು ಕಲ್ಪನೆ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಕಂಟ್ರಾಕ್ಟರ್ಸ್ ರಾಜ್ಯ ತಪ್ಪಿಸಿ ಹೊಸ ವರ್ಗ ನಿರ್ಮಾಣ ಮಾಡಿದರು. ಅವರೆಲ್ಲರೂ ಗರೀಬಿ ಆಗಿರಬಹುದು ಎಂದು ನನ್ನ ಭಾವನೆ. ಆಡಳಿತ ಕಾಂಗ್ರೆಸ್ ಮುಖಂಡರು; ಕಾರ್ಯಕರ್ತರನ್ನು ಬಿಟ್ಟುಬಿಟ್ಟರೆ ದೇಶದಲ್ಲಿ ಬಾಕಿ ಎಲ್ಲಾ ಅಪ್ರಾಮಾಣಿಕರು, ಭ್ರಷ್ಟಾಚಾರಿಗಳು ಮತ್ತು ಅವಿವೇಕಿಗಳು, ಸಮಾಜದಲ್ಲಿ ಸೇರಿ ಮಾಡಲಿಕ್ಕೆ ಅನರ್ಹರು ಆಗಿರಕ್ಕೆ ಜನ ಎಂದು. ನೀವು ತೀರ್ಮಾನಕ್ಕೆ ಬಂದಿದ್ದೀರಿ. ಗುಲ್ಬರ್ಗದಲ್ಲಿ ಮುಖ್ಯಮಂತ್ರಿಗಳು ಎಲ್ಲ ಭೂ ಅಭಿವೃದ್ಧಿ ಬ್ಯಾಂಕುಗಳನ್ನೂ ಸೂಪರ್‌ಸೀಡ್ ಮಾಡುತ್ತೇವೆಂದು ಹೇಳಿದರು. ಶ್ರೀಮಾನ್ ತಂಕರ ತಳ್ವರವರು ಸರ್ಕಾರದ ಮಾತು ಕೇಳದೆ ಇರುವ ಎಲ್ಲ ಸೊಸೈಟಿಗಳನ್ನೂ ರದ್ದು ಮಾಡುತ್ತೇವೆಂದು ಹೇಳಿದ್ದಾರೆ: ನನ್ನ ಹತ್ತಿರ ಪೇಪರ್ ಕಟಿಂಗ್ಸ್ ಇವೆ; ಬೇಕಾದರೆ ತಮ್ಮ ಮುಂದೆ ಇಡುತ್ತೇನೆ. ಸರ್ಕಾರದ ಇಂಗಿತವನ್ನು ಅರಿತು ನಡೆದುಕೊಳ್ಳದ ಇರುವ ಸೊಸೈಟಿಗಳನ್ನು ರದ್ದು ಮಾಡುತ್ತೇವೆಂದು ಹೇಳಿದ್ದಾರೆ!

ಶ್ರೀ ಎಚ್. ಸಿದ್ದವೀರಪ್ಪ.—ಒಳ್ಳೆಯ ಕೆಲಸ ಮಾಡಿದೆ ಇರುವ ಸೊಸೈಟಿಗಳು ಎಂದು ಆದರ ಅರ್ಥ.

ಶ್ರೀ ಎಚ್. ಡಿ. ದೇವೇಗೌಡ.—ಸೊಸೈಟಿಯ ಅಧ್ಯಕ್ಷ ಸಂಸ್ಥಾ ಕಾಂಗ್ರೆಸ್ಸಿನವನಾಗಿದ್ದು ಒಂದು ಲಕ್ಷ ರೂಪಾಯಿ ಹೊಡೆದು, ಅವನು ಆಡಳಿತ ಕ್ರಾಂಗ್ರೆಸ್ಸಿನ ಲೇಬಲ್ ಹಚ್ಚಿಕೊಂಡರೆ ನೀತಿವಂತ ಎನ್ನುವುದು ತಮ್ಮ ತೀರ್ಮಾನ!

ಹುಲಿ ಚರ್ಮವನ್ನು ಹಾಕಿಕೊಂಡಿರುವ ಕತ್ತೆ ಹುಲಿಯಾಗುವುದಿಲ್ಲ, ಅದು ಕತ್ತೆಯೇ. ನಿಮ್ಮ ನಿರ್ಣಯ ಈ ದಿಕ್ಕಿಯಲ್ಲ. ಹೋಗಬಾರದು. ಏಕೆಂದರೆ ಈ ಹೊತ್ತು ಸಕ್ಕರೆ ವಿತರಣೆ ಹೇಗೆ ನಡೆಯುತ್ತಿದೆ ಎನ್ನುವುದನ್ನು ಹೇಳುವುದಾದರೆ, ನಾನು ಕೇವಲ ಯಾವುದೇ ಒಬ್ಬ ವ್ಯಕ್ತಿಯನ್ನು ನನ್ನ ಗುರಿಯಲ್ಲಟ್ಟುಕೊಂಡು ಮಾತನಾಡುತ್ತಿಲ್ಲ. ಒಂದು ವಿಷಯವನ್ನು ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಶಾನಕರು ಎಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ತಹಸೀಲ್ದಾರರೂ ಮತ್ತು ಪ್ರತಿಷ್ಠಿತ ರಾಜಕಾರಣಿಗಳು ಕೆಲವರು ಸೇರಿ 312 ಮೂಟೆ ಸಕ್ಕರೆ ಪತ್ತೆ ಇಲ್ಲದೆಮಾಡಿದ್ದಾರೆ. ನನಗೂ ಆ ಬಗ್ಗೆ ದೂರು ಬಂದಿತ್ತು. ಅದನ್ನು ಡಿವಿಜನಲ್ ಕಮೀಷನರಿಗೆ ಕಳುಹಿಸಿದ್ದೇನೆ ಎಂದು ಮಾನ್ಯ ರೆವೆನ್ಯೂ ಮಂತ್ರಿಗಳು ಹೇಳಿದರು. ದಳ್ಳಾಳಿಗಳನ್ನು ನಿರ್ಮೂಲ ಮಾಡುತ್ತೇವೆ ಎಂದು ಹೇಳಿ ಅದಕ್ಕೆ ಕಂಕಣಬದ್ಧವಾಗಿರುವ ಸರ್ಕಾರ ಇದ್ದೂ ಕೂಡ ಸಕ್ಕರೆ ವಿತರಣೆಯಲ್ಲಿರುವ ಲೋಪದೋಷಗಳನ್ನು ನಿವಾರಿಸುವುದಕ್ಕೆ ಸಾಧ್ಯವಾಗಲಿಲ್ಲವಲ್ಲಾ ಎಂದು ಹೇಳುತ್ತಿದ್ದೇನೆ. ನಿಮ್ಮ ಪಕ್ಷದ ಕಾರ್ಯಕರ್ತರ ಹೆಸರಿನಿಂದ ಅನ್ಯಾಯ ನಡೆದರೆ, ನಿಮ್ಮ ಬೆನ್ನ ಹಿಂದೆ ಏನಾಗುತ್ತದೆ ಎಂದು ನಿಮಗೆ ಗೊತ್ತಾಗದೆ ಇರಬಹುದು. ದೇಶದ ಜನ ನಿಮ್ಮನ್ನು ನೋಡುತ್ತಿದ್ದಾರೆ: ಆತ್ಮ ಕಡೆ ನಿಮ್ಮ ಗಮನ ಹರಿಯಲಿ ಒಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

1967 ರಲ್ಲಿ ಸಕ್ಕರೆ ಕಾರ್ಖಾನೆಗಳನ್ನೆಲ್ಲಾ ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದರು. ಉತ್ತರ ಪ್ರದೇಶದ ಸಕ್ಕರೆ ರಾಜಕಾರಣಿಗಳು ನಿಮ್ಮ ಕಂಪೆನಿಗೆ ಬಂದ ಮೇಲೆ ಆದರ ಮಾತೇ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಆದಕ್ಕಾಗಿ ನೇಮಕವಾಗಿರುವ ಕಮಿಟಿ ಆದರ ಬಗ್ಗೆ ಪರಿಶೀಲನೆ ನಡೆಸುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ಆದರ ಪರಿಣಾಮವೇನಾಯಿತು? ಈ ಹೊತ್ತು 10 ಲಕ್ಷ ಟನ್ ಸಕ್ಕರೆ ಕೊರತೆ. ಆದಕ್ಕೆ ನಾನು ಹೇಳಿದ್ದು, ವಿವೇಕರಹಿತವಾದ ನಿರ್ಣಯಗಳು, ಅದೂರ ದೃಷ್ಟಿಯ ನಿರ್ಣಯಗಳು, ಏನು ತೆಗೆದುಕೊಂಡಿದ್ದೀರಿ. ಆದರಿಂದಾದ ಈ ಗೊಂದಲಕ್ಕೆ ತಾವೇ ಕಾರಣರು ಎನ್ನುವುದನ್ನು, ಒಪ್ಪಿಕೊಳ್ಳಬೇಕಾಗುತ್ತದೆ. 1967-68ರಲ್ಲಿ ಸಕ್ಕರೆ ಬೆಲೆ ಒಂದು

(ಶ್ರೀ ಎಚ್. ಡಿ. ದೇವೇಗೌಡ)

ಟೀಲಕ್ಕೆ 430 ರೂಪಾಯಿ ಇತ್ತು. 1968-69ರಲ್ಲಿ 175 ರೂಪಾಯಿ ಆಯಿತು. ಆ ವರ್ಷದ ಉತ್ಪಾದನೆ 44 ಲಕ್ಷ ಟನ್. ಆದರೆ ಈ ಹೊತ್ತು 10 ಲಕ್ಷ ಟನ್ ಕೊರತೆಯಾಗಬೇಕಾದರೆ ಇದಕ್ಕೆ ಯಾರು ಕಾರಣ ? ಯಾವ ಖಾನಗಿಯವರೂ ಕೂಡ ಮುಂದೆ ಬರುವುದಕ್ಕೆ ತಯಾರಿಲ್ಲ. ಈ ಹೊತ್ತು ಸಹಕಾರ ಸಕ್ಕರೆ ಕಾರ್ಖಾನೆಗಳು ಮುಂದಗತಿಯಲ್ಲಿ ನಡೆಯುತ್ತಿವೆ.

ಮಾನ್ಯ ರಾಜ್ಯಪಾಲರು ನಿರುದ್ಯೋಗ ಸಮಸ್ಯೆ ಬಗ್ಗೆ ಒಂದು ಮಾತನ್ನೂ ಆಡಿಲ್ಲ. ಬಹುಶಃ ಜನತೆ ಇದನ್ನು ಮರೆಯಲಿಕ್ಕೆ ನಾವು ಬಿಡುವುದಿಲ್ಲ. ದುರ್ಭಿಕ್ಷವಧಿಂದ 27ಕ್ಕೆ 27 ಜನರೂ ಲೋಕ ಸಭೆ ಚುನಾವಣೆಯಲ್ಲಿ ಸೋತರು. ಆದರೆ ನಾವು 23 ಜನರ ಕಂಪನಿ ಇಲ್ಲಿ ಕುಳಿತು ನಿಮ್ಮನ್ನು ಬಿಡುವುದಿಲ್ಲ. ಮುಖ್ಯ ತೆಗೆದುಕೊಂಡು ನಿಮ್ಮ ತಲೆ ಮೇಲೆ ಹೊಡಯುತ್ತಿರುತ್ತೇವೆ. ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುತ್ತೇವೆಂದು ಹೇಳಿದ್ದರು. ಆದರೆ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವುದಕ್ಕೆ ಏನು ಸಾಧನೆ ಮಾಡಿದ್ದಾರೆಂದು ಹೇಳಿಲ್ಲ. ಅಧಿಕಾರಕ್ಕೆ ಬಂದ ತಾರುಣ್ಯದಲ್ಲಿ ಮಾಪಯಾನ ಪ್ರತಿ ಕುಟುಂಬಕ್ಕೂ ನೂರು ರೂಪಾಯಿ ವರಮಾನ ಬರತಕ್ಕ ರೀತಿಯಲ್ಲಿ ಸರ್ಕಾರ ನಿರ್ಣಯವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಿದರು. ಆದರೆ ಕಲ್ಕತ್ತದ ಬದಾನ್‌ಗರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಐದು ಲಕ್ಷ ಮಂದಿ ವಿದ್ಯಾವಂತ ನಿರುದ್ಯೋಗಿಗಳಿಗೆ ಮಾತ್ರ ಕೆಲಸ ಒದಗಿಸುವುದಕ್ಕೆ ಸಾಧ್ಯ, ಉಳಿದ ನಿರುದ್ಯೋಗ ವಿದ್ಯಾವಂತರಿಗೆ ಕೆಲಸ ಹುಡುಕತಕ್ಕ ಹೊಣೆಗಾರಿಕೆ ಅವರ ಮೇಲೆಯೇ ಬಿದ್ದಿದೆ ಎಂದು ಪ್ರಧಾನಿಯವರು ಹೇಳಿದ್ದಾರೆ. ತಮ್ಮ ಪ್ರಗತಿಪರವಾದ ಕಾರ್ಯಕ್ರಮ ಎಲ್ಲಿ ಹೋಯಿತು ? ಈಗ ಹೊಸ ಸ್ಲೋಗಾನ್ ಶುರು ಮಾಡಿದ್ದಾರೆ. ಪ್ರಗತಿಪರವಾದ ಕಾರ್ಯಕ್ರಮಗಳಿಗೆ ವಿರೋಧಪಕ್ಷದವರು ಅಡ್ಡಿ ಮಾಡುವುದಕ್ಕೆ ಹೊರಟಿದ್ದಾರೆ. ಎಷ್ಟು ದೂರ ಈ ರೀತಿ ಜನರನ್ನು ವಂಚನೆ ಮಾಡುವುದಕ್ಕೆ ಸಾಧ್ಯ ? ಪತ್ರಿಕೆಗಳವರು ಅಡ್ಡಿ ಬರುತ್ತಾರಂತೆ. ಪತ್ರಿಕೆಗಳಿಗೆ ಬೆನ್ನು ಇಲ್ಲ, ಅವರೂ ಅಡ್ಡಿ ಬರುತ್ತಾರೆಂದು ಹೇಳುತ್ತಿದ್ದಾರೆ. ಅವರಿಗೆ ಸರ್ಕಾರದವರು ಕೊಡುವ ಕೆಲವು ಸವಲತ್ತುಗಳಿಗಾಗಿ ಎಲ್ಲಿ ಹೊಟಕು ಬರುತ್ತದೆಯೋ ಎಂದು ಅವರು ನಿಮ್ಮನ್ನು ಹಾಡಿ ಹೊಗಳಿದರು. ಅವರೂ ಅಡ್ಡಿ ಬರುತ್ತಿದ್ದಾರೆಂದು ಹೇಳುತ್ತಿದ್ದಾರೆ. ಆ ಮೇಲೆ ಸಮಾಜದಲ್ಲಿರುವ ಕೆಲವು ಹಿತಾಸಕ್ತಿಗಳು ಅಡ್ಡಿ ಬರುತ್ತವೆ ಎಂದೂ ಹೇಳಿದ್ದಾರೆ.

ನಿರುದ್ಯೋಗ ಸಮಸ್ಯೆ ಈ ಹೊತ್ತು ಬೃಹದಾಕಾರವಾಗಿ ಬೆಳೆಯುತ್ತಿದೆ, ಅದು ರಾಷ್ಟ್ರವನ್ನು ಕಾಡುತ್ತಿದೆ. ಅದು ನಿಮ್ಮನ್ನು ಆಹುತಿ ತೆಗೆದುಕೊಳ್ಳುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಯಾರೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇಂದು ದೇಶದಲ್ಲಿ ವಿದ್ಯಾವಂತ ತರುಣರು ಯಾರು ನಿರುದ್ಯೋಗಿಗಳಾಗಿದ್ದಾರೆ ಅವರೇ ನಿಮಗೆ ಮುಂದೆ ಕಂಟಕಪ್ರಾಯರಾಗುತ್ತಾರೆ.

4-30 P. M.

ಶ್ರೀ ಎಸ್. ಎಂ. ಕೃಷ್ಣ.—ಅದು ಸಮಾಜಕ್ಕೆ ಆಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಮಾಜವೇ ಆಲೋಚನೆ ಮಾಡತಕ್ಕ ಕಾಲದಲ್ಲ ರಾಜಕೀಯಕ್ಕೆ ತರುಣರು ಸಿಗುವುದು ವಿರಳ. ನಮಾಜದಲ್ಲಿ ಯಾರೇ ಇರಲಿ ಅದರಲ್ಲಿ ಶ್ರೀಮಾನ್ ಕೃಷ್ಣಾರವರು ಹಾಗೂ ದೇವೇಗೌಡರೂ ಸಹಿತ ಸೇರಿಕೊಳ್ಳುತ್ತಾರೆ. ಇದರಲ್ಲಿ ನಿಮ್ಮ ಕುರ್ಚಿಯ ಚಿಂತನೆ ಹಾಗೂ ನಮ್ಮ ಕುರ್ಚಿಯ ಚಿಂತನೆಯಲ್ಲ. ನಿರುದ್ಯೋಗದ ಚಿಂತನೆಯಿಂದಾಗಿ ವಿದ್ಯಾವಂತ ತರುಣರಿಂದ ನಿಮಗೆಲ್ಲಾ ತೊಂದರೆ ಬರುತ್ತದೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶದ ಜನರು ಸುಮಾರು ನಾಲ್ಕು ಅಥವಾ ನಾಲ್ಕೂವರೆ ಕೋಟಿ ಜನರು ಇದ್ದರೂ ಇದರ ಬಗ್ಗೆ ಒಂದು ಚಕಾರವನ್ನು ಕೂಡ ಇದರಲ್ಲಿ ಹೇಳಲಿಲ್ಲ ಮತ್ತು ಇದರ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಅದನ್ನು ಕೂಡ ಹೇಳಲಿಲ್ಲ.

ಇನ್ನು ಇಂಡಸ್ಟ್ರಿಯಲ್ ಗ್ರೋತ್ ಬಗ್ಗೆ ಹೇಳಬೇಕಾದರೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣರವರು ಈಚೆಗೆ ಮಂಗಳೂರಿಗೆ ಹೋಗಿ ಅಲ್ಲಿ ಫರ್ಟಿಲೈಸರ ಫ್ಯಾಕ್ಟರಿಯನ್ನು ಉದ್ಘಾಟನೆ ಮಾಡುವಾಗ ಮಾಡಿದ ಭಾಷಣವನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಇದೊಂದು ಹಳೆಯ ಫ್ಯಾಕ್ಟರಿ ಇದನ್ನು ಇವರು ಬಂದ ಮೇಲೆ ಮುಂದೆ 1974ರ ವೇಳೆಗೆ ಗೊಬ್ಬರ ಒದಗಿಸುತ್ತೇವೆಂದು ಹೇಳುತ್ತಿದ್ದಾರೆ, ಆದರೆ ಇಂದು ದೇಶದಲ್ಲಿ ಇಂಡಸ್ಟ್ರಿಯಲ್ ಗ್ರೋತ್ ನೋಡಿದರೆ ಇದು ಸಾಕಷ್ಟು ಇಳಿ

ಮುಖವಾಗುತ್ತಿದೆ, ಇದಕ್ಕೆ ನಮ್ಮ ಸರಕಾರದ ಧೋರಣೆಯೇ ಕಾರಣ. ಮತ್ತು ನಿರುದ್ಯೋಗದ ಸಮಸ್ಯೆಯನ್ನು ಕೂಡ ಬಗೆಹರಿಸುವುದಕ್ಕೆ ಸಾಧ್ಯವಿಲ್ಲದೆ ಇರುವುದಕ್ಕೆ ಇದೂ ಒಂದು ಕಾರಣವಾಗಿದೆ. ಇನ್ನು ಹೊಸಪೇಟೆ ಸ್ಟೀರ್ ಪ್ಲಾಂಟು ಯಾವ ಘಟ್ಟದಲ್ಲಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಇಲ್ಲಿ ಹೇಳಬೇಕು, ಹಾಗೇ ಕುದುರೆ ಮುಖ ಕಬ್ಬಿಣದ ಅದಿರಿನ ಯೋಜನೆ ಏನಾಗಿದೆ ? ಇದೇನೂ ಆಗಿಲ್ಲ. ಇದನ್ನೆಲ್ಲಾ ಮುಂದೆ ಕ್ವೆಗಾರಿಕೆ ವಿಚಾರ ಬಂದಾಗ ಹೇಳುತ್ತೇನೆ, ಅಂತೂ ನಮ್ಮ ಮಂತ್ರಿಗಳು ಎಲ್ಲ ನೋಡಿದರೂ ಕೋಟಿಗಟ್ಟಲೆ, ಎಂದು ಹೇಳುತ್ತಲೇ ಬರುತ್ತಿದ್ದಾರೆ. ಮೈಸೂರಿನಲ್ಲಿ ಎಷ್ಟು ಕಡೆಗಳಲ್ಲಿ ಎಷ್ಟು ಕೋಟಿಗಳು ವೆಚ್ಚವಾಗಿದೆ ಎನ್ನುವುದನ್ನು ಬರೆದುಕೊಳ್ಳಲು ಸರಕಾರದವರು ಇದಕ್ಕೆ ಪ್ರತ್ಯೇಕವಾದ ಒಬ್ಬ ಗುಮಾಸ್ತರನ್ನು ಇಟ್ಟುಕೊಂಡು ಅವರ ಮೂಲಕ ಕೋಟಿಗಳ ಲೆಕ್ಕ ಬರೆಸುವುದು ಒಳ್ಳೆಯದು. ಬಂದು ಕಡೆ 80 ಕೋಟಿ ಎಂದು ಹೇಳುತ್ತಾರೆ. ಇನ್ನೊಂದು ಕಡೆ ರೇಷ್ಮೆಗಾಗಿ ಇಷ್ಟು ಕೋಟಿ. ಹೀಗೆ ಇನ್ನಷ್ಟು ಕೋಟಿಯಷ್ಟು ಹಣ ಸರಕಾರದಲ್ಲಿ ಎಲ್ಲಿ ಓಡಾಡುತ್ತಿದೆ ಇದನ್ನು ತಿಳಿದುಕೊಳ್ಳುವುದೇ ಬಹಳ ಕಷ್ಟವಾಗಿದೆ ಇದರ ವಾತಾವರಣ ಎಲ್ಲ ಗೊಂದಲಮಯವಾಗಿದೆ. ಹಿಂದೆ ಒಂದು ಕಡೆ ತಾವೆಲ್ಲ ಹೇಳುತ್ತಿದ್ದಿರಿ ಒಂದು ರೀತಿಯಾದ ನವಯುಗ ನಿರ್ಮಾಣವಾಗುತ್ತಿದೆ ಇದು ಆಡಳಿತದ ಕಾಂಗ್ರೆಸ್ಸು ಇಂದು ನಿಮ್ಮ ಆಡಳಿತ ಕಾಂಗ್ರೆಸ್ಸೇ ಕೇಂದ್ರದಲ್ಲೂ ಇದೆ. ನಿಮ್ಮ ಆಡಳಿತವೇ ಇರುವಾಗ ನಮ್ಮ ರಾಜ್ಯದಲ್ಲಿ, ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಇಲ್ಲಿಯು ಎಷ್ಟು ಲೆಟರ್ ಆಫ್ ಇಂಟೆಂಟ್‌ನ್ನು ತಂದಿದ್ದೀರಿ ಅದನ್ನು ತಿಳಿಸಬೇಕು ಎಂದು ಇಲ್ಲಿ ಕೇಳುತ್ತೇನೆ.

ಮಹಾರಾಷ್ಟ್ರಕ್ಕೆ ನಾಲ್ಕು ರೈಲ್ವೇ ಕಾಮಗಾರಿಗಳನ್ನು ಬರಗಾಲದ ಕೆಲಸಗಳೆಂದು ತೆಗೆದು ಕೊಳ್ಳಬೇಕೆಂದು ಕೇಂದ್ರದ ಪ್ರಧಾನಿಯವರು ಈಚೆಗೆ ಮಹಾರಾಷ್ಟ್ರಕ್ಕೆ ಬಂದಾಗ ಸ್ಥಳದಲ್ಲೇ ಮಂಜೂರಾತಿ ಕೊಟ್ಟರು. ಅದೇರೀತಿ ನಮ್ಮ ರಾಜ್ಯದ ಬರಗಾಲದ ಪರಿಸ್ಥಿತಿಯನ್ನು ಕೇಂದ್ರಕ್ಕೆ ತಿಳಿಸಿದಾಗ ಅವರೇನು ಸಹಾಯ ಕೊಟ್ಟರು ಅದನ್ನು ತಿಳಿಸಬೇಕು. ಮೊದಲು 28 ಕೋಟಿ ಎಂದಿರಿ. ಈಚೆಗೆ ಇದನ್ನು 150 ಕೋಟಿ ಎನ್ನುತ್ತಿದ್ದೀರಿ. ಆದರೆ ಮೊದಲೇ ಹೇಳಿಕೆ ಕೊಡುವಾಗ 150 ಕೋಟಿ ಎಂದು ಹೇಳಿದ್ದರೆ ಇಂತಹ ಒಂದು ಪರಿಸ್ಥಿತಿಯೇ ಬರುತ್ತಿರಲಿಲ್ಲ. ಪ್ರಧಾನ ಮಂತ್ರಿಗಳು ಮಹಾರಾಷ್ಟ್ರಕ್ಕೆ ಬಂದಾಗ ನಾಲ್ಕು ರೈಲ್ವೆ ಯೋಜನೆಗಳನ್ನು ಮಂಜೂರು ಮಾಡಿದರು. ಇಂದು ಮಹಾರಾಷ್ಟ್ರದಲ್ಲಿ ರೈಲ್ವೆ ಪರಿಸ್ಥಿತಿ ಹೇಗಿದೆ ನಮ್ಮ ಮೈಸೂರಿನಲ್ಲಿ ಹೇಗಿದೆ ಎಷ್ಟು ಪ್ರಮಾಣದಲ್ಲಿದೆ ಇದನ್ನು ಹೋಲಿಸಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಇದನ್ನು ನೋಡಿದರೆ ರೈಲ್ವೆ ವಿಚಾರದಲ್ಲಿ ರೈಲ್ವೆ ಪ್ರಗತಿ ಮೈಸೂರಿನಲ್ಲಿ ಹೆಚ್ಚಾಗಿದೆಯೋ ಇಲ್ಲವೇ ಮಹಾರಾಷ್ಟ್ರದಲ್ಲಿ ಹೆಚ್ಚಾಗಿದೆಯೋ ಅದನ್ನು ನೋಡಿದರೆ ಮೈಸೂರು ರಾಜ್ಯದಲ್ಲಿ ರೈಲ್ವೆ ಪ್ರಗತಿ ಕುಂಟಿತವಾಗಿದೆ ಎನ್ನುವುದು ಗೊತ್ತಾಗುತ್ತದೆ. ಇದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇದನ್ನು ಸರಕಾರ ಒತ್ತಾಯ ಮಾಡಲಿಲ್ಲ. ರೈಲ್ವೆಗಳಿಗಾಗಿ ಮಂಜೂರಾತಿ ಕೊಟ್ಟಿದ್ದರೆ ಇದರಿಂದ ಎಂಪ್ಲಾಯ್‌ಮೆಂಟ್ ಪೊಟೆನ್‌ಷಿಯಾಲಿಟಿ ಕ್ರಿಯೇಟಾಗಿ ಇನ್ನು ಹೆಚ್ಚು ಜನಕ್ಕೆ ಕೆಲಸಗಳು ಸಿಗುತ್ತಿರಲಿಲ್ಲವೇ ಎಂದು ಇಲ್ಲಿ ಕೇಳುತ್ತೇನೆ. ನಮ್ಮಲ್ಲಿರುವ ರೈಲ್ವೆ ಪ್ರಾಜೆಕ್ಟುಗಳು ಎಂದರೆ ಹುಬ್ಬಳ್ಳಿ ಕಾರವಾರ, ಹುಬ್ಬಳ್ಳಿ ಟು ಷೋರಾಪುರ್ ವಯಾ ಮೀರಜ್. ಬೆಂಗಳೂರು ಮೈಸೂರು ಬ್ರಾಡ್‌ಗೇಜು ಮಾಡುವುದು, ಮಂಗಳೂರು ಟು ಹೊನ್ನಾವರ ಬೆಂಗಳೂರು ಟು ಮೀರಜ್ ರೈಲನ್ನು ಬ್ರಾಡ್‌ಗೇಜು ಮಾಡುವುದು, ಬೆಂಗಳೂರಿಂದ ಗುಂಟಕಲ್ಲು ಲೈನನ್ನು ಬ್ರಾಡ್‌ಗೇಜು ಮಾಡುವುದು ಇಂತಹ ಕೆಲಸಗಳನ್ನು ತೆಗೆದುಕೊಂಡಿದ್ದರೆ ಬರಗಾಲಕ್ಕೆ ತುತ್ತಾಗಿರುವ ಜನಕ್ಕೆ ಉದ್ಯೋಗಗಳನು ಒದಗಿಸಲು ಸಾಧ್ಯವಾಗುತ್ತಿರಲಿಲ್ಲವೆ ? ಈ ಸರಕಾರ ಕೇಂದ್ರ ಸರಕಾರದ ಮೇಲೆ ಏಕೆ ಒತ್ತಡ ತರಲಿಲ್ಲ.?

ಶ್ರೀ ಎಸ್. ಎಂ. ಕೃಷ್ಣ.—ಮಹಾರಾಷ್ಟ್ರದಲ್ಲಿ ಇರಿಗೇಷನ್ ಪೊಟೆನ್‌ಷಿಯಲ್ ಅಷ್ಟಿಲ್ಲ.

Sri H. SIDDAVEERAPPA.—We are concentrating on irrigation. The Industries Minister stated that this was only to create employment potential in both these States where there is famine.

ಶ್ರೀ ಎಚ್. ಡಿ. ದೇವೇಗೌಡ.—ರೈಲ್ವೆ ಯೋಜನೆಗಳಿಗಾಗಿ ನಾವು ಪ್ರಾಶಸ್ತ್ಯ ಕೊಡುವುದಕ್ಕಿಂತ ಇರಿಗೇಷನ್ ಕಡೆಗೆ ಪ್ರಾಶಸ್ತ್ಯ ಕೊಡಬೇಕೆಂದು ಹೇಳುವಾಗ ಸರಕಾರ ಇದರ ಬಗ್ಗೆ ಸಾಕಷ್ಟು ಅಂಕೆ ಅಂಶಗಳಿರುವ ವಿವರಗಳನ್ನು ಕೊಟ್ಟಿದ್ದರೆ ಸರಿಯಾಗಿರುತ್ತಿತ್ತು. ಸರಕಾರ ವಿವರಗಳನ್ನು ಸಭೆಯ ಮುಂದೆ ಇಡಬೇಕೆಂದು ಹೇಳುತ್ತೇನೆ. ಕೇಂದ್ರ ಸರಕಾರವನ್ನು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನ್ನು ಬರಗಾಲದ ಪ್ರಾಜೆಕ್ಟ್ ಎಂದು ಡಿಕ್ಲೇರ್ ಮಾಡಬೇಕೆಂದು ಕೇಳುತ್ತಲೇ ಇದ್ದೇವೆ. ಇದುವರೆಗೆ ಏನಾಗಿದೆ ? ಮಾನ್ಯ ಮಂತ್ರಿಗಳಾದ ಶ್ರೀ ಧಾರ್ ರವರು ಬಂದಾಗ ಅವರು ಹೇಳಿದ್ದು

(ಶ್ರೀ ಎಚ್. ಡಿ. ದೇವೇಗೌಡ)

ಬರಗಾಲಕ್ಕಾಗಿ ಕೇಂದ್ರದವರು ಅವಶ್ಯಕವಾದ ಹಣವನ್ನು ಕೊಡಲು ಪ್ರಧಾನಿಯವರು ತಮ್ಮನ್ನು ಕಳುಹಿಸಿದ್ದಾರೆಂದು ಹೇಳಿದರೇ ಏನಾ ಅಪ್ಪರು ಕೃಷ್ಣಾ ಯೋಜನೆಯನ್ನು ಬರಗಾಲದ ಪ್ರಾಜೆಕ್ಟ್ ಎಂದು ಹೇಳಿ ಅವನ್ನು ಅವರೇ ವಹಿಸಿಕೊಳ್ಳುತ್ತೇವೆಂದು ಹೇಳಲಿಲ್ಲ; ಏನೋ ಇದಕ್ಕಾಗಿ ಆರುವರೆ ಅಥವಾ ಏಳು ಕೋಟಿಯಷ್ಟು ಹಾಗೆನ್ನು ಸ್ವಲ್ಪ ಕೊಟ್ಟರೋ ಏನೋ ನಮಗೊಂದೂ ಗೊತ್ತಿಲ್ಲ. ಭಾಷಣ ಬಿಗಿಯುವುದರಲ್ಲಿ ನಮ್ಮ ಮಂತ್ರಿಗಳು ಬಹಳ ಜಾಣರು. ಇವರು ಒಂದು ಹೇಳಿಕೆ ಕೊಟ್ಟಿರುವುದನ್ನು ಪೇಪರುಗಳಲ್ಲಿ ನಾನು ಓದಿದ್ದೇನೆ. ಹಿಂದೆ ಇಪ್ಪತ್ತೈದು ವರ್ಷಗಳಲ್ಲಿ ಸುಮಾರು 20 ಸಾವಿರ ಲಿಫ್ಟ್ ಇರಿಗೇಷನ್ ಕೆಲಸಗಳನ್ನು ಮಾಡಿದ್ದರು. ಈಚೆಗೆ ಇವನ್ನು ಇನ್ನೂ 50ನಾವಿರ ಲಿಫ್ಟ್ ಇರಿಗೇಷನ್ ಬಾವಿಗಳನ್ನು ಮಾಡಲು ಇದಕ್ಕಾಗಿ 52 ಲಕ್ಷವೋ ಇಲ್ಲವೇ ಅದಕ್ಕಿಂತ ಹೆಚ್ಚಾಗಿಯೋ ಏನೋ ಹಣ ಖರ್ಚು ಮಾಡಲಾಗುತ್ತಿದೆ ಎಂದು ಒಂದು ಕಡೆ ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ.

ಶ್ರೀ ಎಂ. ಪೈ. ಫೋರ್ಪಡೆ.—ಇಪ್ಪತ್ತು ಸಾವಿರ್ ಕನ್ಸರವೇಷನ್ ಕೆಲಸಗಳಾಗಲೀ ರಸ್ತೆ ಕೆಲಸಗಳಾಗಲೀ ಮೈನರ್ ಇರಿಗೇಷನ್ ಕೆಲಸಗಳಾಗಲೀ ಇವೆಲ್ಲ ಕೆಲಸಗಳ ಬಗ್ಗೆ ಬಳ್ಳಾರಿ ಜಿಲ್ಲೆ ಒಂದನ್ನೇ ತೆಗೆದುಕೊಂಡು ಹೇಳಬೇಡಿ.. ಯಾವ ಜಿಲ್ಲೆ ಬೇಕಾದರೂ ತೆಗೆದುಕೊಳ್ಳಿ 1972ರ ವರೆಗೆ ಏನು ಕೆಲಸಗಳಾಗಿವೆ ಇದಕ್ಕಿಂತ ಹೆಚ್ಚು ಕೆಲಸಗಳು ಒಂದು ವರ್ಷದಲ್ಲಿ ಇಲ್ಲವೇ ಎರಡು ವರ್ಷಗಳಲ್ಲಿ ಎಂದರೆ 1972-73 ಹಾಗೂ 1973-74ರಲ್ಲಿ ಹಿಂದೆ ಮಾಡಿರುವುದಕ್ಕಿಂತ ದೇಶದಲ್ಲಿ ಜಾಸ್ತಿ ಕೆಲಸಗಳಾಗಿವೆ. ಎಷ್ಟೋ ಕಡೆ ಒಂದೇ ವರ್ಷದಲ್ಲಿ 1972-73ರಲ್ಲಿ ಸಾಯಿಲ್ ಕನ್ಸರವೇಷನ್ ಕೆಲಸಗಳು, ರಸ್ತೆ ಕೆಲಸಗಳು ಮೈನರು ಇರಿಗೇಷನ್ ಕೆಲಸಗಳು ಇವುಗಳು ಹಿಂದೆ ಆಗಿರುವುದಕ್ಕಿಂತ ಜಾಸ್ತಿಯಾಗಿದೆ ಎನ್ನುವುದಕ್ಕೆ ನಾನು ತಮಗೆ ಬಲ್ಲ ವಿವರಗಳಿರುವ ಅಂಕೆ ಅಂಶಗಳನ್ನು ಕರಾರುವಾಕ್ಕಾಗಿ ಮಾಹಿತಿಗಳ ಸಹಿತ ಪಿಂಟು ಮಾಡಿ ಓದಿಸಿಕೊಡುತ್ತೇನೆ, ತಾವು ಇಲ್ಲಿ ಪದೇ ಪದೇ ಎಂಪ್ಲಾಯ್‌ಮೆಂಟ್ ಬಗ್ಗೆ ಇಲ್ಲಿ ಹೇಳುತ್ತಿದ್ದೀರಿ. ಯಾವಾಗಲೂ ಬರಗಾಲ ಬಂದಾಗ ಸಾಮಾನ್ಯವಾಗಿ ಸರಕಾರ ರಾಜ್ಯದಲ್ಲಿರತಕ್ಕ ಕಾರ್ಯಕ್ರಮಗಳನ್ನು ಮಾಡುತ್ತಿರುವುದನ್ನು ತಾವು ನೋಡಿದ್ದೀರಿ. ಇದರಲ್ಲಿ ಹತ್ತರಲ್ಲಿ ಒಂದಂಶ ಕೂಡ ಸರಕಾರ ಆಗ ವೆಚ್ಚ ಮಾಡುತ್ತಿರಲಿಲ್ಲ. ನುವಾರು 5-6-7 ಕೋಟಿ ರೂಪಾಯಿಯಷ್ಟು ಮಾತ್ರ ಖರ್ಚು ಮಾಡುತ್ತಿದ್ದರು. ಇಂತಹ ಬರಗಾಲ ಹಿಂದೆಂದೂ ಬಂದಿರಲಿಲ್ಲ. ಈಗಾಗಲೇ ಏಳೆಂಟು ಕೋಟಿ ರೂಪಾಯಿಯಷ್ಟು ಹಣ ವೆಚ್ಚ ಮಾಡಿ ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನೂ ಹಾಕಿಕೊಂಡಿದ್ದೇವೆ.

ಮುಂದಿನ ಮಾರ್ಚ್ ಮತ್ತು ಏಪ್ರಿಲ್ ಮೇ ತಿಂಗಳುಗಳಲ್ಲಿ 10 ಲಕ್ಷ ಜನರಿಗೆ ಕೆಲಸ ಕೊಡಬೇಕಾದ ಪರಿಸ್ಥಿತಿ ಬಂದರೆ ಕೊಡುತ್ತೇವೆ ಎಂದು ಸರ್ಕಾರದ ವತಿಯಿಂದ ಹೇಳಿದ್ದೇವೆ. ಸಣ್ಣ ನೀರಾವರಿಯಲ್ಲಿ ಎಷ್ಟು, ದೊಡ್ಡ ನೀರಾವರಿಯಲ್ಲಿ ಎಷ್ಟು, ರಸ್ತೆ ಕೆಲಸದಲ್ಲಿ ಎಷ್ಟು, ಸಾಯಿಲ್ ಕನ್ಸರವೇಷನ್‌ನಲ್ಲಿ ಎಷ್ಟು ಜನರಿಗೆ ಕೆಲಸಗಳನ್ನು ಕೊಡಲು ಸಾಧ್ಯ ಎಂಬ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ತಾಲ್ಲೂಕ್‌ವೈಸ್ ಕಾರ್ಯಕ್ರಮವನ್ನು ಯಾವ ಯಾವ ತಿಂಗಳುಗಳಲ್ಲಿ ಎಷ್ಟೆಷ್ಟು ಜನರಿಗೆ ಕೆಲಸ ಕೊಡಲಾಗುತ್ತದೆಂಬುದನ್ನು ಅಚ್ಚು ಹಾಕಿಸಿ ಮಾನ್ಯ ಸದಸ್ಯರಿಗೆ ಕೊಡುತ್ತೇವೆ. ಇದಕ್ಕಿಂತ ಹೆಚ್ಚು ಯಾವ ಸರ್ಕಾರವೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅರ್ಥ ಸಚಿವರು ವಿವರಣೆ ಕೊಟ್ಟರು. ಹಿಂದೆ ಯಾವ ಸರ್ಕಾರವೂ ಕೂಡ ಬರಗಾಲ ಬಂದಾಗ ಇಷ್ಟೊಂದು ಹಣವನ್ನು ಖರ್ಚು ಮಾಡಿಲ್ಲ ಎಂದು ಹೇಳಿದರು. ಆದರೆ ಇಂತಹ ಒಂದು ಬರಗಾಲ ಹಿಂದೆ ಬಂದಿರಲಿಲ್ಲ. ಹಸಿದವರಿಗೆ ಅನ್ನ ಹಾಕಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಹಾಕುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ನೂರು ವರ್ಷಗಳ ಅನುಭವವಿರುವ ವೃದ್ಧರು ಇಂತಹ ಒಂದು ಬರಗಾಲವನ್ನು ನೋಡಿರಲಿಲ್ಲವೆಂದು ಹೇಳುತ್ತಿದ್ದಾರೆ. ಅವರಿಂದ ಇದನ್ನು ನಿವಾರಣೆ ಮಾಡಲು ಸರ್ಕಾರದವರು ಏನು ಒಂದು ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ, ಅವರಿಂದ ಸಂತೃಪ್ತರಾಗದೆ ಇನ್ನೂ ಹೆಚ್ಚಿನ ಕೆಲಸಗಳನ್ನು ಕೈಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ. ಹಿಂದೆ ಯಾವ ಸರ್ಕಾರ ಎಷ್ಟು ಕೆಲಸ ಮಾಡಿತ್ತು ಎಂದು ಹೇಳುವುದು ಬೇಡ, ಇಂದು ಪರಿಸ್ಥಿತಿ ತೀರ ಉಲ್ಬಣಗೊಂಡಿದೆ.

ಶ್ರೀ ಎಂ. ವೈ. ಘೋರ್ಪಡೆ.—ಇಂದು ಗುಲ್ಬರ್ಗ ಜಿಲ್ಲೆಯಲ್ಲಿ ಎರಡು ಲಕ್ಷ ಜನರಿಗೆ, ಬಿಜಾಪುರ ಜಿಲ್ಲೆಯಲ್ಲಿ 2 ಲಕ್ಷ ಜನರಿಗೆ, ಬೀದರ ಜಿಲ್ಲೆಯಲ್ಲಿ ಒಂದು ಲಕ್ಷ ಜನರಿಗೆ ಮತ್ತು ಬೆಳಗಾಂ ಜಿಲ್ಲೆಯಲ್ಲಿ ಒಂದು ಲಕ್ಷ ಜನರಿಗೆ, ಈ ರೀತಿ ಒಟ್ಟು 6 ಲಕ್ಷ ಜನರಿಗೆ ಕೆಲಸ ಕೊಡಲಾಗಿದೆ. ಮಾರ್ಚ್ ಏಪ್ರಿಲ್ ತಿಂಗಳುಗಳಲ್ಲಿ ಈ ಸಂಖ್ಯೆಯನ್ನು ಬೇಕಾದರೆ ಇನ್ನೂ ಜಾಸ್ತಿ ಮಾಡುತ್ತೇವೆ. ಆ ಒಂದು ಕಮಿಟಿಮೆಂಟನ್ನು ಮಾಡಿಕೊಟ್ಟಿದ್ದೇವೆ. ಇದನ್ನು ಒಪ್ಪಬೇಕಾದುದು ನಿಮ್ಮ ಧರ್ಮವೆಂದು ಹೇಳುತ್ತೇನೆ. ಹಿಂದೆ ಯಾವ ಸರ್ಕಾರವೂ 6 ಲಕ್ಷದಷ್ಟು ವಿದ್ಯಾವಂತರಲ್ಲದ ಜನರಿಗೆ ಕೆಲಸ ಕೊಟ್ಟಿರಲಿಲ್ಲ ಎಂದು ಹೇಳಬಹುದು. ನಾವು ಇನ್ನೂ ಹೆಚ್ಚಿನ ಜನರಿಗೆ ಕೆಲಸ ಕೊಡಲು ತಯಾರಿದ್ದೇವೆ. ಆದರೆ ಕೆಲಸ ಮಾಡಲು ಒಂದೊಂದು ಕಡೆ ಜನರು ಬರುತ್ತಿಲ್ಲ. ಇದು ಕೇವಲ ಭಾಷಣವಲ್ಲ. ಸ್ಕೀಮ್ ಪ್ಲೈನ್ ಮತ್ತು ತಾಲ್ಲೂಕ್‌ವೈಸ್ ಕೆಲಸ ಮಾಡುತ್ತಿದ್ದೇವೆ. This is a clear-cut statement on will have to wellcome if or oppose it. You cannot ignore it.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮಾನ್ಯ ಅರ್ಥಸಚಿವರು ಕೆಲವು ವಿವರಣೆ ಕೊಟ್ಟರು. ಪ್ಲಾನ್ ಆಂದರೇನು ಎಂಬುದರ ಬಗ್ಗೆ ತಾವು ಪೊನ್ನೆ ಪತ್ರಿಕೆಗಳಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಬರಗಾಲದ ಬಗ್ಗೆ ಒಂದು ಬ್ಲೂಪ್ರಿಂಟ್ ತಯಾರು ಮಾಡಿ ಅದನ್ನು ಬಡ್ಜೆಟ್ ಮಂಡಿಸುವ ಕಾಲಕ್ಕೆ ಒದಗಿಸಲಾಗುತ್ತದೆಂದು ಹೇಳಿದ್ದೀರಿ. ಬ್ಲೂಪ್ರಿಂಟ್ ತಯಾರು ಮಾಡಿ, ಅದರ ಬಗ್ಗೆ ಸರ್ಕಾರದವರು ತಮ್ಮ ಅಭಿಪ್ರಾಯ ಸೂಚಿಸಿ, ನಂತರ ನಾವು ಅದರ ಬಗ್ಗೆ ನಮ್ಮ ಅಭಿಪ್ರಾಯವನ್ನು ತಿಳಿಸಿದ ಮೇಲೆ ಕಾರ್ಯಗತ ಮಾಡುವುದಾದರೆ ಅದಕ್ಕೆ ಬಹಳ ಕಾಲ ತೆಗೆದುಕೊಳ್ಳುತ್ತದೆ. ಆ ಒಂದು ಪ್ರವೃತ್ತಿ ಬೇಡ. ಇವೊತ್ತು ಇರತಕ್ಕಂಥ ಪರಿಸ್ಥಿತಿಯಲ್ಲಿ ಬ್ಲೂಪ್ರಿಂಟ್ ಬಗ್ಗೆ ಡಿಸ್‌ಕಷನ್ ಮಾಡುವುದು ಬೇಡ. ಇರತಕ್ಕಂಥ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಷ್ಟರಮಟ್ಟಿಗೆ ಜಾಗರೂಕತೆಯನ್ನು ವಹಿಸಬೇಕೋ ಅಷ್ಟರಮಟ್ಟಿಗೆ ಒಂದು ನಿರ್ಣಯವನ್ನು ಸರ್ಕಾರದವರು ತೆಗೆದು ಕೊಂಡು ಕೆಲಸ ಮಾಡುವುದು ಒಳ್ಳೆಯದು. ಬರಗಾಲ ಕ್ಕಾಗಿ 8—10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿಕೊಳ್ಳುವುದು ಬೇಡ. ಈ ಬಗ್ಗೆ ಸಂತೃಪ್ತ ಮನೋಭಾವದ ವಾತಾವರಣ ತಮ್ಮ ಮನಸ್ಸಿನಲ್ಲಿರುವುದು ಬೇಡವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಬಳ್ಳಾರಿ ಜಿಲ್ಲೆಗೆ ಅನುಕೂಲ ಮಾಡಿರುವುದರ ಬಗ್ಗೆ ನನಗೆ ಸಂಕಟ ಇಲ್ಲ. ಪತ್ರಿಕೆಯಲ್ಲಿ ವಿಷಯ ಬಂದಿದ್ದಕ್ಕೆ ಅದನ್ನು ಹೇಳಿದೆ. ರಾಜ್ಯದ ಬರಗಾಲ ಪ್ರದೇಶಗಳಿಲ್ಲಿ ಕೆಲಸ ಮಾಡಿದ ಅನೇಕ ಜನರಿಗೆ ಇನ್ನೂ ಹಣ ಕೊಟ್ಟಿಲ್ಲ. ಇಂದು ಹಳೆಯ ಮೈಸೂರಿನ ಬಹು ಭಾಗದಲ್ಲಿ ಒಂದು ಹೊಸ ವಾತಾವರಣ ಬಂದಿದೆ. ಏನೆಂದರೆ, ಈ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಏನು ಪ್ಲಾನ್ ಪ್ರೊಗ್ರಾಮ್ ಇದೆ ಮತ್ತು ಇದಕ್ಕಾಗಿ ಖರ್ಚು ಮಾಡಲು ಏನು ನಾರ್ಮಲ್ ಗ್ರಾಂಟ್ಸ್ ಇದೆ, ಅದನ್ನು ಬರಗಾಲದ ಬವಣೆಯಲ್ಲಿರತಕ್ಕಂಥ ಪ್ರದೇಶಗಳಿಗೆ ಡೀವಿಯೇಟ್ ಮಾಡುತ್ತಿರುವುದಕ್ಕಾಗಿ. ಈ ರೀತಿ ಸರ್ಕಾರದವರು ಮಾಡುತ್ತಿರುವುದು ಸರಿಯಲ್ಲ. ಈ ಒಂದು ಅಭಿಪ್ರಾಯ ಹಳೆಯ ಮೈಸೂರಿನ ಭಾಗದ ಜನರಲ್ಲಿ ಬರುವುದಕ್ಕೆ ಅವಕಾಶ ಕೊಡಬಾರದೆಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬರಗಾಲಕ್ಕಾಗಿ ಖರ್ಚುಮಾಡುವ ಹಣದ ಪೂರ್ಣ ಜವಾಬ್ದಾರಿಯನ್ನು ಕೇಂದ್ರವೇ ವಹಿಸಿಕೊಳ್ಳಬೇಕಾಗಿದೆಯಲ್ಲದೆ, ನಾರ್ಮಲ್ ಗ್ರಾಂಟ್ಸ್ ಏನಿದೆ, ಅದು ಅಯಾ ಭಾಗಗಳಲ್ಲಿಯೇ ಖರ್ಚು ಆಗುವಂತೆ ಸರ್ಕಾರದವರು ನೋಡಿಕೊಳ್ಳಬೇಕಾಗಿದೆ.

ಕೊನೆಯದಾಗಿ ಎಂ. ಎಸ್. ಆರ್. ಟಿ. ಸಿ. ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಅಜೀಜ್‌ಸೇಟ್ ಅವರು ದೆಲ್ಲಿಗೆ ಹೋಗಿದ್ದಾರೆ. ಬಸ್ ರಾಷ್ಟ್ರೀಕರಣವಾದ ಮೇಲೆ ಇದಕ್ಕಾಗಿ ನಾವು ಸುಮಾರು 25 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದೇವೆ. ಈಗ ಮೇಜರ್ ಇರಿಗೇಷನ್ ರಾಜ್ಯಮಂತ್ರಿಗಳು ಶಿವಮೊಗ್ಗದಲ್ಲಿ ಮಾನ್ಯ ಧರ್ಮವೀರರ ಆಶಯದ ಇದ್ದಾಗ ಒಂದು ಭಾಷಣ ಬಿಗಿಯುತ್ತಾ, ಮಾನ್ಯ ಧರ್ಮವೀರರು ಮಾನಸ್ಸಿಗೆ ಬಂದ ಹಾಗೆ ಆನ್-ಕಾಂಟ್ರಾಕ್ ಬಸ್‌ಗಳಿಗೆ, ಮತ್ತು ಲಕ್ಷುರಿ ಬಸ್‌ಗಳಿಗೆ ಪರ್ಮಿಟ್ ಕೊಡುತ್ತಿದ್ದಾರೆಂದು ಹೇಳಿದ್ದರು. ಇಂದು ಮಾನ್ಯ ಅಜೀಜ್ ಸೇಟ್ ಅವರ ಕಾಲದಲ್ಲಿ ಯಾವ ರೀತಿ ನಡೆಯುತ್ತಿದೆ ಎಂದರೆ, ಹಗಲು ಹೊತ್ತಿನಲ್ಲಿಯೇ ಹಿಂದೆ ಒಂದು ಕಾಂಟ್ರಾಕ್ಟ್ ಬಸ್, ಮುಂದೆ ಒಂದು ಕಾಂಟ್ರಾಕ್ಟ್ ಬಸ್, ಇವೆರಡರ ಮಧ್ಯೆ ಎಂ. ಎಸ್. ಆರ್. ಟಿ. ಸಿ. ಬಸ್ ಓಡುತ್ತಿವೆ. ಪೊನ್ನೆ ಹಾಸನ ಜಿಲ್ಲೆಯಲ್ಲಿ ಒಬ್ಬ ತರುಣ ಪೋಲೀಸ್ ಅಧಿಕಾರಿ ಒಂದು ಕಾಂಟ್ರಾಕ್ಟ್ ಬಸ್‌ನ್ನು ಹಿಡಿದು ನಿಲ್ಲಿಸಿದಾಗ, ಆ ಬಸ್ಸಿನ ಮೂಲಕ ಹತ್ತಾರು ಜನ ಪ್ರಯಾಣಕರ ಎದುರಿನಲ್ಲಿಯೇ ನಾನು ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಪರ್ಮಿಟ್ ತೆಗೆದುಕೊಂಡಿದ್ದೇನೆ, ನನ್ನನ್ನು ಅರ್ಟಾಡಿಸುವುದಕ್ಕೆ ಯಾರಿಗೂ ಅಗುವುದಿಲ್ಲ ಎಂದು ಪೋಲೀಸ್ ಅಧಿಕಾರಿಯ ಎದುರು ಚಾಲೆಂಜ್ ಹಾಕಿದ.

MR. DEPUTY SPEAKER.—Why not the member give the Bus number and other details ? It becomes a vague allegation. If he can give concrete instances, it may help the Government for an enquiry.

ಶ್ರೀ ಎಚ್. ಡಿ. ದೇವೇಗೌಡ.—10, 15, 20, 25 ಸಾವಿರ ರೂಪಾಯಿಗಳನ್ನು ಬೇಕಾದರೆ ಪರ್ಮಿಟ್ ಕೊಡಲು ತಗೆದುಕೊಳ್ಳಲಿ. ಸಂಪಾದನೆ ಸಂಬಂಧಪಟ್ಟವರಿಗೆ ಸಲ್ಲಲಿ. ಬೇಡ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಆದರೆ ನಾವು ಈ ಸಂಸ್ಥೆಯ ಮೇಲೆ 25 ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡಿದ್ದೇವೆ. ಅದಕ್ಕೆ ಕುತ್ತು ಬರದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆತರ ಕರ್ತವ್ಯ. ಇದು ಮಾನ್ಯ ಅಪೀಜ್ ಸೇಟ್ ಅವರ ಸ್ವಂತ ವ್ಯವಹಾರ ಅಲ್ಲ.

Sri C. M. ARUMUGHAM.—I just want to know whether the M. S. R. T. C. have changed the colour of the buses, because in place of the red buses that we were seeing till now, we now all sorts of pleasing colours and they have removed the monogram M. S. R. T. C. I want to know from the Finance Minister whether they have instructed the M. S. R. T. C. to change the colour of buses because we do not find red colour buses on the roads at all ?

Sri M.Y. GHORPADE,-I admit that it is a very colourful question. But how does the Hon'ble Member expect me to answer every small question on behalf of all Minister here ?

Sri C. M. ARUMUGHAM.—Because other Ministers are not here.

MR. DEPUTY SPEAKER.—The hon. member must wait for an opportunity and raise the question at the proper time.

ಶ್ರೀ ಎಚ್. ಡಿ. ದೇವೇಗೌಡ.—ಇವರು ಅಧಿಕಾರಕ್ಕೆ ಬಂದಮೇಲೆ ಎಷ್ಟು ಹೊಸ ಕಾಂಟ್ರ್ಯಾಕ್ಟ್ ಕ್ಯಾರೇಜ್‌ಗಳಿಗೆ ಲಗ್ಜುರಿ ಬಸ್ಸುಗಳಿಗೆ ಪರ್ಮಿಟ್‌ಗಳನ್ನು ಕೊಟ್ಟಿದ್ದಾರೆ ? ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಕ್ವಾಸಿ ಬಾಡಿ ಎಂದು ತಾವು ಹೇಳಬಹುದು. ಈ ಸಂದರ್ಭದಲ್ಲಿ ನಾನು ಮಾನ್ಯ ಹಣ ಕಾಸಿನ ಮಂತ್ರಿಗಳಿಗೆ ಸಂಬಂಧಪಟ್ಟ ಒಂದು ಮಾತನ್ನು ಹೇಳುತ್ತೇನೆ. ಅದು ಏನೆಂದರೆ ಹಾಸನದಲ್ಲಿ ಒಬ್ಬರು ಒಂದು ಲಾರಿಗೆ 1963ನೇ ಇಸವಿಯಿಂದ ಟ್ಯಾಕ್ಸ್ ಕಟ್ಟಿಲ್ಲ. ಅದನ್ನು ಒಬ್ಬ ನಿಷ್ಠಾವಂತ ಆಫಿಕಾರಿ ಜೈಸ್ ಮಾಡಿ ಇನ್‌ವೆಸ್ಟಿಗೇಟ್ ಮಾಡಿ ಚಾರ್ಜ್ ಷೀಟ್ ಕೊಟ್ಟರೆ ನಾಳೆಯೇ ಅದನ್ನು ವಿತ್‌ಡ್ರಾಮಾಡಿ ಎಂದು ಹುಕುಂ ಹೋಗಿದೆ. ಆ ಲಾರಿಯ ಮಾಲೀಕರು 32 ಸಾವಿರ ರೂಪಾಯಿ ಟ್ಯಾಕ್ಸ್ ಸರ್ಕಾರಕ್ಕೆ ಕಟ್ಟಬೇಕಾದ ಕದ್ದಿದ್ದಾರೆ. ಯಾವ ಪ್ರೆಜರ್‌ಮೇಲೆ ಆ ಕೇಸನ್ನು ವಿತ್‌ಡ್ರಾ ಮಾಡಬೇಕೆಂದು ನಿರ್ಣಯ ತಗೆದುಕೊಂಡಿದ್ದಾರೆ? ರಾಷ್ಟ್ರೀಕರಣವನ್ನು ರದ್ದು ಮಾಡಿ ನಾನು ಬೇಡ ಎಂದು ಹೇಳುವುದಿಲ್ಲ. ಇಟ್ಟಿದ್ದರೆ ಕಾಂಟ್ರ್ಯಾಕ್ಟ್ ಕ್ಯಾರೇಜ್‌ಗಳಿಗೆ ಪರ್ಮಿಟ್ ಕೊಡುವುದನ್ನು ತಡೆಹಿಡಿಯಿರಿ. ಇದಕ್ಕೆ ಸ್ವಲ್ಪ ಮಿತಿಯನ್ನು ಹಾಕಿ.

ನನ್ನ ಭಾಷಣವನ್ನು ಮುಗಿಸುವುದಕ್ಕೆ ಮುಂಚೆ ನಾನು ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಅದು ಏನೆಂದರೆ ಅಗ್ರಿಕಲ್ಚರ್‌ಲ್ ಸೆಕ್ಟರ್‌ನ ಬಗ್ಗೆ ಒಂದು ಯೂನಿವರ್ಸಿಟಿಯನ್ನು ಮಾಡುವ ಉದ್ದೇಶವನ್ನು ಸರ್ಕಾರದವರು ಹೊಂದಿದ್ದಾರೆಂದು ನಾನು ಕೇಳಿದ್ದೇನೆ. ಈ ವಿಚಾರದಲ್ಲಿ ರಾಷ್ಟ್ರದಲ್ಲಿ ಮೈಸೂರು ಮಾದರಿಯಾಗಿದೆ ಎಂದು ಕಾಣುತ್ತದೆ. ಸರ್ಕಾರದವರು ಎರಡು ಕೃಷಿ ವಿಶ್ವವಿದ್ಯಾನಿಲಯಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಆದರೆ ಯೂನಿವರ್ಸಿಟಿಗಳು ಮಿಡ್‌ಸ್ಕೂಲ್ ಮತ್ತು ಪ್ರೈಮರಿ ಸ್ಕೂಲುಗಳ ಲೆವಿಗೆ ಇಳಿಯಬಾರದು. ಹಣಕಾಸಿನ ಮಂತ್ರಿಗಳು ಬಹಳ ಬುದ್ಧಿವಂತರು ಎಂದು ಹೇಳುತ್ತಾರೆ. ಅವರು ಇದನ್ನು ಸ್ವಲ್ಪ ಯೋಚನೆ ಮಾಡಬೇಕು.

ಇನ್ನು ಪ್ರಾದೇಶಿಕ ಅಸಮತೆಯನ್ನು ತಗ್ಗಿಸುವ ವಿಚಾರವನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತೇನೆ. ಇವೊತ್ತು ದುರ್ದೈವದಿಂದ ನಮ್ಮ ಪಕ್ಕದ ರಾಜ್ಯವಾದ ಆಂಧ್ರ ಇಭಾಗವಾಗುವುದಕ್ಕೆ ಹೊರಟಿದೆ. ಕೇಂದ್ರದ ವರಿಷ್ಠರು ಸಂಸ್ಥಾಕಾಂಗ್ರೆಸ್ಸಿನವರು, ಜನಸಂಘದವರು ಮತ್ತು ಬೇರೆ ವಿರೋಧಿಪಕ್ಷದ

ವರು ಆಂಧ್ರದ ವಿಭಜನೆಗೆ ಬೆಂಬಲವನ್ನು ಕೊಡುತ್ತಿದ್ದಾರೆ, ಅವರು ಪೊಲಿಟಿಕಲ್ ಟ್ರೈಟರ್ಸ್ ಟು ದಿ ನೇಷನ್ ಎಂದು ಹೇಳಿದ್ದಾರೆ. ಎಷ್ಟು ಅಪಾಯಾಣಕಾರಿ ಮಾತನ್ನು ಅವರು ಆಡುತ್ತಿದ್ದಾರೆ? ಆಂಧ್ರದಲ್ಲಿ ಆಡಳಿತ ಪಕ್ಷದವರೇ ರಾಜ್ಯವನ್ನು ಆಳುತ್ತಿದ್ದಾರೆ. ಅಲ್ಲಿ ಸಂಸ್ಥಾ ಕಾಂಗ್ರೆಸ್ಸಿನವರ ಹೆಸರೇ ಇಲ್ಲ. ಅಲ್ಲಿ ನಿಮ್ಮ ಪಕ್ಷದವರು ಶಾಸಕರು ಮತ್ತು ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟು ಕೇಂದ್ರದ ಮುಖಂಡರನ್ನು ಪ್ರಶ್ನೆ ಮಾಡತಕ್ಕ ಕಾಲದಲ್ಲಿ ಸಂಸ್ಥಾಕಾಂಗ್ರೆಸ್ಸಿನವರನ್ನು ಪೊಲಿಟಿಕಲ್ ಟ್ರೈಟರ್ಸ್ ಟು ದಿ ನೇಷನ್ ಎಂದು ಹೇಳತಕ್ಕಂಥಾದ್ದು ಸರಿಯೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ.

ಶ್ರೀ ಎಂ. ಮೈ. ಘೋರ್ಪಡೆ.—ಆಂಧ್ರ ವಿಭಜನೆಗೆ ನಿಮ್ಮ ಮುಖಂಡರು ಪುಷ್ಟಿಯನ್ನು ಕೊಟ್ಟಿದ್ದಾರೆ ಎಂದು ಯಾರೋ ಹೇಳುತ್ತಿದ್ದರು. ಅದ್ದರಿಂದ ಈ ಆಂಧ್ರ ವಿಭಜನೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ಏನು ಹೇಳುತ್ತೀರಿ ?

ಶ್ರೀ ಎಚ್. ಡಿ. ದೇವೆಗೌಡ.—ಆಂಧ್ರದ ವಿಭಜನೆಗೆ ಪ್ರಧಾನಮಂತ್ರಿಗಳು ಹಿಂದೆ ಒಪ್ಪಿಗೆಯನ್ನು ಕೊಟ್ಟಿದ್ದರು ಎಂದು ನಿಮ್ಮ ಪಕ್ಷದವರೇ ಹೇಳಿದ್ದಾರೆ. ಅವರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಸಾಮರ್ಥ್ಯವಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಗ್ಯತೆ ಇಲ್ಲ. ಹೀಗಿರುವಾಗ ಸಂಸ್ಥಾ ಕಾಂಗ್ರೆಸ್ಸಿನವರು ಪೊಲಿಟಿಕಲ್ ಟ್ರೈಟರ್ಸ್ ಎಂದು ಹೇಳತಕ್ಕಂಥಾ ಹೇಯವಾದ ಕೆಲಸಕ್ಕೆ ನಿಮ್ಮ ಪಕ್ಷದವರು ಕೈ ಹಾಕಿದ್ದಾರೆ. ಇವೊತ್ತು ದೇಶದಲ್ಲಿ ಶೇಕಡ 70 ಜನ ಅನಕ್ಷರಸ್ಥರು ಇರಬಹುದು, ಆದರೆ ಅವರಿಗೆ ಸಾಕಷ್ಟು ಪುಜ್ಞೆ ಇದೆ. ನೀವು ಈ ರೀತಿ ಅವರನ್ನು ಹೀನ ಮಾಡುವುದಕ್ಕೆ ಹೋಗತಕ್ಕದ್ದು ಯೋಗ್ಯವಲ್ಲ. ಇದು ನಿಮಗೆ ಭೂಷಣವನ್ನು ತರತಕ್ಕಂಥಾ ಕಾರ್ಯವಲ್ಲ ಎಂದು ನಾನು ಹೇಳುತ್ತೇನೆ.

ಬರಗಾಲ ಪರಿಸ್ಥಿತಿಯ ಬಗ್ಗೆ ಇವೊತ್ತೂ ಕೂಡ ನಾನು ಹೇಳುತ್ತೇನೆ. ಸರ್ಕಾರದವರು ಇನ್ನೂ ಪರಿಸ್ಥಿತಿ ಕೈ ಮೀರಿ ಹೋಗತಕ್ಕಂಥ ಒಂದು ಅವಕಾಶವನ್ನು ಮಾಡಿಕೊಳ್ಳುವುದು ಬೇಡ. ರಾಜ್ಯದ ಎಲ್ಲ ಜನವರ್ಗಗಳೂ ಕ್ಷಾಮ ಪರಿಹಾರ ಕಾರ್ಯದಲ್ಲಿ ಪಾಲ್ಗೊಳ್ಳುವಂತಾಗಲು ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಅಭಾವ ಪರಿಹಾರ ಸಮಿತಿ ರಚಿತವಾಗಿದೆ ಎಂದು ಹೇಳಿದ್ದಾರೆ. ಆವರು ಮುಂದಿನ ತಿಂಗಳು 7ನೇ ತಾರೀಖು ಮತ್ತು 8ನೇ ತಾರೀಖು ಒಂದು ಸಭೆಯನ್ನು ಕರೆದಿದ್ದಾರೆ. ಆದರಲ್ಲಿ ದೇವೇಗೌಡರನ್ನು ಸದಸ್ಯರನ್ನಾಗಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇವೊತ್ತು ಬೇರೆ ರಾಜಕೀಯ ಪಕ್ಷಗಳ ಸಹಕಾರವನ್ನು ಪಡೆಯುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿಲ್ಲ ಎಂದು ಹೇಳತಕ್ಕಂಥಾ ಅಪಾದನೆ ಏನಿದೆ ಆ ಅಪಾದನೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಈ ಒಂದು ಸಮಿತಿಯನ್ನು ಮಾಡಿದ್ದಾರೆ, 56 ಜನಗಳಿಂದ ಕೂಡಿದ ಒಂದು ಮಿನಿ ಅಸೆಂಬ್ಲಿಯನ್ನು ಮಾಡಿದ್ದಾರೆ ಎಂದು ಕಾಣುತ್ತದೆ. ಹಿಂದೆ ಸ್ಟೇಟ್‌ಲೆವೆಲ್ ರಿಲೀಫ್ ಕಮಿಟಿಯ ಬಗ್ಗೆ ಶ್ರೀಮಾನ್ ಚನ್ನಬಸಪ್ಪನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಆದರೆ ನಾನು ಇಷ್ಟು ಮಾತ್ರ ಹೇಳುತ್ತೇನೆ. ಇದು ಯಾವ ಒಂದು ಪಕ್ಷದ ಕಾರ್ಯಕ್ರಮವಲ್ಲ. ನೀವು ಹೋಗತಕ್ಕ ದಾರಿ, ಹಾಕತಕ್ಕ ಧಾಟಿ ಮತ್ತು ತೆಗೆದುಕೊಳ್ಳತಕ್ಕ ನಿಲುವು – ಇವುಗಳು ಅಡಳಿತ ಕಾಂಗ್ರೆಸಿನ ಒಂದು ಹಕ್ಕು ಎಂದು ನೋಡಿದರೆ ಇರುವ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗುವುದಿಲ್ಲ. ನೀವು ರಾಜ್ಯದ ಎಲ್ಲಾ ಜನತೆಯ ಸಹಕಾರ ಪಡೆದ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡಬೇಕು. ನಾವು ಸಹ ಹೇಳಿರಲ್ಲಿ ಒಂದು ಹೇಳಿಕೆ ಕೊಟ್ಟು ಈ ತಿಂಗಳ ಮೂವತ್ತರ ಒಳಗೆ ಈ ಸಮಸ್ಯೆ ಬಗೆಹರಿಯದೆ ಹೋದರೆ, ನಾವು ಒಂದು ಚಳವಳಿಯನ್ನು ಹೂಡಬೇಕಾಗುತ್ತದೆಂದು ಹೇಳಿದ್ದೇವೆ. ಆದು ನಿಮ್ಮ ನಿರ್ಣಯದ ಮೇಲೆ ಹೊಂದಿ ಕೊಂಡಿದೆ. ಇಷ್ಟು ಮಾತನ್ನು ಹೇಳಿ ರಾಜ್ಯಪಾಲರಿಗೆ ತಂದಿರತಕ್ಕ ವಂದನಾ ನಿರ್ಣಯವನ್ನು ವಿರೋಧ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

5.00 P. M.

† ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ).— ಸನ್ಮಾನ್ಯ ಸಭಾಧ್ಯಕ್ಷರೆ, ನಾನು ರಾಜ್ಯಪಾಲರ ಭಾಷಣಕ್ಕೆ ತಂದಿರುವ ವಂದನಾ ನಿರ್ಣಯವನ್ನು ಸ್ವಾಗತಿಸುತ್ತಾ ಕೆಲವು ಸೂಕ್ತ ಸಲಹೆಗಳನು ಕೊಡಲಿಚ್ಛಿಸುತ್ತೇನೆ. ನಿನ್ನೆಯ ದಿವಸ ರಾಜ್ಯಪಾಲರ ಭಾಷಣವನ್ನು ನಾವೆಲ್ಲರೂ ಕೇಳಿದ್ದೇವೆ. ಅವರ ಭಾಷಣದಲ್ಲಿ ಹೇಳಿದಂತಹ ವಿಷಯವನ್ನು ಕೇಳಿ ನಮಗೆ ಬಹಳ ಸಂತೋಷವಾಯಿತು. ಅದಕ್ಕೆ ಕಾರಣ ಇಷ್ಟೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ 11 ತಿಂಗಳಲ್ಲಿ ಎಷ್ಟು ಸಾಧಿಸಿದ್ದಾರೆಂಬುದನ್ನು ನೋಡಿದರೆ ಅದು ಸಂತೋಷವನ್ನುಂಟುಮಾಡುವಷ್ಟು

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು)

ರೀತಿಯಲ್ಲಿ ನಾಗಿದೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಸಾಧ್ಯವಾದಷ್ಟು ಮಟ್ಟಿಗೆ ನುಡಿದಂತೆ ನಡಿ ಎಂಬ ಗುರಿಯನ್ನು ಇಟ್ಟುಕೊಂಡು ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ಧ್ಯೇಯ ಧೋರಣೆಗಳನ್ನು ಹಾಕಿಕೊಂಡು ಹೋಗುತ್ತಿದೆ. ಜೊತೆಗೆ ಹೇಳಿದಂತೆ ಕೆಲಸಕಾರ್ಯಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಾನು ಈ ರೀತಿ ಹೇಳುತ್ತಿರುವುದು ಉತ್ಪ್ರೇಕ್ಷೆಯಾಗಲಾರದು. ಏಕೆಂದರೆ, ವಿರೋಧ ಪಕ್ಷದ ನಾಯಕರೇ ಬಜೆಟ್ ಪರಿಸ್ಥಿತಿಯ ಬಗ್ಗೆ ಏನು ಹೇಳಿದ್ದಾರೆಂಬುದನ್ನ ನೋಡಿದಾಗ ತಿಳಿಯುತ್ತದೆ. ನಮ್ಮ ಸದನದ ಏಕಸದಸ್ಯ ಆಯೋಗ ಸಹ ಅಲ್ಲಿ ಹೋಗಿ ನೋಡಿಕೊಂಡು ಬಂದಿದೆ. ಅವರ ವರದಿಯಲ್ಲಿಯೂ ಸಹ ಮಾಡಿರುವ ಕೆಲಸ ಕಾರ್ಯಗಳ ಬಗ್ಗೆ ಹೇಳಿದ್ದಾರೆ. ಬರಗಾಲ ಯಾವಾಗಲೂ ಇದ್ದೇ ಇದೆ. ಆದರೂ ಸಹ ಸರ್ಕಾರವು ಅದನ್ನು ಎದುರಿಸಲು ಮೊದಲು ಏಳೂವರೆ ಕೋಟಿ ರೂಪಾಯಿ ಖರ್ಚು ಮಾಡಿ ಕೊನೆಗೆ 13 ಕೋಟಿ ಚಿಲ್ಲರೆ ರೂಪಾಯಿ ಖರ್ಚು ಮಾಡಿದೆ. ಮಾನ್ಯ ಆರ್ಮುಗಂ ರವರು ಎಷ್ಟೋ ಕಡೆಗಳಲ್ಲಿ ರಸ್ತೆಗಳಿಲ್ಲದಿದ್ದರೂ, ಈ ಕೆಲಸದಿಂದಾಗಿ ರಸ್ತೆಗಳು ಆಗಿವೆ ಎಂದು ಹೇಳಿದ್ದಾರೆ. ಎಂಡನೆಯದಾಗಿ ಸಾಮಾನ್ಯ ಜನರಿಗೆ ಅದರಿಂದ ಹಣ ಸೇರಿವೆ ಎಂಬುದನ್ನು ಯಾರೂ ಮರೆಯಬಾರದು. ಇದರಲ್ಲಿ ಕೆಲವು ಜನರಿಗೆ ಅನಮಾಧಾನವಾಗಿರಬಹುದು. ಬಡ ಜನರಿಗೆ ಮತ್ತು ಕಾರ್ಮಿಕರಿಗೆ ನೇರವಾಗಿ ಹಣ ಕೊಡುವಂತೆ ಏರ್ಪಾಡು ಸರ್ಕಾರ ಮಾಡಿದೆ. ಜನ ಸೇವೆಯೇ ಜನಾರ್ಧನ ಸೇವೆಯೆಂದು ಸರ್ಕಾರ ಈ ರೀತಿಯ ಕೆಲಸ ಕಾರ್ಯಗಳನ್ನು ಮಾಡಿದೆ. ಇದೇ ಸಂದರ್ಭದಲ್ಲಿ ನಾವು ಒಂದು ಶಾಶ್ವತ ಫ್ಯಾಮಿನ್ ರಿಲೀಫ್ ಕಾರ್ಯವನ್ನು ಮಾಡಬೇಕೆಂದು ಸಲಹೆ ಮಾಡುತ್ತೇವೆ. ಸರ್ಕಾರದವರು ಸಹ ಆ ದಿಕ್ಕಿನಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದಾರೆಂದು ತಿಳಿದಿದ್ದೇನೆ. ಅದಕ್ಕೊಸ್ಕರ ಇನ್ನೊಂದು ಸಲಹೆ ಏನೆಂದರೆ, ಒಂದು ಪರ್ಮನೆಂಟ್ ಫ್ಯಾಮಿನ್ ರಿಲೀಫ್ ಬೋರ್ಡು ಎಂದು ಮಾಡಬೇಕು. ಏಕೆಂದರೆ ನಮ್ಮ ರಾಜ್ಯದಲ್ಲಿ ಒಂದಲ್ಲ ಒಂದು ಕ್ಷಾಮ ಬಂದೇ ಬರುತ್ತದೆ. ಉದಾಹರಣೆಗೆ ಆಹಾರದ್ದು, ಬಟ್ಟೆಯದ್ದು ಅಥವಾ ನೀರಿನದ್ದು ಕ್ಷಾಮ ಬರುತ್ತಾ ಇರುತ್ತವೆ. ಇದು ಒಂದು ಪಕ್ಷದ ಪ್ರಶ್ನೆಯಲ್ಲ; ಇದು ಒಂದು ದೇಶದ ಪ್ರಶ್ನೆ. ಇವತ್ತು ಹೆಲ್ತ್ ಕ್ಯಾಬಿನೆಟನ್ನು ನಾವು ಸ್ವಾಗತ ಮಾಡುತ್ತೇವೆ. ಇವತ್ತು ಕೇಂದ್ರ ಸರ್ಕಾರದವರು ಸಹ ಪರಿಸ್ಥಿತಿಯನ್ನು ಅರಿತು ಎರಡನೇ ಆಯೋಗವನ್ನು ಇಲ್ಲಿಗೆ ಕಳಿಸಿದ್ದಾರೆ. ನಮ್ಮ ಸರ್ಕಾರ ಸಹ 151 ಕೋಟಿ ರೂಪಾಯಿ ಬೇಕೆಂದು ಪ್ರೊಪೋಸಲ್ಸ್ ನ್ನು ಕಳಿಸಿದ್ದಾರೆ.

ಇನ್ನೊಂದು ಲಾ ಅಂಡ್ ಆರ್ಡರ್ ಸಿಚ್ಯುಯೇಶನ್ ಬಗ್ಗೆ ಹೇಳುವುದಾದರೆ, ಇವತ್ತು ಸಾರ್ವಜನಿಕರು ಮತ್ತು ಸರ್ಕಾರ ಇಬ್ಬರೂ ಸೇರಿ ಕೆಲಸ ಮಾಡಬೇಕಾಗಿದೆ. ಆದ್ದರಿಂದ ಲಾ ಅಂಡ್ ಆರ್ಡರ್ ಬಗ್ಗೆ ಪೋಲೀಸ್ ಅಧಿಕಾರಿಗಳಿಗೆ ಇನ್ನೂ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಬೇಕೆಂದು ಹೇಳುತ್ತೇನೆ. ಇವತ್ತು ಎಕ್ಸಿಕ್ಯೂಟಿವ್, ಲೆಜಿಸ್ಲೇಚರ್ ಮತ್ತು ಜ್ಯುಡಿಶಿಯರಿ — ಇವು ಮೂರು ಒಂದಕ್ಕೊಂದು ಸಹಕಾರ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ.

ಇನ್ನು ಪ್ಲಾನಿಂಗ್ ಸಮಯಕ್ಕೆ ಹೊಸದಲ್ಲ. ನಮಗೆ ಮಾನ್ಯ ದಿವಂಗತ ವಿಶ್ವೇಶ್ವರಯ್ಯನವರು ಮಾರ್ಗದರ್ಶನ ಮಾಡಿ ತೋರಿಸಿದ್ದಾರೆ. ಆದ್ದರಿಂದ ಪ್ಲಾನಿಂಗ್ ಲೋಯರ್ ಲೆವೆಲ್‌ನಿಂದ ಪ್ರಾರಂಭವಾಗಬೇಕು. ಅದೇನೇ ಇರಲಿ, ಪ್ಲಾನಿಂಗ್ ಬಗ್ಗೆ ಎಷ್ಟೋ ಕೋಟ್ಯಾಂತರ ರೂಪಾಯಿಗಳನ್ನು ನಾವು ಖರ್ಚುಮಾಡುತ್ತಿದ್ದರೂ ಸಹ ನಮ್ಮ ದೇಶದಲ್ಲಿ ಸುಮಾರು 57 ಕೋಟಿ ಜನಗಳು ವಾಸ ಮಾಡುತ್ತಿದ್ದರೂ ಪ್ಲಾನುಗಳ ಪ್ರಕಾರ ಅನೇಕ ಕೆಲಸಕಾರ್ಯಗಳು ತ್ವರಿತವಾಗಿ ಕಾರ್ಯಗತವಾಗುತ್ತ ಇಲ್ಲ. ಅಮೇರಿಕಾ ಮತ್ತು ರಷ್ಯಾದೇಶಗಳಲ್ಲಿ ನೋಡಿದರೆ ಅಲ್ಲಿ ನಿಜವಾಗಿ ಪ್ಲಾನ್ ಪ್ರಕಾರವೇ ಅನೇಕ ಕೆಲಸಕಾರ್ಯಗಳು ಬಹು ಬೇಗನೆ ಕಾರ್ಯಗತವಾಗುತ್ತಿರುವುದನ್ನು ನಾವು ಕಾಣಬಹುದು. ಆದ್ದರಿಂದ ನಮ್ಮ ಸರ್ಕಾರದವರೂ ಸಹ ಯಾವ್ಯಾವ ಪ್ಲಾನುಗಳನ್ನು ಹಾಕಿದಾರೊ ಅವೆಲ್ಲವನ್ನೂ ಕಾರ್ಯರೂಪಕ್ಕೆ ತರಬೇಕಾದರೆ ಪ್ಲಾನಿಂಗ್ ಕಮಿಷನ್ ಅವರೊಡನೆ ಖಂಡಿತವಾಗಿ ಸಹಕರಿಸಬೇಕು.

ಇನ್ನು ಅಗ್ರಿಕಲ್‌ಚರಲ್ ವಿಷಯದ ಬಗ್ಗೆ ಹೇಳಬೇಕಾದರೆ, ಇಲ್ಲಿಯವರೆಗೂ ಸೇಕಡ 80 ರಷ್ಟು ಜನರು ನಮ್ಮ ದೇಶದಲ್ಲಿ ವ್ಯವಸಾಯದಲ್ಲಿದ್ದಾರೆ. ರದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಂತೂ ನಮ್ಮ ಪ್ಲಾನುಗಳ ಪ್ರಕಾರವೇ ಎಲ್ಲ ಕೆಲಸಕಾರ್ಯಗಳು ನುಗಮವಾಗಿ ನಡೆಯಬೇಕಾಗಿವೆ. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಅಗರೇರಿಯನ್ ರಿವಲ್ಯೂಷನ್‌ಗೆ ಪ್ರತಿಯೊಬ್ಬರಿಗೂ ವ್ಯವಸಾಯದಲ್ಲಿ ಅವಕಾಶವಿದೆ. ಹಿಂದಿನ ಕಾಲದಲ್ಲಿದ್ದ ಹಾಗೆ ಅದರಲ್ಲಿಯೂ ಷೇರ್‌ಷಹಾ ಮತ್ತು ಬ್ರಿಟಿಷರ ಕಾಲದಲ್ಲಿ ಯಾವನಿಗಾದರೂ ಜಮೀನು ಅವನ ಅಧಿಕಾರಕ್ಕೆ ಬಂದಿದೆ

ಯೆಂದರೆ, ಅದನ್ನು ಹೇಗಾದರೂ ಮಾಡಿ ಅವನ ಒಂದು ಸ್ವಾಧೀನದಿಂದ ತಪ್ಪಿಸಬೇಕೆಂಬ ಭಾವನೆ ಇತ್ತು. ಆ ಒಂದು ಮನೋಭಾವನೆ ಈಗ ನಮ್ಮ ದೇಶಧಲ್ಲಿ ಪ್ರತಿಯೊಬ್ಬ ಸಾಮಾನ್ಯ ಪ್ರಜೆಗೂ ಬಂದಿದೆ. ಆದ್ದರಿಂದಲೇ ರೀಡಿಸ್ಟ್ರಿಬ್ಯೂಷನ್ ಆಫ್ ಲ್ಯಾಂಡ್ ಆಗಬೇಕು, ಎರಡನೆಯದು, ಪ್ರೊಪರ್ ಆನ್ ಲ್ಯಾಂಡ್ ಕಡಿಮೆಯಾಗಬೇಕು, ಮತ್ತು ಮೂರನೆಯದು, ನಮ್ಮ ಉತ್ಪಾದನೆ ಹೆಚ್ಚಾಗಬೇಕು. ಆದರೆ ಒಂದು ವರ್ಗವನ್ನು ಇನ್ನೊಂದು ವರ್ಗ ಎಕ್ಸ್‌ಪ್ಲಾಯ್ಟ್ ಮಾಡಬಾರದು. ಇದೇ ನಮ್ಮ ಲ್ಯಾಂಡ್ ರಿಫಾರ್ಮ್‌ನ ಉದ್ದೇಶ.

ಶ್ರೀ ಎಚ್. ಎಸ್. ಸಿದ್ದಪ್ಪ.—ರೀಡಿಸ್ಟ್ರಿಬ್ಯೂಷನ್ ಆಫ್ ಅರ್ಬನ್ ವೆಲ್ತ್ ಬೇಕಿಲ್ಲವೇ ?

ಶ್ರೀ ಕೆ. ಆರ್ ಶ್ರೀನಿವಾಸಲು ನಾಯ್ಡು:—ಇದರ ಬಗ್ಗೆ ಬೇಕಾದಷ್ಟು ಚರ್ಚೆಗಳಾಗಿವೆ. ಇಡೀ ಭಾರತದೇಶದಲ್ಲಿ ಬೇಕಾದಷ್ಟು ಕಮಿಷನ್‌ಗಳಾಗಿವೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಪಟ್ಟಣವಾಸಿಗಳ ಆದಾಯವನ್ನು ಮಿಲೆ ಮಾಡತಕ್ಕಂಥಾದ್ದು. ಅದನ್ನೂ ನಹ ಮುಂದೆ ಮಾಡುತ್ತೇವೆ. ಈಗಾಗಲೆ ಅದನ್ನು ನಮ್ಮ ಸರ್ಕಾರದವರು ಯೋಜನೆಮಾಡುತ್ತಿದ್ದಾರೆ. ಹಿಂದೆ ಈ ವಿಚಾರದಲ್ಲಿ ಅನೂಚಾನವಾಗಿ ಚರ್ಚೆಮಾಡಿದ್ದೇವೆ. ಅದು ಒಂದು ರ್ಯಾಡಿಕಲ್, ಚೇಂಜ್‌ಯೆಂಬುದಾಗಿ ಹೇಳಬಹುದು. ಇದನ್ನು ಕೇಳಲಿಕ್ಕೆ ಬಹು ಸುಲಭ. ಇದರ ಬಗ್ಗೆ ವ್ಯವಸ್ಥೆಮಾಡುವುದು ಅಷ್ಟು ಸುಲಭವಲ್ಲ. ಅದು ಹಾರ್ನೆಸ್ಸ್ ಲೇಬರ್. ಜಮೀನುಗಳ ವಿಷಯದಲ್ಲಿ ಒಂದು ಸುಧಾರಣೆಯ ನ್ನು ತಂದಿರತಕ್ಕದ್ದು ಒಂದು ಹೆಮ್ಮೆಯ ವಿಷಯ. ನಮ್ಮ ಸರ್ಕಾರ ಈಗಾಗಲೇ ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಿ ಒಂದು ವಿಧಿಯನ್ನು ಈ ಸಭೆಗೆ ಒಪ್ಪಿಸಬೇಕೆಂದು ಹಿಂದೇ ಈ ಸಭೆಯಲ್ಲಿ ಮಂಡಿಸಿದಂಥ ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿದ್ದಾರೆ. ಆ ಮಸೂದೆ ನಿಜವಾಗಿ ಈ ಸಭೆಯಲ್ಲಿ ಇದೇ ಅಧಿವೇಶನದಲ್ಲಿ ಪಾಸಾಗುತ್ತದೆ. ಇದು ಒಂದು ಮುಂದಿನ ಹೆಜ್ಜೆಯಲ್ಲವೇ ? ಆವರೆ ಹಿಂದಿನ ಸರ್ಕಾರ ಇದನ್ನು ಪಾಸ್ ಮಾಡಲಿಲ್ಲ. ಇದನ್ನು ಕಾರ್ಯರೂಪಕ್ಕೆ 1972ನೇ ಡಿಸೆಂಬರ್ ತಿಂಗಳಲ್ಲಿಯೇ ತರಬೇಕಾಗಿತ್ತು. ಕಾರಣಾಂತರಗಳಿಂದ ಕೆಲವು ತಿಂಗಳುಗಳು ಮುಂದಕ್ಕೆ ಹೋಗಬೇಕಾಯಿತು. ಆದರೂ ನಮ್ಮ ಸರ್ಕಾರದವರು ಮಾಡುತ್ತಿರುವ ಕಾರ್ಯಗಳಲ್ಲಿ ಇದು ಒಂದು ಮುಂದಿನ ಹೆಜ್ಜೆಯೆಂದೇ ಹೇಳಬೇಕಾಗುತ್ತದೆ.

ಇನ್ನು ಅನಿಮಲ್ ಹೆಲ್ತ್ ಬಂಡ್ರಿ ಬಗ್ಗೆ ನಮ್ಮ ಸರ್ಕಾರದವರು ಬಹಳವಾಗಿ ಮುತುವರ್ಜಿ ವಹಿಸಿದ್ದಾರೆ. ಇದು ಒಂದು ವೈಟ್ ರೆವಲ್ಯೂಷನ್. ರೈತರಿಗೆ ನ್ಯಾಯವಾಗಿ ಹಣ ದೊರಕಬೇಕಾದರೆ ಈ ಒಂದು ಇಲಾಖೆಯ ಮೂಲಕವೇ ಸರಿಯಾದ ಪ್ರಚಾರವಾಗಬೇಕು. ಹೆಚ್ಚುಹೆಚ್ಚಾಗಿ ಹಾಲನ್ನು ಉತ್ಪಾದನೆ ಮಾಡಬೇಕು. ಯಾವ ಕೆಲಸವನ್ನು ಮಾಡಬೇಕಾದರೂ ರೈತನಿಗೆ ನೇರವಾಗಿ ಸಹಾಯ ಸಿಗಬೇಕೆಂದರೆ, ಈ ಒಂದು ಇಲಾಖೆ ಬಹಳ ಮುಖ್ಯವಾದುದು. ಇಲ್ಲದಿದ್ದರೆ ಬಡ ಬೋರೇಗೌಡನಿಗೆ ಅವನ ಆರ್ಥಿಕ ಪರಿಸ್ಥಿತಿ ಏನೂ ಉತ್ತಮವಾಗುವುದಿಲ್ಲ. ಈ ಒಂದು ಇಲಾಖೆಯ ಮೂಲಕ ರೈತರಿಗೆ ನೇರವಾಗಿ ಹಣ ತಲುಪುವ ಒಂದು ಯೋಜನೆಯನ್ನು ಹಾಕಿಕೊಂಡಿರುವುದು ಬಹಳ ಸ್ವಾಗತಾರ್ಹವಾದ ವಿಷಯವೆಂದು ನಾನು ಹೇಳಬೇಕಾಗುತ್ತದೆ.

ಇನ್ನು ಇರಿಗೇಷನ್ ಬಗ್ಗೆ ಹೇಳುವುದಾದರೆ ನಾವು ಇದರಲ್ಲಿ ಬಹಳವಾಗಿ ಹಿಂದುಳಿದಿದ್ದೇವೆ. ಈ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕೇಕಡ 8ರಷ್ಟು ಜಮೀನು ಮಾತ್ರ ನೀರಾವರಿಗೆ ಯೋಗ್ಯವಾಗಿದೆಯಷ್ಟೆ. ಕಾರಣ ಹಿಂದೆ ಇದ್ದಂಥ ಕೆರೆಕಟ್ಟೆಗಳು, ಬಾವಿಗಳು, ನದಿಗಳು ಬತ್ತಿಹೋಗಿವೆ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿದಮೇಲೆ ಇನ್ನೂ ಹೆಚ್ಚುಹೆಚ್ಚಾಗಿ ದೊಡ್ಡದೊಡ್ಡ ಕಟ್ಟೆಗಳನ್ನು ಕಟ್ಟುತ್ತೇವೆ, ಕಾಲುವೆಗಳನ್ನು ಕಟ್ಟುತ್ತೇವೆಂದು ಹೇಳಿದ್ದರೂ ಇತ್ತ ಕಡೆಗೆ ಸಾಕಷ್ಟು ಗಮನ ಕೊಡುತ್ತಿಲ್ಲ. ಅನೇಕ, ಯೋಜನೆಗಳು ಇನ್ನೂ ಫಲಕಾರಿಯಾಗಿಲ್ಲ. ಇದರಿಂದ ನೀರಾವರಿ ಸೌಲಭ್ಯದ ಬಗ್ಗೆ ಸಾಕಷ್ಟು ವ್ಯವಸ್ಥೆಮಾಡುವುದಕ್ಕೆ ಬಹಳ ತೊಂದರೆಯಾಗಿರುವುದರಿಂದ, ಈ ಸಮಸ್ಯೆಯನ್ನು ಜಾಗ್ರತೆಯಾಗಿ ಬಗೆಹರಿಸುವುದಕ್ಕೆ ಸರ್ಕಾರ ಪ್ರಯತ್ನಮಾಡಬೇಕೆಂದು ನಾನು ಸೂಚನೆಯನ್ನು ಕೊಡುತ್ತೇನೆ.

ಇನ್ನು ಪವರ್ ವಿಷಯ. ಈ ವಿಚಾರದಲ್ಲಿ ನಾವು ಹೆಮ್ಮೆ ಪಡಬೇಕಾಗಿದೆ. ಮಾನ್ಯ ಶ್ರೀ ಶೇಷಾದ್ರಿ ಐಯ್ಯರ್ ಅವರನ್ನು ಈ ಸಂದರ್ಭದಲ್ಲಿ ನಾವು ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಹಿಂದೆ ಮಳೆ ಬಾರದೆ, ನೀರು ಸಿಗದೇ, ನ್ಯಾಚುರಲ್ ಕಲಾಮಿಟಿಯಿಂದ ಈ ದೇಶದಲ್ಲಿ ಅನೇಕ ಸಾರಿ ಬರಗಾಲ ಬಂದುದನ್ನು ನಾವು ಛಂದಿಗೂ ಮರೆಯಬಾರದು. ಈಗ ಪವರ್ ಕಟ್ ಮಾಡಿದರೆಂದು ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಕೇಂದ್ರಸರ್ಕಾರದಿಂದ ಈ ಬಾಬಿಗೆ ಹೆಚ್ಚಿಗೆ ಹಣಸಹಾಯವನ್ನು ಪಡೆಯಬೇಕಾಗಿದೆ. ಈಗಾಗಲೇ 13 ಕೋಟಿ 50 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ನಮ್ಮ ಮುಂದಿನ ಪ್ಲಾನ್ ಪ್ರಕಾರ ಇನ್ನೂ ಅನೇಕ ಗ್ರಾಮಗಳಿಗೆ ಪವರ್

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು

ಕೊಡುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಪವರ್ ಉತ್ಪಾದನೆ ಕಾರ್ಯ ಇನ್ನೂ ಹೆಚ್ಚುಹೆಚ್ಚಾಗಿ ಮಾಡುವುದಕ್ಕೆ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಅದು ಬಹಳ ಒಳ್ಳೆಯದು.

ಇನ್ನು ಆಹಾರದ ಬಗ್ಗೆ ಬೇಕಾದಷ್ಟು ಟೀಕೆ ಟಿಪ್ಪಣಿಗಳು ನಡೆದಿವೆ. ಎಲ್ಲರೂ ಬೆಂಗಳೂರಿನಲ್ಲಿ ಕೂತುಕೊಂಡು ಸುಮ್ಮನೆ ಭಾಷಣ ಮಾಡುತ್ತಿದ್ದರೆ ಏನು ಪ್ರಯೋಜನ ? ಬಡತನ ಇರತಕ್ಕ ಕಡೆಗಳಲ್ಲಿ ಸಾರ್ವಜನಿಕ ವ ಖಂಡರೂ, ವಿರೋಧಪಕ್ಷದ ನದನ್ಯರು ನಂಜರಿಸಿ ಅವರ ನಿಜವಾದ ಕಷ್ಟಸ್ಥಿತಿಯನ್ನು ತಿಳಿಯಬೇಕು. ಇದು ಪಕ್ಷದ ಪ್ರಶ್ನೆಯೇನೂ ಇಲ್ಲ. ಎಷ್ಟು ಜನರು ಈ ಪ್ರದೇಶಗಳಿಗೆ ಹೋಗಿ ಅವರ ಕಷ್ಟಗಳನ್ನು ತಿಳಿದುಕೊಂಡಿದ್ದಾರೆಂದು ನಾನು ಕೇಳುತ್ತೇನೆ. ಮಾಸ್ ಎಜುಕೇಷನ್ ಕ್ಯಾಂಪೇನ್ ಮಾಡಿದರೆ ಒಳ್ಳೆಯದು. ಎಲ್ಲರೂ ಒಂದು ಹೊತ್ತು ಊಟ ಬಿಡೋಣ. ಇದರಿಂದ ಎಜ್ಯುಕೇಷನ ಬಡವರಿಗೆ ಬಹಳಪ್ರಾಗಿ ಅನುಕೂಲವಾಗುತ್ತದೆ. ಅದರಿಂದ ನಿಜವಾಗಿಯೂ ನಾವು ಬಡವರಿಗೆ ಸಹಾಯಮಾಡಿದಂತಾಗುತ್ತದೆ, ಇದರ ಜೊತೆಗೆ ನುಮಾರು 12, 149, ನ್ಯಾಯ ಬೆಲೆ ಅಂಗಡಿಗಳನ್ನು ಸ್ಥಾಪಿಸಲಾಗಿದೆಯೆಂದು ಹೇಳಿದ್ದಾರೆ. ಇನ್ನು ಕೆಲವೇ ದಿವಸಗಳಲ್ಲಿ ರೆಶನ್ ಮತ್ತು ಪೀಟ್ ವ್ಯಾಪಾರವನ್ನು ಸರ್ಕಾರದವರೇ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದಾರೆ. ಇಂತಹ ಒಂದು ಯೋಜನೆಯಲ್ಲಿ ಏನಾದರೂ ಲೋಪದೋಷಗಳಿದ್ದರೂ ಸಾಧ್ಯವಾದಷ್ಟು ಮಟ್ಟಿಗೆ ಈ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಜಾಗ್ರತೆಯಾಗಿ ತರಬೇಕೆಂದು ನಾನು ಸೂಚನೆಯನ್ನು ಕೊಡುತ್ತೇನೆ.

ಇನ್ನು ಕೈಗಾರಿಕೆಯ ಬಗ್ಗೆ ಹೇಳುವುದಾದರೆ, ಮಾನ್ಯ ಶ್ರೀ ವಿಶ್ವೇಶ್ವರಯ್ಯನವರು ಹಿಂದೆ ಒಂದು ಸಾರಿ ಇಂಡಸ್ಟ್ರಿಯಲೈಸ್ಡ್ ಆರ್ ಹೆರಿಷ್ ಎಂದು ಹೇಳಿದ್ದು ನನಗೆ ಈಗ ಜ್ಞಾಪಕಕ್ಕೆ ಬರುತ್ತಿದೆ. ನಮ್ಮ ಸಂಸ್ಥಾನದಲ್ಲಿ ಜೆಕ್ಕೊ ಇಕನಾಮಿಕ್ ಸರ್ವೆ ಹಿಂದೆ ಮಾಡಿದ್ದರು. ಅದರ ಪ್ರಕಾರ ಎಲ್ಲೆಲ್ಲಿ ಯಾವ್ಯಾವ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೋ ಅವರ ಬಗ್ಗೆ ಒಂದು ಸ್ಕೀಂ ಮಾಡಿಕೊಂಡು ಅವನ್ನೆಲ್ಲಾ ಜಾಗ್ರತೆಯಾಗಿ ಕಾರ್ಯರೂಪಕ್ಕೆ ತರಲು ಒಂದು ಪ್ರತ್ಯೇಕವಾದ ಕಮಿಟಿಯನ್ನು ರಚನೆ ಮಾಡಿ. ಆ ಕಮಿಟಿಯ ಮೂಲಕ ಹಿಡಿಯುವ ಸೂಕ್ತ ಸಲಹೆಗಳನ್ನು ಕೂಡಲೇ ಜಾರಿಗೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅನೇಕ ಕೈಗಾರಿಕೆಗಳನ್ನು ಬಿಲ್ಲಾ ಮಟ್ಟದಲ್ಲಿಯೂ, ತಾಲ್ಲೂಕು ಮಟ್ಟದಲ್ಲಿಯೂ ಮಾಡಿ ಡೀ-ಸೆಂಟ್ರಲೈಜೇಷನ್ ಆಫ್ ಇಂಡಸ್ಟ್ರೀಸ್ ಆಗುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಸೆಕರೆಟರಿಯೇಟ್ ಡಿಪಾರ್ಟ್‌ಮೆಂಟ್ ಏನಿದೆಯೋ ಇದು ಒಂದು ಕ್ವಿನ್ ಆಫ್ ಹೆಕ್ಸಾಟ್ರೈಲ್ ಇಂಡಸ್ಟ್ರಿಸ್. ಸೇಕಡ 10ರಷ್ಟು ಉತ್ಪಾದನೆ ನಮ್ಮ ದೇಶದಲ್ಲಿ ಆಗತಕ್ಕ ಒಂದು ಕೈಗಾರಿಕೆ ಇದು. ಇದಕ್ಕಾಗಿ 80 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದು ಬಹಳ ಸ್ವಾಗತಾರ್ಹವಾದ ವಿಷಯ. ಸುಮ್ಮನೆ ಬರೀ ಟೀಕೆ ಟಿಪ್ಪಣಿ ಮಾಡುವುದು ಸರಿಯಲ್ಲ. ರಚನಾತ್ಮಕವಾದ ಸಲಹೆಗಳನ್ನು ಕೊಡುತ್ತಾ ಹೋದರೆ ಬಹಳ ಒಳ್ಳೆಯದು. ಆಗ ಎಲ್ಲರೂ ಎಚ್ಚೆತ್ತು ಸ್ವಲ್ಪ ಹುಷಾರಾಗಿ ಕೆಲಸ ಮಾಡುವುದಕ್ಕೆ ಅದರಿಂದ ಅನುಕೂಲವಾಗುತ್ತದೆ, ಸಹಾಯವೂ ಸಹ ಆಗುತ್ತದೆ.

ಇನ್ನು ಇಂಡಿಯನ್ ಮೆಡಿಷನ್ಸ್ ಬಗ್ಗೆ ಹೇಳುವುದಾದರೆ, ನಾನು ಅನೇಕ ಸಂದರ್ಭಗಳಲ್ಲಿ ಸರ್ಕಾರದ ಗಮನಕ್ಕೆ ಒಂದು ವಿಚಾರವನ್ನು ತಂದಿದ್ದೇನೆ. ಡಾ. ಮೇಲ್ಕೋಟೆ ಕಮಿಟಿಯ ವರದಿ ಚರ್ಚೆಗೆ ಇಲ್ಲಿ ಯಾವಾಗ ಬರುತ್ತದೆ ? ಅದನ್ನು ಕೂಡಲೇ ಕಾರ್ಯರೂಪಕ್ಕೆ ತೆಗೆದುಕೊಂಡು ಬನ್ನಿ. ಆಲೋಪ್ಯಾತಿಕ್, ಹೋಮಿಯೋಪ್ಯಾತಿಕ್ ಮತ್ತು ಆಯುರ್ವೇದ ಪೆಟೆಂಟ್ಸ್ ಬಗ್ಗೆ ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡಬೇಕಾದುದು ನಮ್ಮ ಸರ್ಕಾರದ ಆದ್ಯ ಕರ್ತವ್ಯ. ಏಕೆಂದರೆ ನಮ್ಮ ಹಣ ಬೇಕಾದಷ್ಟು ಈಗ ಪರದೇಶಗಳಿಗೆ ಹೋಗುತ್ತಿದೆ. ಅದನ್ನು ತಪ್ಪಿಸಬೇಕಾದರೆ ಕೂಡಲೇ ಡಾ. ಮೇಲ್ಕೋಟೆ ಕಮಿಟಿಯ ವರದಿಯನ್ನು ಕಾರ್ಯರೂಪಕ್ಕೆ ತರಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಇದರ ಜೊತೆಗೆ ಹೀಗೇ ಈ ಸೋಷಿಯಲ್ ವೆಲ್‌ಫೇರ್ ವಿಚಾರದಲ್ಲೂ ನಾವು ಬಹಳ ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಹಿಂದುಳಿದ ವರ್ಗದವರಿಗೂ ಮತ್ತು ವೀಕರ್ ಸೆಕ್ಷನ್ಸ್‌ಗೆ ಕಳೆದ 25 ವರ್ಷಗಳಲ್ಲಿ ಸರ್ಕಾರದವರು ಏನೂ ಮಾಡಲಿಲ್ಲ. ಪ್ರಪ್ರಥಮವಾಗಿ ನಮ್ಮ ಮೈಸೂರು ರಾಜ್ಯದಲ್ಲಿ

ಇಡೀ ಭಾರತದಲ್ಲೆ ಎಲ್ಲಯೂ ಇಲ್ಲದಂಥ ಒಂದು ಹಿಂದುಳಿದವರ ಹಿತರಕ್ಷಣೆಯನ್ನು ಹೇಗೆ ಸಾಧಿಸ ಬೇಕೆಂಬ ಬಗ್ಗೆ ಅಗಿರತಕ್ಕ ಸರ್ಕಾರ ಒಂದು 'ಬ್ಯಾಕ್‌ವರ್ಡ್ ಕ್ಲಾಸ್ ಆಯೋಗವನ್ನು ನೇಮಕ ಮಾಡಿದೆ. ಇಂದು ರಾಜ್ಯದಲ್ಲಿ ನೂರಕ್ಕೆ ಅರವತ್ತೈದು ಜನರು ಹಿಂದುಳಿದವರಾಗಿದ್ದಾರೆ.

ಶ್ರೀ ಎಚ್. ಎಸ್. ಸಿದ್ಧಪ್ಪ.—ಹಿಂದೆ ಇದ್ದ ಸರ್ಕಾರ ಇದೇ ರೀತಿ ಡಾ. ನಾಗನಗೌಡ ಕಮಿಟಿ ಯನ್ನು ಮಾಡಿದ್ದ ವರದಿ ನಿಮಗೆ ಗೊತ್ತಿಲ್ಲದಿದ್ದರೆ ಅದಕ್ಕೆ ಅವರೇನು ಮಾಡಲು ಸಾಧ್ಯ !

ಶ್ರೀ ವಾಟಾಳ್ ನಾಗರಾಜ್.—ಆ ಹಿಂದುಳಿದ ಆಯೋಗದಲ್ಲಿ ಮಾನ್ಯ ಸದಸ್ಯರೊಬ್ಬರನ್ನು ಒಬ್ಬ ಸದಸ್ಯರನ್ನಾಗಿ ನೇಮಕ ಮಾಡಿದ್ದಾರೆ. ಅವರ್ಕಾಗಿ ನೀವು ಸರ್ಕಾರವನ್ನು ಹೊಗಳಬೇಕು, ಹೊಗಳಿ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ನಿಜ. ಹಿಂದಿನವರು ಮಾಡಿದ್ದರೂ ಆ ವರದಿಗಳ ನ್ನೆಲ್ಲಾ ಅವರು ಕಾರ್ಯಗತ ಮಾಡದೆ ಎಲ್ಲವನ್ನೂ ಕೋರ್ಟ್ ಸ್ಕ್ರೋರೇಜಿನಲ್ಲಿಟ್ಟಿದ್ದರು. ಈಗಿನ ಸರ್ಕಾರದವರು ರಚಿಸಿರತಕ್ಕ ಈ ಆಯೋಗದವರು 18 ಜಿಲ್ಲೆಗಳಲ್ಲೂ ಮತ್ತು 19ನೆ ತಾಲ್ಲೂಕು ಗಳಲ್ಲೂ ಸುತ್ತಾಡಿ ಜನರ ಸ್ಥಿತಿಗತಿಗಳ ಬಗ್ಗೆ ಒಂದು ನಿರ್ದಿಷ್ಟವಾದ ಹಾಗೂ ನಿಷ್ಕೃಷ್ಟವಾದ ವರದಿ ಯನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂಬ ಅಭಿಪ್ರಾಯ ಈ ಆಯೋಗಕ್ಕಿದೆ. ಇದು ಖಂಡಿತವಾಗಿಯೂ ಒಂದು ಹೆಮ್ಮೆಯ ವಿಷಯ. ಇಂಥ ಒಂದು ಆಯೋಗ ನಮ್ಮ ಸರ್ಕಾರ ಬಂದಮೇಲೆ ರಚಿತ ವಾಯಿತು ಎಂದು ಹೇಳುವುದಕ್ಕೆ ಹೆಮ್ಮೆ ಪಡುತ್ತೇನೆ.

ಇನ್ನು ಮನೆಗಳನ್ನು ಕಟ್ಟುವತಕ್ಕ ನಿವೇಶನ ಮತ್ತು ಮನೆಗಳನ್ನು ಕಟ್ಟಿಸುವತಕ್ಕ ಯೋಜನೆಯ ವಿಚಾರಕ್ಕೆ ಬಂದರೆ ಇದನ್ನು ಒಂದು ನ್ಯಾಷನಲ್ ಪ್ರಾಬ್ಲಂ ಎಂದು ಹೇಳಬಹುದು. ಈ ಯೋಜನೆ ಯಲ್ಲಿ ಮನೆಯಿಲ್ಲದವರಿಗೂ ಮತ್ತು ನಿವೇಶನ ರಹಿತರಿಗೂ ಇರತಕ್ಕ ಸಂಕಟಗಳನ್ನು ಪರಿಹರಿಸಲು ಮತ್ತು ಹರಿಜನ ಗಿರಿಜನರ ಕಷ್ಟಗಳನ್ನು ನೀಗಲು ಸುಮಾರು ಐದಲಕ್ಷ ನಿವೇಶನಗಳಲ್ಲಿ ಮೊದಲು 5 ಕೋಟಿ ರೂಪಾಯಿಗಳ ವೆಚ್ಚದಲ್ಲಿ 20 ಸಾವಿರ ವಸತಿ ಸೌಕರ್ಯಗಳನ್ನು ನಿರ್ಮಾಣ ಮಾಡುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ. ಖಂಡಿತವಾಗಿಯೂ ಇದೊಂದು ಹೆಮ್ಮೆಯ ವಿಷಯ.

ಹಾಗೇ ಬೆಂಗಳೂರು ನಗರಕ್ಕೆ ಸುವಾರು 30 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾವೇರಿ ನದಿಯಿಂದ ನೀರು ಸರಬರಾಜು ಮಾಡುವ ಮೊದಲನೇ ಹಂತದ ಕೆಲಸವು ಬಹಳ ತೀವ್ರಗತಿಯಿಂದ ಸಾಗುತ್ತಿದೆ. ಈ ಕೆಲಸ 1973ರ ಒಳಗಾಗಿ ಮುಗಿಯಿಸಕ್ಕಿದ್ದಾಗಿದೆ ಎಂದು ಹೇಳಿದ್ದಾರೆ. ಇದೊಂದು ಬಹಳ ಸಂತೋಷದ ವಿಷಯ. ಇದಕ್ಕೆ ನನ್ನ ಸರ್ಕಾರದವರ ಪ್ರಯತ್ನವೇ ಮೂಲ ಕಾರಣ ಎಂದು ಹೇಳುತ್ತೇನೆ. ಹಿಂದಿನವರೂ ಇದರ ಬಗ್ಗೆ ಪ್ರಯತ್ನ ಮಾಡಿರಬಹುದು. ಆದರೆ ಅದೆಲ್ಲಾ ಬರೀ ಹೇಪರಿಗೆ ಮೇಲಿನ್ಹ ಪ್ಲಾನು. ಅದರೆ ನಮ್ಮ ಸರ್ಕಾರ ಅದನ್ನು ಕಾರ್ಯರೂಪಕ್ಕೆ ತಂದಿದೆ.

ಇನ್ನು ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ—ಇದು ಮನುಷ್ಯನ ಬಾಡಿಮೆಂಟ್ ಮತ್ತು ಸೋಲ್—ಮೂರೂ ಭಾಗದಲ್ಲು ಸಹ ಇದರ ಅಗತ್ಯವಿದೆ. ಈ ಬಾಬಿನಲ್ಲಿ ಸರ್ಕಾರ ಸಾಕಷ್ಟು ಹಣವನ್ನು ಖರ್ಚುಮಾಡುತ್ತಿದೆ. ಆದರೆ ನಮಗೆ ಈ ದಿವಸ ಬೇಕಾಗಿರುವುದು 'ಜಾಬ್ ಓರಿಯೆಂಟೆಡ್ ಎಜುಕೇಷನ್. ಇಂಡಿಯಾ ದೇಶಕ್ಕೆಲ್ಲಾ ಒಂದು ಟೆಕ್ಸ್‌ಟ್ ಬುಕ್ ಇರಬೇಕು. ಒಂದೊಂದು ರಾಜ್ಯಕ್ಕೂ ಒಂದೊಂದು ರೀತಿಯ ಟೆಕ್ಸ್‌ಟ್ ಬುಕ್ಕುಗಳಿರುವುದು ಸರಿಯಲ್ಲ. ಇಡೀ ರಾಷ್ಟ್ರಕ್ಕೆ ಒಂದು ರೀತಿಯ ವಿದ್ಯಾಭ್ಯಾಸ ಇರಬೇಕು. ಇದಕ್ಕಾಗಿ ಒಂದು ನ್ಯಾಷನಲ್ ಸ್ಕೀಮನ್ನು ತಯಾರಿಸಿ ಅದರಂತೆ ಜಾರಿಗೆ ತರುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

ಇನ್ನು ಯೂತ್ ಸರ್ವೀಸಿನ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಈ ಯೋಜನೆಯಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಯ ವಜನರಿಗೆ ಸೌಲಭ್ಯಗಳನ್ನು ಒದಗಿಸಿ ತನ್ಮೂಲಕ ಜನಸೇವೆ ನಡೆಸುವುದಕ್ಕೆ ಅವಕಾಶ ಮಾಡಬೇಕೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶ ಗಳಲ್ಲಿ ಈ ಅಭಿವೃದ್ಧಿ ದಳಕ್ಕೆ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ವೆಲ್ಡಿಕರ್ ಮತ್ತು ಇಂಜಿನಿಯರಿಂಗ್ ಪದವೀಧರರನ್ನು ಸೇರಿಸಿ ಅವರಲ್ಲಿ ಸೇವಾ ಮನೋಭಾವ ಬೆಳೆಯುವುದಕ್ಕೆ ಹೆಚ್ಚಿನ ಅವಕಾಶ ನೀಡ ಬೇಕೆಂದು ಹೇಳುತ್ತೇನೆ.

ಇನ್ನು ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಹೇಳುವುದಾದರೆ—ಕಳೆದ ಸಾಲಿನಲ್ಲಿ ಮುಕ್ತಾ ದಕ್ಕೆ ಹಿಂದೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟವಾಗಿತ್ತು. ಆಗ ರಾಜ್ಯಕ್ಕೆ 83 ಕೋಟಿ ರೂಪಾಯಿಗಳ ಓವರ್ ಡ್ರಾಫ್ಟ್ ಇತ್ತು. ಅದನ್ನೆಲ್ಲಾ ನಮ್ಮ ಸರ್ಕಾರ ಬಂದಮೇಲೆ ತೀರಿಸಿ

(ಶ್ರೀ ಕೆ.ಆರ್. ಶ್ರೀನಿವಾಸುಲು ನಾಯ್ಡು)

ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸಿರತಕ್ಕದ್ದು ನಿಜವಾಗಿಯೂ ಒಂದು ಹೆಮ್ಮೆಯ ವಿಚಾರ. ಈ ವಿಷಯವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇದನ್ನು ನಾನು ಅಂಕಿ ಅಂಶಗಳಿಂದ ರುಜುವಾತು ಮಾಡಬಲ್ಲೆ.

ಇನ್ನು ರಿಜನಲ್ ಇಂಬ್ಯಾಲೆನ್ಸ್ ವಿಚಾರದಲ್ಲಿ ಹೇಳುವುದಾದರೆ ಇದು ಹಿಂದಿನಿಂದಲೂ ಇದ್ದೇ ಇದೆ. ಇದನ್ನು ನಿವಾರಣೆ ಮಾಡಲು ಈಗ ನಮ್ಮ ಸರ್ಕಾರ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿದೆ. ಇಡೀ ಇಂಡಿಯಾದಲ್ಲಿರತಕ್ಕ ಜನರೆಲ್ಲಾ ನಮ್ಮವರೇ-ನಾವೆಲ್ಲರೂ ಒಂದೇ ಎನ್ನತಕ್ಕ ಕಾಲದಲ್ಲಿ ನಾವು ನಮ್ಮ ರಾಜ್ಯದಲ್ಲಿರತಕ್ಕವರನ್ನು ಒಂದು ಸಮಭಾವನೆಯಿಂದ ನೋಡುವುದಿಲ್ಲವೆಂದರೇನು ಅರ್ಥ ? ನಮ್ಮ ಸರ್ಕಾರದವರು ಇಂಥ ಅನುಮಾನಕ್ಕೆ ಅವಕಾಶವಿಲ್ಲದಂತೆ ಕೆಲಸ ಮಾಡಿಕೊಂಡು ಹೋಗುತ್ತಾರೆಂಬ ನಂಬಿಕೆ ನಮಗೆಲ್ಲಾ ಇದೆ. ಆದರೆ ಇದರಲ್ಲಿ ಒಂದು ವಿಚಾರ-'ಕಂಡದ್ದನ್ನು ಕಂಡ ಹಾಗೇ ಹೇಳಿದರೆ ಕೆಂಡದಂಥ ಕೋಪ' ಎನ್ನುವಂತೆ ನಮ್ಮ ವಿರೋಧಪಕ್ಷದವರಿಗೆ ನಾವು ಹೇಳುವುದು ಸರಿಕಾಣದೆ ಇರಬಹುದು. ಆದಾಗ್ಯೂ ನಮ್ಮ ರಾಜ್ಯಪಾಲರು ನಮ್ಮ ಸರ್ಕಾರ ಯಾವ ಗುರಿಯನ್ನು ಸಾಧಿಸಲು ಹೊರಟಿದೆ ಎಂಬುದನ್ನು ಬರೆದು ನಿರ್ದಿಷ್ಟವಾಗಿ ತೋರಿಸಿ ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಜೈಹಿಂದ್.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಉಪಸಭಾಪತಿಯವರೇ ರಾಜ್ಯಪಾಲರ ಭಾಷಣದ ಬಗ್ಗೆ ವಂದನಾರ್ಪಣೆಯ ಸೂಚನೆಯ ನಿರ್ಣಯ ಒಂದನ್ನು ಮಾನ್ಯ ಗೆಳೆಯರಾದ ಶ್ರೀ ನುಚ್ಚಯ್ಯಶೆಟ್ಟರು ಮಂಡಿಸಿರತಕ್ಕದ್ದು ನನಗೆ ಬಹಳ ವ್ಯಥೆಯನ್ನುಂಟು ಮಾಡಿದೆ. ಇದು ಯಾರೋ ಮಾಡಬೇಕಾಗಿದ್ದ ಕೆಲಸಕ್ಕೆ ಯಾರನ್ನೋ ಬಲಿಕೊಟ್ಟ ಹಾಗೆ ಆಗಿದೆ. ಯಾರೂ ಇದಕ್ಕೆ ಸಿಕ್ಕದಿದ್ದ ಕಾರಣ ಇವರನ್ನೇ ಹಿಡಿದು ಇದಕ್ಕೆ ಬಲಿಕೊಡಬೇಕಾಗಿ ಬಂದಿತೆಂದು ಕಾಣುತ್ತದೆ. ಬಲವಂತದಿಂದ ಇವರನ್ನು ಈ ಕೆಲಸಕ್ಕೆ ನೇಮಿಸಿರಬೇಕೆಂದು ನಾನು ಭಾವಿಸುತ್ತೇನೆ. ಅವರ ತಲೆಯ ಮೇರೆ ಇದನ್ನು ಬಲವಂತದಿಂದ ಹೇರಿದ್ದಾರೆಂಬುದು ನನ್ನ ಅಭಿಪ್ರಾಯ. ರಾಜ್ಯಪಾಲರ ಭಾಷಣದಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷದಲ್ಲಿ ಏನಾದರೂ ಹೊಸ ಹೊಸ ಜನರಿಗೆ ಅನುಕೂಲವಾಗತಕ್ಕ ವಿಚಾರಗಳನ್ನು ತಿಳಿಸುತ್ತಾರೆಂದು ನಿರೀಕ್ಷಿಸಿಕೊಂಡಿದ್ದ ಜನತೆಗೆ ಈ ಭಾಷಣ ಬಹಳ ನಿರಾಶೆಯನ್ನುಂಟು ಮಾಡಿದೆ. ಈ ಹಿಂದೆ ಇಂದಿನ ಸರ್ಕಾರದವರು ಹೊರಟ ಆ ಒಂದು ಹೊಸ ಮಜಲನ್ನು ನೋಡಿ ಇವರು ದೇಶದಲ್ಲಿ ಮೂಲಭೂತ ಬದಲಾವಣೆಗಳನ್ನು ಬಹಳ ಬೇಗ ಜಾರಿಗೆ ತರುತ್ತಾರೆಂದು ನಂಬಿದ್ದರು. ಅಂಥಾ ಜನರಿಗೆ ಈ ಭಾಷಣ ಬಹಳ ನೀರಸವಾದದ್ದು ಮತ್ತು ಇದು ಅವರಿಗೆ ಯಾವ ಮುಖದಿಂದಲೂ ತೃಪ್ತಿಯನ್ನುಂಟು ಮಾಡುವುದಿಲ್ಲ. ನಮಗೆ ಪ್ರತಿವರ್ಷವೂ ಇಂಥ ಒಂದು ರಾಜ್ಯಪಾಲರ ಭಾಷಣ ಕೇಳಬೇಕೆಂಬುದು ಒಂದು ಸಂಪ್ರದಾಯ. ಅದನ್ನು ನಾವು ಈ ವರ್ಷವೂ ಕೇಳಿದೆವು ಎಂದು ಅಷ್ಟಕ್ಕೆ ನಾವು ತೃಪ್ತಿಪಟ್ಟುಕೊಂಡು ಸುಮ್ಮನಾಗಬೇಕು ; ಮತ್ತು ಮನಸ್ಸಿಗೆ ಒಂದು ಸಮಾಧಾನ ಮಾಡಿಕೊಳ್ಳಬೇಕು. ಆದರೆ ಇಂಥ ಒಂದು ವರದಿಯಿಂದ ದೇಶದಲ್ಲಿರತಕ್ಕ ಜನತೆ ತೃಪ್ತಿಪಟ್ಟುಕೊಳ್ಳಲಾರದೆಂಬ ಅಂಶವನ್ನು ಇವರು ಮರೆತಿದ್ದಾರೆ. ಆದರೆ ರಾಜ್ಯಪಾಲರು ತಮ್ಮ ಭಾಷಣದ ಪ್ರಾರಂಭದಲ್ಲಿ ಏನನ್ನು ಹೇಳಬೇಕಾಗಿತ್ತೊ ಅದನ್ನು ಅವರು ತಮ್ಮ ಭಾಷಣದ ಕೊನೇಲ ಉಪಸಂಹಾರ ವಿಭಾಗದಲ್ಲಿ ಹೇಳಿರತಕ್ಕದ್ದು ಸರಿಯಲ್ಲ ಎಂದು ಹೇಳುತ್ತೇವೆ. ಭಾಷಣದ ಪ್ರಾರಂಭದಲ್ಲಿ ಸೂಚಿಸಬೇಕಾದ ಮೂಲಭೂತ ವಿಷಯವನ್ನು ಕೊನೆಯ ಭಾಷಣದಲ್ಲಿ ಹೇಳುವುದರ ಉದ್ದೇಶವಾದರೂ ಏನು ? ರಾಜ್ಯದಲ್ಲಿ ಜನತೆಯ ಬಗ್ಗೆ ಸರ್ಕಾರ ಕೈಗೊಳ್ಳಬೇಕಾದ ಮೂಲ ಭೂತ ಅಂಶಗಳೇನಿವೆಯೋ ಅವುಗಳನ್ನು ಕಾರ್ಯಗತ ಮಾಡುವುದು ಸರ್ಕಾರದವರ ಜವಾಬ್ದಾರಿಯಲ್ಲ-ಅವರ ಹೊಣೆಗಾರಿಕೆಯಲ್ಲ ಎಂಬುದನ್ನು ಅದು ಎತ್ತಿ ತೋರಿಸುತ್ತಿದೆ. ಅಲ್ಲಿ ಅವರು ಏನು ಅಪ್ಪಣೆ ಕೊಡಿಸಿದ್ದಾರೆಂದರೆ.—"ಬಡತನ ಮಾಯವಾಗುವಂತೆ, ಅಸಮತೆಗಳು ಮಾಯವಾಗುವಂತೆ, ಅನ್ಯಾಯ ತೊಲಗುವಂತೆ, ಸ್ವಾವಲಂಬನೆಯನ್ನು ಆಧರಿಸಿ ಸೂಕ್ತವಾದ ಆರ್ಥಿಕ ಸಾಮಾಜಿಕ ಕಾರ್ಯಕ್ರಮಗಳನ್ನು ಜಾರಿಗೆ ತಂದು ಈ ಆದರ್ಶಗಳನ್ನು ಸಾಧಿಸುವ ನಿಮಿತ್ತ ನಿರಂತರವಾಗಿ ದುಡಿಯಲು ಸಂಬಂಧಪಟ್ಟವರೆಲ್ಲರೂ ಯತ್ನಿಸಬೇಕಾಗಿದೆ" ಎಂಬುದಾಗಿ ಹೇಳಿದ್ದಾರೆ. ಈ ಮಾತುಗಳನ್ನು ಹೇಳುತ್ತಾ ಔಪಚಾರಿಕವಾಗಿ ಇದೆಲ್ಲಾ ದೇಶಕ್ಕೆ ಸೇರಿದ್ದು-ಜನರಿಗೆ ಸೇರಿದ್ದು ಎಂದು ಅವರ ಕಡೆಗೆ ಕೈಮಾಡಿ ತೋರಿಸಿದ್ದಾರೆ. ಅದು ಸರಿಯೆಂದು ಜನರು ನಂಬಿಗಾಳಿ, ನೀರನ್ನು ಕುಡಿಯಬೇಕು. ಸರಕಾರವನ್ನು ಬದ್ಧ ಪಡಿಸಿನ ಬೇಕಾಗಿತ್ತು. ಈಗ ಹೇಳಿರುವ ಮಾತು ಸರಕಾರವನ್ನು ಬದ್ಧವಾಡಿಸುವುದಿಲ್ಲ. ಇದು ದೇಶಕ್ಕೆ

ನಂಬಿಂಧಪಟ್ಟ ಸಮಸ್ಯೆ ಎಂದು ಹೇಳಿದ್ದಾರೆ. ದೇಶಕ್ಕೆಸೇರಿರುವ ಜನರ ಡೆ ಕೈಜೋರಿಸಿ ತಮ್ಮ ಜವಾಬ್ದಾರಿಯನ್ನು ರಾಜ್ಯಪಾಲರು ಕಳೆದುಕೊಂಡಿದ್ದಾರೆ. ಇದರಿಂದ ಸರಕಾರಕ್ಕೆ ಜವಾಬ್ದಾರಿ ಇದೆಯೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಸರಕಾರಕ್ಕೆ ನಿಜವಾಗಿಯೂ ಜವಾಬ್ದಾರಿ ಇದ್ದಿದ್ದರೆ ಒಪ್ಪಬಹುದಾಗಿತ್ತು. ಪ್ರಾರಂಭದಲ್ಲೇ ಇದನ್ನು ತಿಳಿಸಬೇಕಾಗಿತ್ತು. ರಾಜ್ಯಪಾಲರು ತಮ್ಮ ಭಾಷಣದಲ್ಲಿ "ಜನತೆಯ ದುರ್ಬಲ ಪಂಗಡಗಳ ಉದ್ಧಾರಕ್ಕೆ ನೆರವಾಗಬಲ್ಲ ಮತ್ತು ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ನಿಜವಾದ ಅವಕಾಶ ಸಮತೆಯನ್ನು ಒದಗಿಸಬಲ್ಲ ಕಾರ್ಯನೀತಿಗಳನ್ನೂ ಕಾರ್ಯಕ್ರಮಗಳನ್ನೂ ನಮ್ಮ ಸರಕಾರದವರು ಮುಂದುವರೆಸಿಕೊಂಡು ಹೋಗುವರು", ಎಂದು ತಿಳಿಸಿದ್ದಾರೆ. ಸರಕಾರಕ್ಕೆ ಇದರ ಹೊಣೆಯನ್ನು ಒಪ್ಪಿಸಿದ್ದಾರೆ. ಸರಕಾರವ ತಲೆಯ ಮೇಲೆ ಜವಾಬ್ದಾರಿ ಹೊರಿಸಿದ್ದರೆ ಅರ್ಥವಾಗುತ್ತಿತ್ತು. ಹಾಗೆ ಮಾಡಿಲ್ಲ. ಆದುದರಿಂದ ಸರಕಾರದ ಮೇಲೆ ರಾಜ್ಯಪಾಲರಾ ಜವಾಬ್ದಾರಿ ಹೊರಿಸಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

5-30 P.M.

ಇಂದು ಶ್ರೀ ದೇವೇಗೌಡರು ತಮ್ಮ 23 ಶಾಸಕರನ್ನು ಪ್ರತಿನಿಧಿಸಿ ಮಾತನಾಡಿದರು. ಈಗ ರಾಜ್ಯದಲ್ಲಿ ಕ್ಷಾಮ ಪರಿಸ್ಥಿತಿ ಭೀಕರವಾಗಿದೆ. ಈ ಪರಿಸ್ಥಿತಿಯ ನಿವಾರಣೆ ಹೇಗೆ ನಡೆಯುತ್ತಿದೆಯೆಂದರೆ ಸಂಸ್ಥಾ ಕಾಂಗ್ರೆಸ್ಸಿಗೂ ಆಡಳಿತ ಕಾಂಗ್ರೆಸ್ಸಿಗೂ ಜಗ್ಗಿ, ವಾದವಿವಾದ ಘರ್ಷಣೆ ನಡೆಯುತ್ತಿದೆ, ಇದೇ ಕ್ಷಾಮ ನಿವಾರಣೆ ಕಾರ್ಯಕ್ರಮ. ಒಂದು ಪಕ್ಷದವರು ಒಂದು ಹೇಳುವುದು ಇನ್ನೊಂದು ಪಕ್ಷದವರು ಅದಕ್ಕೆ ಉತ್ತರ ಹೇಳುವುದು, ಇದು ನಡೆಯುತ್ತಿದೆ. ಕ್ಷಾಮ ಪರಿಹಾರದ ಕೆಲಸವೇನಿದ್ದರೂ ಸಂಸ್ಥಾ ಕಾಂಗ್ರೆಸ್ ಮತ್ತು ಆಡಳಿತ ಕಾಂಗ್ರೆಸ್ಸುಗಳಿಗೆ ಸೀಮಿತವಾಗಿದೆ. ದಿನ ಬೆಳಗಾದರೆ ವೀರೇಂದ್ರ ಪಾಟೀಲರು ಒಂದು ಹೇಳಿಕೆ ಕೊಡುವರು, ಅದಕ್ಕೆ ಆಡಳಿತ ಕಾಂಗ್ರೆಸ್ಸಿನವರು ಉತ್ತರ ಕೊಡುವರು. ನಿಜಲಿಂಗಪ್ಪನವರು ಹೇಳಿಕೆ ಕೊಟ್ಟರೆ ಅದಕ್ಕೆ ರಂಗನಾಥರವರು ಉತ್ತರ ಕೊಡುವರು. ಜನರನ್ನು ಬೇರೆ ಕಡೆಗೆ ತಿರುಗಿಸುವ ಕೆಲಸದಲ್ಲಿ ಇಬ್ಬರೂ ನಿರತರಾಗಿದ್ದಾರೆ. ರಾಜ್ಯದಲ್ಲಿ ಬೇರೆ ರಾಜಕೀಯ ಪಕ್ಷವಿರಲಿಲ್ಲವೇ ? ವಿಚಾರಮಾಡುವ ಜನರಿರಲಿಲ್ಲವೇ ? ಅವರ್ಯಾರೂ ಹೇಳಿಕೆ ನೀಡದೆ ಈ ಎರಡು ಪಕ್ಷಗಳು ಆ ಕೆಲಸ ಮಾಡುತ್ತಿವೆ.

ಶ್ರೀ ಎಚ್. ಡಿ. ದೇವೇಗೌಡ.—ಕ್ಲಾರಿಫಿಕೇಷನ್ ಕೊಡಬೇಕಾಗಿದೆ. ಎಲ್ಲಾ ಪಕ್ಷಗಳ ಸಮಿತಿ ಮಾಡಿ ಎಂದು ಈ ಸಭೆಯಲ್ಲಿ ಹೇಳಿದ್ದೇವೆ. ನಾನು ಆ ಸಭೆಗೆ ಕೂಡ ಹೋಗಿಲ್ಲ, ಬೇಕಾದರೆ ಬಹಿಷ್ಕಾರ ಮಾಡುತ್ತೇನೆ. ಸರಕಾರ ಎಲ್ಲರ ಸಹಕಾರ ಪಡೆದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಕ್ಷಾಮ ಪರಿಸ್ಥಿತಿಯನ್ನು ತಡೆಗಟ್ಟಬೇಕಾದರೆ ಇಡೀ ರಾಜ್ಯದ ಜನರು ಒಂದಾಗಿ ನಿಲ್ಲಬೇಕು, ಹಾಗೆ ಮಾಡಿದರೆ ಈ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯ. ಆದರೆ ಒಂದು ಮಾ ತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ರಂಗನಾಥರವರ ಪತ್ರಿಕಾ ಹೇಳಿಕೆಯನ್ನು ನೋಡಿದ್ದೇವೆ. ಕೇಂದ್ರದಿಂದ ಬಂದ ಸುಮಾರು 198 ಕೋಟಿ ರೂಪಾಯಿಗಳಲ್ಲಿ, ಎಷ್ಟೊಹಣವನ್ನು ಮನೆಗಳನ್ನು ಕಟ್ಟಲು ಖರ್ಚುಮಾಡಿದೆ ಎಂದು ಹೇಳಿದ್ದಾರೆ. ಅದಕ್ಕೆ ನಿಜಲಿಂಗಪ್ಪನವರು ಉತ್ತರ ಕೊಟ್ಟರು. ಕೇಂದ್ರ ಸರಕಾರದಿಂದ ಎಷ್ಟು ಸಹಾಯ ಬಂದಿದೆ, ಅದರಲ್ಲಿ ಬಂಗಾರೆ ಕಟ್ಟಲು ರಸ್ತೆ ಬಗ್ಗೆರ ಮಾಡಲು ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳಬೇಕಾಗಿತ್ತು, ಅವರಲ್ಲ ವಿವರವಿದೆ. ಇವತ್ತಿನವರೆಗೆ ಇದನ್ನು ಹೇಳ್ಲಿಲ್ಲ ಇಂಥ ಕ್ಷಾಮ ಬಂದಿರುವಾಗ ಸುಮ್ಮನಿರಲು ಸಾಧ್ಯವೇ ಇಲ್ಲ. ಜನರ ವಿಶೇಷಭೂತ ಸಮಸ್ಯೆಗಳನ್ನು ಪರಿಹಾರ ಮಾಡಲು, ಕೈಗಾರಿಕೆಗಳನ್ನು ಮುಂದುವರೆಸಲು, ಖರ್ಚು ಮಾಡಿ ನಗರವನ್ನು ಸುಂದರಗೊಳಿಸಲು ಹೆಚ್ಚು ಖರ್ಚು ಮಾಡುತ್ತಿದೆ. ಹಿಂದೆ ಇದನ್ನೆ ಹೇಳಿದ್ದೇವೆ. ಯಾವ ಸರಕಾರವೇ ಆಗಲಿ ತನ್ನ ನೀತಿಯನ್ನು ಬದಲಾಯಿಸಿಲ್ಲ. ಹಾಗೆ ಮಾಡದೆ ಇರುವುದರಿಂದ ಇಂದು ಇಂಥ ಭೀಕರ ಕ್ಷಾಮ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಈಗಿನ ಸರಕಾರವಾದರೂ ಕೂಡ ತನ್ನ ನೀತಿಯನ್ನು ಬದಲಾಯಿಸಲು ಮಹತ್ತರವಾದ ಪ್ರಯತ್ನ ಮಾಡುತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕೇಂದ್ರ ಸರಕಾರದವರು ಸಹಾಯ ನೀಡಿರುವುದನ್ನು ಸರಿಯಾಗಿ ಖರ್ಚುಮಾಡಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಎಲ್ಲರ ಅಭಿಪ್ರಾಯಗಳನ್ನು ಸೇರಿಸಿ ಕ್ಷಾಮವನ್ನು ನಿವಾರಣೆ ಮಾಡುವುದನ್ನು ಹೀಗೆ ಎಂದು ಹೇಳಲಿ ?

ಶ್ರೀ ಕಾಗೋಡು ತಿಮ್ಮಪ್ಪ.—ಕ್ಷಾಮ ನಿವಾರಣೆ ಮಾಡತಕ್ಕ ಕೆಲಸಕ್ಕೆ ಹಣ ಇಲ್ಲ, ಕೇಂದ್ರದಿಂದ ಹಣ ಬಂದರೆ ಕೆಲಸ ಮಾಡುವುದಕ್ಕೆ ಸಾಧ್ಯ ಎಂದು ಹೇಳುತ್ತಾರೆ. ಕೇಂದ್ರ ಸರಕಾರ ಎಷ್ಟೆಷ್ಟೋ ವಿಧದಲ್ಲಿ ಹಣವನ್ನು ಖರ್ಚು ಮಾಡುತ್ತಿದೆ. ಇವತ್ತು ಜನಕ್ಕೆ ಕುಡಿಯುವ ನೀರನ್ನು ಒದಗಿ

(ಶ್ರೀ ಕಾಗೋಡು ತಿಮ್ಮಪ್ಪ)

ನಬೇಕು, ವಸತಿ ಒದಗಿಸಬೇಕು, ಮತ್ತು ಜನರಿಗೆ ಕುಡಿಯುವ ಪ್ರಮಾಣದಲ್ಲಿ ಕೆಲಸವನ್ನು ಒದಗಿಸುವುದು ಅತ್ಯಂತ ಜರೂರಾದ ಕೆಲಸವಾಗಿದೆ. ಅದಕ್ಕೆ ಸಾಕಷ್ಟು ಹಣ ನಮ್ಮಲ್ಲಿ ಇಲ್ಲ. ಇಂಥ ಸಂದರ್ಭದಲ್ಲಿ ಇವರ ಮನಸ್ಸು ಯಾವ ಕಡೆಗೆ ಹೋಗಿದೆ ಎಂದರೆ ಬೆಂಗಳೂರಿನ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಪಡಿಸಬೇಕು, ಅದಕ್ಕೆ ದುಡ್ಡು ಬೇಕು. ಮೈಸೂರಿನಲ್ಲಿ ಮಾರ್ಕೆಟ್ ಇಲ್ಲ, ರಸ್ತೆ ಇಲ್ಲ ಆದ್ದರಿಂದ ಅಲ್ಲಿ ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡಿ ಹೊಸ ಮಾರ್ಕೆಟ್ ಕಾಂಪ್ಲೆಕ್ಸ್ ಕಟ್ಟಬೇಕು ಎನ್ನುವ ಕಡೆ ಹೋಗಿದೆ. ಮೈಸೂರಿನಲ್ಲಿ ಉತ್ತಮ ಮಾರ್ಕೆಟ್‌ಗಳು ಇವೆ, ರಸ್ತೆಗಳು ಇವೆ, ಅಲ್ಲಿಯಾವ ಸಾರ್ವಜನಿಕ ಸೌಲಭ್ಯಗಳಿಗೂ ಕೊರತೆ ಇಲ್ಲ. ಅಲ್ಲಿಗೆ ಹಣ ಖರ್ಚು ಮಾಡಬೇಕಾದರೆ. ಕ್ಷಾಮವು ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಮುದ್ದು ಇಲ್ಲವೇ ಎಂದು ಕೇಳುತ್ತಿದ್ದೇನೆ. ಜನರಿಗೆ 20 ಸಾವಿರ ನಿವೇಶನಗಳನ್ನು ಹಂಚಿದ್ದೇವೆ ಎಂದು ಹೇಳಿದ್ದೀರಿ. ಆದರಲ್ಲಿ ಅವರು ಮನೆ ಕಟ್ಟುವುದು ಯಾವಾಗ ? ಸರ್ಕಾರದವರು ನಿವೇಶನ ಕೊಟ್ಟಿದ್ದಾರೆ, ಒಂದು ಮನೆ ಕಟ್ಟಿಕೊಟ್ಟರೆ ನಾವು ವಾಸ ಮಾಡೋಣ ಎನ್ನುವ ಆಸೆಯನ್ನು ನಮ್ಮ ಜನ ಇಟ್ಟುಕೊಂಡು ಕಾಯುತ್ತಾ ಕೂತಿದ್ದಾರೆ. 20 ಸಾವಿರ ಜನಕ್ಕೆ ವಸತಿ ಗೃಹಗಳನ್ನು ನಿರ್ಮಾಣ ಮಾಡಿಕೊಡುವುದಕ್ಕೆ ಇದು ಕೋಟಿ ರೂಪಾಯಿಗಳನ್ನು ತಾವು ಇಲ್ಲಿ ತೆಗೆದಿಟ್ಟಿದ್ದೀರಿ. ಆದರೆ ಮೈಸೂರಿನಲ್ಲಿ ಮಾರ್ಕೆಟ್ ಕಾಂಪ್ಲೆಕ್ಸ್ ಕಟ್ಟುವುದಕ್ಕೆ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ. ಇದು ಅವಾಸ್ತವಿಕ. ಇಂಥ ಖರ್ಚಿನ ಬಾಬುಗಳಿಗೆ ದುಡ್ಡು ಬಿಟ್ಟು ಕೈಹಾಕುವುದಕ್ಕೆ ಹೋಗಬೇಡಿ. ಕ್ಷಾಮ ಪೀಡಿತ ಪ್ರದೇಶದಲ್ಲಿ ಏನು ನೀರಾವರಿ ಯೋಜನೆಯನ್ನು ಕೈಗೊಂಡಿದ್ದೀರಿ ಅದರಲ್ಲಿ ಉಳಿದ ಎರ್ನಾ ಹಣವನ್ನು ಜನರಿಗೆ ವಸತಿ ಗೃಹಗಳನ್ನು ನಿರ್ಮಾಣ ಮಾಡುವುದಕ್ಕೆ ತೊಡಗಿಸಿ. ಮೈಸೂರಿನಲ್ಲಿ, ಬೆಂಗಳೂರಿನಲ್ಲಿ ಆಗಿರತಕ್ಕ ಅಭಿವೃದ್ಧಿ ಸಾಕು, ಜಿಲ್ಲೆರತಕ್ಕೆ ವ್ಯವಸ್ಥೆಯನ್ನು ಹಳ್ಳಿಯ ಭಾಗದಲ್ಲಿ ಇರುವ ವ್ಯವಸ್ಥೆಗೆ ಹೋಲಿಸಿ ನೋಡಿದರೆ ಒಂದು ಅಸಮಾನತೆಯ ಪರಂಪರೆ ಎಲ್ಲಿಗೆ ಹೋಗಿದೆ ಎಂದರೆ, ಜೀವನದಲ್ಲಿ ವ್ಯಕ್ತಿ ವ್ಯಕ್ತಿಯಲ್ಲಿ ಅಸಮಾನತೆ ಹೇಗೆ ಬೆಳೆದು ನಿಂತಿದೆಯೋ ಹಾಗೆ ಆಸ್ಪೃಶ್ಯ ಅಸಮಾನತೆ ಗ್ರಾಮಾಂತರ ಪ್ರದೇಶಗಳಿಗೂ ನಗರ ಪ್ರದೇಶಗಳಿಗೂ ಬೆಳೆದು ನಿಂತಿದೆ. ಈ ಅಸಮಾನತೆಯನ್ನು ಕೊಡೆದು ಹಾಕುವ ದೃಷ್ಟಿಯಿಂದ ನಗರಗಳಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡುವುದನ್ನು ನಿಲ್ಲಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರುವ ಶೇಕಡ 80 ಪ್ರತಿಶತಕ್ಕೆ ಕನಿಷ್ಠವಾದ ಸಾಗರೀಕ ಸೌಕರ್ಯಗಳನ್ನು ಒದಗಿಸಬೇಕಾಗಿದೆ. ನಮ್ಮಲ್ಲಿ 1400 ಮುಖ್ಯ ಗ್ರಾಮಗಳಿಗೆ ಕುಡಿಯುವ ನೀರಿನ ಭಾವಿಗಳನ್ನು ಒದಗಿಸತಕ್ಕ ಸಮಸ್ಯೆ ನಮ್ಮ ಮುಂದೆ ಇದೆ ; ಎಂದು ಹೇಳಿದ್ದೀರಿ ಇವರಲ್ಲಿ ಮುಜರೆ ಗ್ರಾಮ ಗಳನ್ನು ಹೇಳಿಲ್ಲ. ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸತಕ್ಕ ಮೊದ್ದ ಪ್ರಮಾಣದ ಕೆಲಸವಾಗಿ ನಿಂತಿದೆ. ಆ ಕೆಲಸವನ್ನು ನಾವು ಇಲ್ಲಿ ಬಹಳ ಧೀರ್ಘ ಕಾಲದ ವರೆಗೆ ಮಾಡಿ ಎಂದು ಹೇಳಲಾಪಕ್ಕಾಗುವುದಿಲ್ಲ. ಸ್ವಾತಂತ್ರ್ಯ ಬಂದು 25 ವರ್ಷಗಳಾಗಿದೆ, ಕುಡಿಯುವುದಕ್ಕೆ ಸಾಕಷ್ಟು ನೀರು ಪ್ರತಿಯೊಬ್ಬರಿಗಿಲ್ಲಿ ಸಿಕ್ಕುತ್ತದೆ ಎನ್ನುವ ನೆಮ್ಮದಿ ಬರಬೇಕಾಗಿದೆ. 25 ವರ್ಷಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡದೆ ಹೋದರೆ ಈ ದೇಶದಲ್ಲಿ ಹುಟ್ಟಿದ್ದಕ್ಕೂ ಏನು ಪ್ರಯೋಜನ ? ಯಾವ ಸೌಭಾಗ್ಯಕ್ಕಾಗಿ ಈ ದೇಶದಲ್ಲಿ ಜನ್ಮ ಎತ್ತಬೇಕು ? ಇದು ಸ್ವಾಭಾವಿಕವಾಗಿ ಜನತೆಯ ಮನಸ್ಸಿನಲ್ಲಿ ಬರುತ್ತದೆ. ಇಂಥ ಭಾವನೆಗಳು ಜನರ ಮನಸ್ಸಿನಲ್ಲಿ ಬಂದರೆ, 25 ವರ್ಷಗಳಾದ ಮೇಲೂ ಕುಡಿಯುವ ನೀರಿನ ಸೌಲಭ್ಯ ಸಿಕ್ಕಲಿಲ್ಲ ಎಂದರೆ ಇದು ಸ್ವಾಭಾವಿಕವಾಗಿ ಈ ದೇಶಕ್ಕೆ ಅಪಮಾನ ಎಂದು ಹೇಳುತ್ತೇನೆ. ಇಂಥ ಮೂಲಭೂತವಾದ ಸವ ಸ್ಯೆಗಳನ್ನು ಪರಿಹಾರ ಮಾಡುವ ದೃಷ್ಟಿಯಿಂದ ಹೆಚ್ಚು ಹಣವನ್ನು ಗ್ರಾಮಾಂತರ ಪ್ರದೇಶಗಳ ಕಡೆ ತಿರುಗಿಸಬೇಕು ; ಎಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಬರಗಾಲ ಪೀಡಿತ ಪ್ರದೇಶಗಳನ್ನು ನಾನು ನೋಡಿದ್ದೇನೆ, ಸರ್ಕಾರದವರು ಅಲ್ಲಿ ಸ್ವಲ್ಪ ಕಾರ್ಯಕ್ರಮಗಳನ್ನು ತೆಗೆದ ಕೊಂಡಿದ್ದಾರೆ. ಆದರೆ ಅಲ್ಲಿರತಕ್ಕ ಜನರು ಪಟ್ಟಣ ಹೋಗುವುದನ್ನು ನೋಡಿದರೆ, ನಮ್ಮ ಕಾರ್ಯ ಕ್ರಮದ ಪರಿಣಾಮ ಏನಾಗಿದೆ ಎಂದು ಅರ್ಥವಾಗುವುದಿಲ್ಲ. ಇತ್ತೀಚೆಗೆ ಬರಗಾಲ ಪೀಡಿತ ಪ್ರದೇಶದ ನೂರು ಜನ, ಶಾಸಕರ ಭವನದ ಎದುರು ಕೂತಿದ್ದರು. ಅವರು ಯಾದಗಿರಿ ತಾಲ್ಲೂಕಿನವರು ಅವರನ್ನು ನಾನು ಏಕಪ್ಪ ನಿಮ್ಮ ಊರಲ್ಲಿ ಕೆಲಸ ಪ್ರಾರಂಭ ಮಾಡಿಲ್ಲವೇ ಎಂದು ಕೇಳಿದ್ದಕ್ಕೆ ಅವರು ಇಲ್ಲಿ ಯವರೆಗೆ ನಮ್ಮ ಊರಲ್ಲಿ ಎಂಟು ದಿವಸ ಕೆಲಸ ಸಿಕ್ಕಿತ್ತು, ಆನಂತರ ಕೆಲಸ ಸಿಕ್ಕಲಿಲ್ಲ, ಮನೆ ಯಲ್ಲಿರುವ ಹಾನುವಾರುಗಳನ್ನು ಮಾರಾಟ ಮಾಡಿಕೊಂಡು ಇಲ್ಲಿ ಏನಾದರೂ ಕೆಲಸ ಸಿಕ್ಕುತ್ತದೆ ಎಂದು ಹುಡುಕಿಕೊಂಡು ಬಂದಿದ್ದೇವೆ ಎಂದು ಅವರಲ್ಲಿ ಒಬ್ಬನು ಹೇಳಿದ. ಹಾಗಿದ್ದರೆ ತಾವು ಕೆಲಸ ಪ್ರಾರಂಭ ಮಾಡಿರುವುದು ಎಲ್ಲಿ ? ಬಂಡ್ ಹಾಕುವ ಕೆಲಸ

ಎಲ್ಲಿದೆ ? ಅವರು ನಮ್ಮ ಊರಲ್ಲಿ ಬಂದ್ ಹಾಕುವ ಕೆಲಸ ಪ್ರಾರಂಭವಾಗಿಲ್ಲ ಎಂದು ಹೇಳಿದರು. ಒಂದು ವಾರ ಕರೆ ಕೆಲಸ ಕೊಟ್ಟರು, ನಂತರ ನಮ್ಮ ಊರಲ್ಲಿ ಯಾವ ಕೆಲಸವನ್ನೂ ಮಾಡಿಲ್ಲ, ಐದು ಸಾವಿರ ಜನ ಇರತಕ್ಕ ಊರು ಅದು ಎಂದು ಹೇಳಿದರು. ಅಂಥ ಊರಲ್ಲಿ ಇವತ್ತಿನವರೆಗೂ ಯಾವ ಕೆಲಸವನ್ನೂ ಪ್ರಾರಂಭ ಮಾಡಿಲ್ಲ.

ಉಪಾಧ್ಯಕ್ಷರು.—ಆ ಊರಿನ ಹೆಸರು ಏನು ?

ಶ್ರೀ ಕಾಗೋಡು ತಿಮ್ಮಪ್ಪ.— ಯಾದಗಿರಿ ತಾಲ್ಲೂಕು, ರಾಮಸಮುದ್ರ. ಈ ವಿಷಯವನ್ನು ನಾನು ಅವರಿಂದ ಕೇಳಿದ ಮೇಲೆ ಏನು ಸಂಶಯ ಬಂತು ಎಂದರೆ, ಈಗ ನಡೆಯುತ್ತಕ್ಕ ಕೆಲಸ ಎಲ್ಲಿ ನಡೆಯುತ್ತಿದೆ ಎಂದು ? ಹೀಗಾದರೆ ಇವರು ಮಾಡತಕ್ಕ ಕೆಲಸಕ್ಕೆ ಏನಾದರೂ ಒಂದು ಯೋಜನೆ ಇಲ್ಲವೇ ಎನ್ನುವ ಸಂಶಯ ಸ್ವಾಭಾವಿಕವಾಗಿ ಬರುತ್ತದೆ. ಐದು ಸಾವಿರ ಜನ ಇರತಕ್ಕ ಗ್ರಾಮದಲ್ಲಿ ಏನೂ ಕೆಲಸ ಇಲ್ಲ ಅಲ್ಲಿಂದ ಜನ ಬೆಂಗಳೂರಿಗೆ ಕೆಲಸ ಹುಡುಕಿ ಕೊಂಡು ಬರುತ್ತಾರೆ. ಇಂಥ ಪರಿಸ್ಥಿತಿಯ ಬಗ್ಗೆ ನಾವೆಲ್ಲರೂ ಆಲೋಚನೆ ಮಾಡಬೇಕು. ಆದ್ದರಿಂದ ಕ್ಷಾಮ ಪೀಡಿತ ಪ್ರದೇಶದ ಕಾಮಗಾರಿಗಳ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮವನ್ನು ರೂಪಿಸಿಲ್ಲ ಎನ್ನುವುದು ಮುಖ್ಯವಾದುದು. ಒಂದು ಲಕ್ಷ ರೂಪಾಯಿಗಳ ಕೆಲಸವನ್ನು ಒಂದೆರಡು ಊರಲ್ಲಿ ಮಾಡುವುದು, ಇನ್ನೊಂದು ಊರಲ್ಲಿ ಕೆಲಸ ಇಲ್ಲದೆ ಬಿಟ್ಟಿರುವುದು ಶಿಕ್ಷಾರ್ಹವಾಗಿರಬಹುದು. ಆದ್ದರಿಂದ ಕಾಮಗಾರಿಗಳನ್ನು ಮಾಡತಕ್ಕ ಸಂದರ್ಭದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಜನರಿಗೆ ಕೆಲಸ ಕೊಡಬೇಕು, ಎಷ್ಟು ಜನರಿಗೆ ಕೆಲಸ ಕೊಡಬೇಕಾದರೆ ಏನು ಕೆಲಸ ಮಾಡಬೇಕು ಎನ್ನುವ ಸ್ಪಷ್ಟವಾದ ಚಿತ್ರವನ್ನು ರೂಪಿಸಿಕೊಳ್ಳಬೇಕು ಇರುವುದು ಮುಖ್ಯವಾದ ವಿಚಾರ. ಜನರು ಕೆಲಸವಿಲ್ಲದೆ ವಲಸೆ ಹೋಗುವುದನ್ನು ದಯವಿಟ್ಟು ತಪ್ಪಿಸಬೇಕು ಎಂದು ಕೇಳಿಕೊಳ್ಳುತ್ತೇನೆ, ಯಾಕೆಂದರೆ ಒಂದು ಜಾಗದಲ್ಲಿದ್ದರೆ, ಅವರ ಹುಟ್ಟು ಊರಿನ ಮೇಲೆ ಇಲ್ಲದೆ ಇರತಕ್ಕ ಮಮತೆ ಇರುತ್ತದೆ. ಹೊಟ್ಟೆ ಬಟ್ಟೆಗೋಸ್ಕರ ಗಂಟು ಮೂಟೆ, ಮಕ್ಕಳು ಮರಿ ಕಟ್ಟಿ ಕೊಂಡು ಬೇರೆ ಊರಿಗೆ ಹೋಗುವುದು ಬಹಳ ಕಷ್ಟವಾದುದು. ಏನೋ ಒಂದು ಉತ್ತಮವಾದ ವ್ಯವಸ್ಥೆ ಸಿಕ್ಕುತ್ತದೆ ಎನ್ನುವಂತಾದರೆ ಹೊಗೋಣ. ಅವರವರ ಊರಿಂದ ಇಲ್ಲಿಗೆ ಬಂದು ಯಾರ ಕೈಗೋ ಸಿಕ್ಕಿಸಿ ನಾಶವಾಗುವುದಕ್ಕಿಂತ ಇರತಕ್ಕ ಜಾಗದಲ್ಲಿ ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರೆ ಅವರು ಬದುಕುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ ಅದ್ದರಿಂದ ಕ್ಷಾಮ ಪರಿಸ್ಥಿತಿಯನ್ನು ಎದುರಿಸುವಾಗ ರಾಜ್ಯದ ಜನರ ವಿಶ್ವಾಸವನ್ನು ಪಡೆಯಬೇಕು ಎಂದು ಹೇಳುತ್ತೇನೆ. ಕ್ಷಾಮ ಪರಿಸ್ಥಿತಿ ಇಷ್ಟು ದಿವಸ ಉಳಿಯಬಲ್ಲುದು ಎನ್ನುವ ಸ್ಪಷ್ಟವಾದಂಥ ಚಿತ್ರವನ್ನು ನಮ್ಮ ಸರ್ಕಾರ ರೂಪಿಸಿಕೊಳ್ಳಲಿಲ್ಲ. ಇದಕ್ಕೆ ಮುಖ್ಯ ಕಾರಣ ಏನೆಂದರೆ, ಇವರು ಮೊದಲು ಕೇಂದ್ರ ಸರ್ಕಾರವನ್ನು ಈ ಬರಗಾಲ ಪ್ರದೇಶದ ಕಾಮಗಾರಿಗಳಿಗೆ 16 ಕೋಟಿ ರೂಪಾಯಿ ಬೇಕು ಎಂದು ಕೇಳಿದರು, ನಂತರ ಇವರು ಕೇಳಿರತಕ್ಕದ್ದು, 28 ಕೋಟಿ ರೂಪಾಯಿ, ನಂತರ ಕೇಳಿರತಕ್ಕದ್ದು 151 ಕೋಟಿ ರೂಪಾಯಿಗಳು. ಹಂತ ಹಂತದಲ್ಲಿ ಹೇಳುತ್ತಾ ಹೋಗಿದ್ದಕ್ಕೆ ಕಾರಣ ಏನೆಂದರೆ, ಕೇಂದ್ರ ಸರ್ಕಾರದಿಂದ ಏನಾನಯೋಗ ಬಂದಿತ್ತೋ ಅವರು ಹೇಳಿದ್ದು ಪತ್ರಿಕೆಯಲ್ಲಿ ಬಂದಿದೆ. ಈ ಸರ್ಕಾರ ಒಂದೊಂದು ಸಾರಿ ಒಂದೊಂದು ಮಾತು ಹೇಳುತ್ತದೆ ಎಂದು. ಕೇಂದ್ರ ಸರ್ಕಾರಕ್ಕೆ ನಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳತಕ್ಕ ರೀತಿಯಲ್ಲಿ ಕೇಳದೆ ಇರುವುದು ಕಡಿಮೆ ಹಣ ಕೇಂದ್ರ ಸರ್ಕಾರದಿಂದ ಪಡೆಯುವುದಕ್ಕೆ ಆಗಿದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಹೆಚ್ಚು ಹಣವನ್ನು ಕೇಂದ್ರ ಸರ್ಕಾರದಿಂದ ಪಡೆಯುವುದಕ್ಕೆ ಸಾಧ್ಯವಾಗುತ್ತಿತ್ತು. ಆ ಕೆಲಸದಲ್ಲಿ ಸರ್ಕಾರ ಸಾಕಷ್ಟು ಪ್ರಾಮುಖ್ಯವಾದ ಪ್ರಯತ್ನ ಮಾಡಲಿಲ್ಲ. ಎಂದು ಇವತ್ತು ನನ್ನ ಮುಖ್ಯವಾದ ಆಪಾದನೆ. ಸರ್ಕಾರ ಹೇಗೆ ಏಮುಖವಾಗಿದೆ ಎಂದು ತೋರಿಸಿ ಕೊಡಬೇಕಾಗಿದೆ. ನಮ್ಮ ಕ್ಷಾಮ ಪರಿಸ್ಥಿತಿಯ ಮಹತ್ವ ಬಹುಶಃ ನಮ್ಮ ಪ್ರಧಾನ ಮಂತ್ರಿಗಳ ವರೆಗೆ ಕಾಣಲಿಲ್ಲವೋ ಏನೋ ಅಥವಾ ಕರ್ನಾಟಕ ಜನ ಅವರಿಗೆ ಏನು ಅಂಥ ಒಂದು ಅನ್ಯಾಯ ಮಾಡಿದರೋ ನನಗೆ ಗೊತ್ತಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರ ಕಾಲದಿಂದಲೂ ಕರ್ನಾಟಕದ ಜನರಿಗೆ ಅವರು ಬಹಳ ಸಾರಿ ಋಣಿಯಾಗಿರಬೇಕಾಗುತ್ತದೆ. ಆದುದರಿಂದ ಕರ್ನಾಟಕದಲ್ಲಿ ಆಂಥ ಭೀಕರ ಪರಿಸ್ಥಿತಿ ಎಂದರೆ ಪ್ರಧಾನ ಮಂತ್ರಿಗಳು ಬರಗಾಲ ಪ್ರದೇಶಕ್ಕೆ ಬಂದು ನೋಡಿದೆ ಇರತಕ್ಕ ಸೌಜನ್ಯವನ್ನು ನೋಡಿದರೆ ಇದು ನಮ್ಮ ದೌರ್ಬಲ್ಯವನ್ನು ತೋರಿಸುತ್ತದೆ. ಪ್ರಧಾನ ಮಂತ್ರಿಗಳು ನಮ್ಮ ಮೇಲೆ ಇಟ್ಟುಕೊಂಡಿರತಕ್ಕ ವಾತ್ಸಲ್ಯವನ್ನು ತೋರಿಸುತ್ತದೆ ಎಂದು ಹೇಳಲು ಎಡಿಯಿಲ್ಲ. ಇದನ್ನು ಏನಾನ್ನ ಮುಖ್ಯಮಂತ್ರಿಗಳು ಹೇಳಬೇಕು. ನಾನು ಪ್ರಧಾನ ಮಂತ್ರಿಗಳಿಗೆ ಕರ್ನಾಟಕವನ್ನು ಕಡೆಗಣಿಸಿವ್ವಾರೆ ಎಂದು ಇದನ್ನು ಸ್ಪಷ್ಟವಾಗಿ ಬಹಳ ವಿಷಾದದಿಂದ ಹೇಳಿ

(ಶ್ರೀ ಕಾಗೋಡು ತಿಮ್ಮಪ್ಪ)

ಕೊಳ್ಳಬೇಕಾಗಿದೆ. ಯಾರೋ ಮಣಿಪಾರ್‌ನಲ್ಲಿ ಖಾಸಗಿಯವರು ಕಟ್ಟಿಸಿರತಕ್ಕ ಆಸ್ಪತ್ರೆಯನ್ನು ಅದು ಬಹಳ ದಿವಸಗಳ ಹಿಂದೆಯೇ ಕಟ್ಟಿದಂತಹ ಆಸ್ಪತ್ರೆಯನ್ನು ಉದ್ಘಾಟನೆ ಮಾಡಲಿಕ್ಕೆ ಹೋಗಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಅಲ್ಲಿಗೆ ಖಾಸಗಿಯವರು ಔಷಧಿಗೆ ಹೋಗುವುದಿಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ.—ದುಡ್ಡು ತೆಗೆದುಕೊಳ್ಳಬಹುದು. ಆಸ್ಪತ್ರೆಗೆ ಹೋದರೆ ಎಲ್ಲಾ ಲೆಕ್ಕ ಸಿಸ್ಟಮ್ಯಾಟಿಕ್ ಆಗಿ ಇರುತ್ತದೆ. ಅಲ್ಲಿ ಪ್ರತಿಯೊಂದು ಇನ್‌ಜಕ್ಷನ್ ಇರುತ್ತದೆ, ಅನ್ನದ ಇರಾಜೆ, ಹೋಟೆಲ್ ಥರಾ ಇರುತ್ತವೆ ಕೊನೆಗೆ ಒಂದೇ ಒಂದರಲ್ಲಿ ಬಿಲ್ಲು ಬರುತ್ತದೆ. ಅದು ದುಡ್ಡು ಇಡಬೇಕಾದರೆ ಬ್ಯಾಂಕು ಇರುತ್ತದೆ. ಈ ವ್ಯವಸ್ಥೆಯನ್ನು ಪ್ರಧಾನ ಮಂತ್ರಿಗಳು ದೊಡ್ಡದಾಗಿ ಪರಿಗಣಿಸಿದರೇ ಆಥವಾ ಅವರಿಗೆ ತಪ್ಪು ತಿಳಿವಳಿಕೆ ಕೊಟ್ಟರೋ ಗೊತ್ತಿಲ್ಲ. ಏನೇ ಆಗಲಿ ನಾವಿಗೆ ಇರತಕ್ಕ ಕಠಿಣ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ. ಕರ್ನಾಟಕಕ್ಕೆ ಭೇಟಿ ಕೊಡಬೇಕಾಗಿತ್ತು ಅಲ್ಲಿಗೆ ಭೇಟಿ ಕೊಡಬೇ ಇರುವುದು ಕರ್ನಾಟಕದ ಜನರಿಗೆ ನಿರಾಶೆಯಾಗಿದೆ. ಕರ್ನಾಟಕದ ಜನರಿಗೆ ವಂಚನೆ ಮಾಡಿದ್ದಾರೆ. ನಾವು ಈ ಆರೋಪಣೆಯನ್ನು ಪ್ರಧಾನ ಮಂತ್ರಿಗಳಿಗೆ ಹೊರಿಸಬೇಕೇ ಬೇಡವೇ ಎನ್ನುವ ವಿಷಯದಲ್ಲಿ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳಿಗೆ ತಾವು ಬಂದು ನೋಡಲಿಕ್ಕೇ ಬೇಕು ಎಂದು ಸ್ಪಷ್ಟವಾಗಿ ಹೇಳಬೇಕಾಗಿತ್ತು. ನೀವು ಇಲ್ಲದೇ ಹೋದರೆ ಕರ್ನಾಟಕದ ಜನ ದುರ್ಬಲರು ಇಲ್ಲ ಬದುಕುವುದಕ್ಕೆ ನಮ್ಮಲ್ಲಿ ಶಕ್ತಿ ಸಾಮರ್ಥ್ಯ ಇದೆ ಎನ್ನುವ ಮಾತನ್ನು ಸ್ಪಷ್ಟವಾಗಿ ಸರ್ಕಾರ ಅವರಿಗೆ ತಿಳಿಸಿಹೇಳಬೇಕಾಗಿತ್ತು. ಈ ಕೆಲಸ ಮಾಡದೆ ಇದ್ದರೆ ಕರ್ನಾಟಕದ ಜನರಿಗೂ ನಮ್ಮ ಸರ್ಕಾರ ವಂಚನೆ ಮಾಡಿದ ಹಾಗಾಗುತ್ತದೆ. ನಿಮ್ಮ ಪಕ್ಷಕ್ಕೆ ಹೆದರಿ ನಿಂತುಕೊಳ್ಳಬೇಕಾದ ಅಗತ್ಯವಿಲ್ಲ. ಹೆಚ್ಚಿಗೆ ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರತಕ್ಕ ದೊಡ್ಡ ಜವಾಬ್ದಾರಿ ಕರ್ನಾಟಕದ ಜನತೆ ಪರವಾಗಿ ಹೊರಬೇಕು. ನಾಳೆ ನಮ್ಮನ್ನು ಉಳಿಸುವವರಾರೂ ಕರ್ನಾಟಕದ ಜನ. ದೆಹಲಿಯಲ್ಲಿ ಭರತಕ್ಕ ಜನ ಬರುವುದಿಲ್ಲ. ಕರ್ನಾಟಕದ ಜನರನ್ನು ನಂಬಿರುವ ನೀವು ಜನರ ಪರವಾಗಿ ಅವರ ವಿಚಾರವನ್ನು ಹೇಳತಕ್ಕ ಸಂದರ್ಭದಲ್ಲಿ ಹೆದರಬೇಕಾಗಿಲ್ಲ, ಅಂಜಿಕೆ ಪಟ್ಟುಕೊಳ್ಳಬೇಕಾಗಿಲ್ಲ, ನಿರ್ದಾಕ್ಷಿಣ್ಯವಾಗಿ ಹೇಳಬಹುದಾಗಿತ್ತು. ಕೇಂದ್ರಸರ್ಕಾರದ ಧಾಯೆ ರಾಜ್ಯಸರ್ಕಾರಗಳ ಮೇಲೆ ಬೀಳುತ್ತಾ, ನಾವು ದುರ್ಬಲರಾಗುತ್ತಿದ್ದೇವೆ ಅದನ್ನು ತಪ್ಪಿಸಿಕೊಳ್ಳಬೇಕು. ರಾಜ್ಯಸರ್ಕಾರಗಳು ಬಲಿಷ್ಠವಾಗಿ ನಿಲ್ಲತಕ್ಕ ಸಾಹಸ ಮಾಡದೆಹೋದರೆ ಬರುವ ಕಾಲದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಕ್ಷೀಣ ಸ್ಥಿತಿಗೆ ತರುವುದಕ್ಕೆ ಅವಕಾಶವಾಗುತ್ತದೆ ಕೇಂದ್ರ ಸರ್ಕಾರವನ್ನು ಹತೋಟಿಯಲ್ಲಿ ಇಟ್ಟುಕೊಳ್ಳತಕ್ಕಂಥ ದೊಡ್ಡ ಜವಾಬ್ದಾರಿ ಕೂಡ ರಾಜ್ಯಸರ್ಕಾರಗಳಿಗೆ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಪ್ರಜಾಪ್ರಭುತ್ವಕ್ಕೇ ರಾಜ್ಯಪಾಲರು ಅವರ ಭಾಷಣದಲ್ಲಿ ತಿಲಾಂಜಲಿ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಒಂದು ಜವಾಬ್ದಾರಿ ಸರ್ಕಾರದ ಮೇಲೆ ಇರಬೇಕಾಗಿತ್ತೋ ಅದನ್ನು ಜನರಿಗೆ ಬಿಟ್ಟು ಸರ್ಕಾರವನ್ನು ಹಾಗೆ ಬಿಟ್ಟಿದ್ದಾರೆ. ಪುಜೆಗೋಸ್ಕರ ಮೂರ್ತಿ, ಆ ಮೂರ್ತಿರೂಪದಲ್ಲಿ ಸರ್ಕಾರವನ್ನು ಬಿಟ್ಟಿದ್ದಾರೆ. ಸರ್ಕಾರ ಅಪಮಾನತೆಯನ್ನು ತೊಡೆದು ಹಾಕುತ್ತೇವೆಂದು ಹೇಳಿದ್ದಾರೆ. ನಾವು ಹೇಳಬೇಕಲ್ಲ ಎನ್ನುವ ಮಾತನ್ನು ನುಲಭವಾಗಿ ಹೇಳಿ ಸರ್ಕಾರ ತಪ್ಪಿಸಿಕೊಳ್ಳುವ ಜವಾಬ್ದಾರಿ ಸರ್ಕಾರದ ಕೈಯಿಂದ ಆಗಬಾರದು ಎಂದು ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ೨,೫೦೦ ಮೆಗಾವಾಟ್ಸ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬಹುದು ಎಂದು ಅದಕ್ಕೆ ಬೇಕಾದ ಸಂಪನ್ಮೂಲಗಳು ಇವೆ. ಸರ್ಕಾರದವರು ಕೊಟ್ಟಿರತಕ್ಕ ಅಂಕಿ ಅಂತಗಳಿಂದ ನಮಗೆ ಗೊತ್ತಾಗಿದೆ. ನಮ್ಮ ಸರ್ಕಾರದವರು ಕೂಡ ಆ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಎಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತೇವೆ ಎನ್ನುವ ಮಾತನ್ನು ರಾಜ್ಯದ ಜನರಿಗೆ ತಿಳಿಸಬೇಕಾಗಿತ್ತು. ಆ ಮಾತನ್ನು ತಿಳಿಸಲಿಲ್ಲ. ಕಾಳಿನದಿ ಯೋಜನೆ ಪ್ರಾರಂಭವಾಡಿದ್ದಾರೆ ಅದಕ್ಕೆ ಒಂದು ಪವರ್ ಕಾರ್ಪೊರೇಷನ್ ಮಾಡಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಬಡ್ಜೆಟ್ ಭಾಷಣದಲ್ಲಿ ಅದರ ಬಗ್ಗೆ ಹೇಳುವುದಕ್ಕೆ ಅವಕಾಶ ಇದೆ. ಈ ಭಾಷಣದಲ್ಲಿ ಎಲ್ಲವನ್ನೂ ಸೇರಿಸುವುದು ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ.—13 ಕೋಟಿ ರೂಪಾಯಿ ಕಾಳಿ ಯೋಜನೆಗೆ ಕೊಡರಾಗಿದೆ. ಕೇಂದ್ರ ಸರ್ಕಾರ ಇದುವರೆಗೆ 13 ಕೋಟಿ ರೂಪಾಯಿಯನ್ನು ಖರ್ಚು ಮಾಡುವುದಕ್ಕೆ ಅಧಿಕಾರ ಮೈಸೂರು ಫವರ್ ಕಾರ್ಪೊರೇಷನ್‌ಗೆ ಕೊಟ್ಟಿದ್ದಾರೆ. ಅದಕ್ಕೆ ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರನ್ನು ಕೊಡಿಸಿದ್ದಾರೆ. ಅವರು ಪಾಪ ಬೆಂಗಳೂರಿನಲ್ಲಿ ಒಂದು ಮನೆಯಲ್ಲಿ ವಾಸ ಮಾಡಿದರೆ ಸಾಲುವುದಿಲ್ಲ ಎಂದು ಊರಿನಲ್ಲಿರುವ 4-5 ಮನೆಗಳನ್ನು ಬಾಡಿಗೆ ತೆಗೆದುಕೊಂಡು ಕಾಳಿನದಿ ಪ್ರಾಜೆಕ್ಟ್ ಆಫೀಸನ್ನು ಬೆಂಗಳೂರಿನಲ್ಲಿ ನಡೆಸುವುದಕ್ಕೆ ಬದಲು ಪ್ರಾಜೆಕ್ಟ್ ಜಾಗದಲ್ಲಿ ನಡೆಸುವುದು ಒಳ್ಳೆಯದು. ಇಂಥ ಐ.ಎ.ಎಸ್. ಅಧಿಕಾರಿಗಳನ್ನು ಇಟ್ಟುಕೊಂಡರೆ ಅವರು ರೂರ್ ನೋಡುವುದೇ ಆಗುತ್ತದೆ. ಆದುದರಿಂದ ಇವೊತ್ತು ತಜ್ಞರನ್ನು ಆ ಕೆಲಸಕ್ಕೆ ನೇಮಿಸಿ ತಜ್ಞರು ಅವರ ಕೈಕೆಳಗೆ ಇದ್ದರೆ ಬಹಳ ಒಳ್ಳೆಯದು. ಹಿಂದೆ ಇದ್ದಂಥ ತಜ್ಞರನ್ನು ಅವರು ನಾನು ಹೆಚ್ಚು ಅವರು ಹೆಚ್ಚು ಎಂದು ವ್ಯಾಜ್ಯ ಬಂದಮೇಲೆ ಅವರನ್ನು ತೆಗೆದು ಇನ್‌ವೆಸ್ಟಿಗೇಷನ್ ಡಿಪಾರ್ಟ್‌ಮೆಂಟಿಗೆ ಹಾಕಬೇಕು ಎಂದು ತಾವು ಮಾಡಿದ್ದೀರಿ. ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಹಣವನ್ನು ಸಾರ್ಥಕ ಪಡಿಸಿಕೊಳ್ಳುವ ದೃಷ್ಟಿಯಿಂದ ಸಕಾಲದಲ್ಲಿ ಖರ್ಚುಮಾಡುವ ದೃಷ್ಟಿಯಿಂದ ತಜ್ಞರಿಗೆ ಜವಾಬ್ದಾರಿ ಕೊಟ್ಟು ನೇಮಿಸಿ ಎಂದು ಹೇಳುತ್ತೇನೆ.

Sri D. DEVARAJ URS.—The Chair should object to the hon. member making such statement. If he has any doubt with regard to the capacity of spending money properly *vis-a-vis* Government, I would request him to go into the question more deeply; and then only pass a criticism. As far as I know and to my knowledge, we have been not only usefully spending but also we have more than once stated that the Government of India have allowed us to go ahead with the Project and to execute phases One and Two of the Project. And we are now re-drawing the entire schedule of work to finish the Kalinadi Project in the quickest possible time.

ಶ್ರೀ ಕಾಗೋಡು ತಿಮ್ಮಪ್ಪ.—ಆದುದರಿಂದ ತಜ್ಞರಿಗೆ ಜವಾಬ್ದಾರಿ ಕೊಟ್ಟು ಇಡಬೇಕೆಂದು ಕೇಳಿಕೊಳ್ಳುತ್ತೇನೆ.

Sri D. DEVARAJ URS.—Let not the hon. members go with the impression that we are not usefully spending; it is not really so. We are spending and we have been asking the Government of India for enough funds and they are also anxious to see that this Project comes up as quickly as possible ; and they have also promised all financial help to see the Project through.

Mr. DEPUTY SPEAKER.—We have received some amendments to the Motion of Thanks to the Governor's Address and it is deemed that they have been moved. While going through them, it was noticed that one hon, member has given 26 amendments, another member has given 13 amendments, and the third member has given another 13 amendments. This is not the way of moving amenments to the Governor's Address. If at all there are to be amendments to the Governor's Address, they should be on broad policy matters and the amendments should be in hardly one or two words. These amendments are not in appropriate form. This way of giving amendments is resented to. Those who have got certain doubts may get clarifications from the Office. That is my respectfull suggestion.

(MR. DEPUTY SPEAKER)

As ordered by the Chair, the Amenments of Sriyuths: T. R. Shamanna, P. A. Pawashe and N. B. Sirdesai deemed to have been moved, are reproduced below:—

Sri T. R. SHAMANNA (Fort):—

I. The following words shall be added at the end of the Motion: "but regret to note the:

1. failure of the Government in not controlling the abnormal rise in prices of essential commodities which is causing great hardship to the people.

2. failure of the Government in not arranging for proper supply and distribution of cement which is causing great hardship to house building activities of the poorer and middle-class people.

3. failure of the Government in allowing the steel produced by the Bhadravati Iron Works to be sold at higher rate than the Hindustan Steel.

4. failure of the Government is not solving the problem regarding the *busa* supply to cattle owners which has caused great hardship to milk venders and milk consumers.

5. failure of the Government in not taking adequate steps for giving real relief to the people of the drought affected areas of the State.

6. failure of the Government in not giving power-cut exemption to educational institutions running classes in the evenings.

7. failure of the Government in allowing the whole-sale trade in rice and wheat to be a slogan rather than a practical business venture.

8. failure of the Government in not supplying wheat and wheat products in adequate quantities to the domestic consumers.

9. failure of the Government in not taking concrete steps to arrest the steep rise in silk yarn rate which is causing hardship to the poor weavers.

10. failure of the Government in not taking effective and practical steps to make family planning success.

11. failure of the Government in not taking steps to improve and remodel the dwelling huts situated in private lands though the Government has taken steps to improve slums on Government lands.

12. failure of the Government in not solving the site-problem of revenue site-owners who are badly in need of house sites.

13. failure of the Government in stoping house-building loans that was being given by the Housing Board which has caused great hardship to poor and middle-class people.

14. failure of the Government in not giving relief from the mosquito nuisance.

15. failure of the Government in getting and giving State and Central Grants for Cauvery scheme to facilitate water supply Board to reduce water rates.

16. failure of the Government in not solving the unemployment problem of both educated and non-educated people.

17. failure of the Government in not giving quality education to students ;

18. failure of the Government in not bringing amendments to the Corporation Act of Bangalore City Corporation to meet the present civic needs of the people.

19. failure of the Government in not arresting large scale corruption in the administration from top to bottom.

20 failure of the Government in not improving the facilities for bus travelling public in Bangalore City.

21. failure of the Government in not taking steps to get Railway link between Karwar and Hubli.

22. failure of the Government in not helping the Commerce Institutes in the State to get Kannada Typewriters at concession rates.

23. failure of the Government in delaying the introduction of Kannada as administrative language at all levels.

24. failure of the Government in not bringing uniform syllabus of study in all the three Universities of the State.

25. failure of the Government in not giving grant-in-aid to Commerce Institutes in the State.

26. failure of the Government in not taking steps to avoid the inordinate delay in completing the various major irrigation projects in the State.

Sri P. A. PAWASHE (Uchagaon).—

II. The following words shall be added at the end of the Motion. 'but regret to note that the Government has failed :

1. to solve the Maharashtra Mysore Border dispute which is pending for the last 17 years and that this dispute should be solved on the basis of Pataskar Formula, so that no injustice will be caused to the people of both the States.
2. to make a reference to long-term measures for eliminating drought from the drought affected Districts of the State. It deals with only ameliorative and short term measures to tide over the present crisis.
3. to state any thing about the major irrigation projects in progress except that an Administrator has been appointed to expedite the work.
4. to state anything about the Financial help that could be given to the poor people for construction of houses, to whom house sites have been alloted by the Government.
5. to state about the supply of power to pumpsets for agricultural purposes.
6. to make a note of the raising prices of the essential commodities and measures to check them.
7. to suggest any adequate measures to provide employment to the large number of educated and uneducated unemployed persons. The means proposed are inadequate.
8. to give the total number of minor irrigation works approved in the scarcity affected areas and in the non-scarcity areas.
9. to make a note that in Belgaum Taluka there are several rural roads to be constructed.
10. to make a note that in Belgaum Taluka there are certain villages where there is acute scarcity of drinking water.
11. to make a note that there is considerable delay in supplying power to the pumpsets for agricultural purposes in Belgaum Taluka and that the rural electrification programme is also very slow.
12. to make a note that in Belgaum Taluka there are several proposed minor irrigation works, which is approved and undertaken, will help the agriculturists in the area to produce more.
13. to state that in the Marathi speaking border area Marathi should be used as the Official Language.

Sri N. B. SIRDESAI (Khanapur).—

III. The following words shall be added at the end of the Motion : "but regret that the Government has failed :

1. to solve the long standing Border dispute, beween Maharashtra and Mysore and have done great injustice to the Marathi speaking people in the disputed areas.
2. to commence (i) the Upper Malaprabha Irrigation Project at Asoga village in Khanpaur Taluka and (ii) to commence the Project of Diversion of Mahadevi River waters into the Malaprabha River at Asoga village from Kongale village in Khanapur Taluka, in order to provide sufficient employment to the people in the drought hit areas and to extend irrigation facilities to the lands in Khanapur, Belgaum and Bailhongal Taluks.
3. to construct Barrages for storage of waters for irrigation purpose in drought hit areas and nearby Malnad areas.
4. the introduce Kannada as language of administration only in the Kannada speaking areas, excluding tke Marathi speaking areas of disputed border areas, as they are recognised as the bilingual areas.
5. to provide employment to the educated and uneducated people in the State, and especially for people in the Malnad and backward areas.
6. to provide financial aid to the landless for construction of houses along with the housing sites
7. to provide drinking water facilities by sanctioning sufficient number of works under N.R.W.S. schemes in Khanapur Taluka ; though schemes are feasible and urgent.
8. to take up minor irrigation works for the development of Malnad areas like Khanpur Taluka and increase food production.
9. to take up electrification of villages in Malnad areas and extend power supply to I.P. Sets for irrigation of Forest and Malnad areas.
10. to establish and encourage large and medium industries and small and village industries in Khanapur Taluka.
11. to provide compulsory primary education to the children in the age group of 6 to 11 years in Khanapur Taluka, by opening new primary schools and to provide secondary education facilities by opening Government High Schools in Malnad Taluks like Khanapur, where not a single High-School is opened by Government and people are allowed to be taxed by the private Managements.

(SRI N. B. SIRDESAI)

12. to make payments of arrears of emoluments to the Patels, Sandies Mahars and Kolkars, though Government have passed orders to make payment.

13. to sanction sufficient road works under R.C. programmes in Khanapur Taluka.

MR. DEPUTY SPEAKER.—The House now stands adjourned to meet tomorrow at 9 A.M.

The House adjourned at Two Minutes past Six of the Clock to meet again at Nine of the Clock on Saturday the 17th February 1973.